# ನಿನ್ನ ಬದುಕಿಗೆ ನೀನೇ ನಾವಿಕ

ಕನಸುಗಳ ಬೆನ್ನೇರಿ...ಸವಾಲುಗಳ ಸಾಗರ ದಾಟಿ...

**ನವೀನ ಕುಮಾರ್ ಎಚ್. ಎಸ್.**

BlueRose ONE.com
Stories Matter
NewDelhi • London

**BLUEROSE PUBLISHERS**
India | U.K.

Copyright © Naveenakumar H S 2026

All rights reserved by author. No part of this publication may be reproduced, stored in a retrieval system or transmitted in any form or by any means, electronic, mechanical, photocopying, recording or otherwise, without the prior permission of the author. Although every precaution has been taken to verify the accuracy of the information contained herein, the publisher assumes no responsibility for any errors or omissions. No liability is assumed for damages that may result from the use of information contained within.

BlueRose Publishers takes no responsibility for any damages, losses, or liabilities that may arise from the use or misuse of the information, products, or services provided in this publication.

BlueRoseONE.com
Stories Matter
NewDelhi • London

For permissions requests or inquiries regarding this publication, please contact:

BLUEROSE PUBLISHERS
www.BlueRoseONE.com
info@bluerosepublishers.com
+91 8882 898 898
+4407342408967

ISBN: 978-81-6744-058-7

First Edition: September 2026

# ನಾವಿಕನ ನುಡಿ

## "ಅಕ್ಕರ ಲೋಕದ ಅಕ್ಕರೆಯ ಪಯಣ"...

**ಅಕ್ಕಿಯೊಳಗನ್ನವನು ಮೊದಲಾರು ಕಂಡವನು?**
**ಅಕ್ಕರದ ಬರಹಕ್ಕೆ ಮೊದಲಿಗನದಾರು?**
**ಲೆಕ್ಕವಿರಿಸಿಲ್ಲ ಜಗ, ತನ್ನಾದಿಬಂಧುಗಳ,**
**ದಕ್ಕುವುದೆ ನಿನಗೆ ಜಸ?- ಮಂಕುತಿಮ್ಮ**
**-ಡಿ.ವಿ.ಜಿ.**

ಈ ಜಗತ್ತಿನಲ್ಲಿ ಯಾವುದೂ ಸಹ ಹೊಸ ಸೃಷ್ಟಿ ಅಲ್ಲ. ನಾನು ಹೊಸದೇನನ್ನೋ ಸೃಷ್ಟಿಸಿದ್ದೇನೆ, ಸೃಜಿಸಿದ್ದೇನೆ ಎಂದು ಬೀಗಿದರೆ ಅದಕ್ಕಿಂತ ದೊಡ್ಡ ಮೂರ್ಖತನ ಇನ್ನೊಂದಿಲ್ಲ. ದೇಹ ಪೋಷಕವಾದ ಅನ್ನವನ್ನು ಅಕ್ಕಿಯಿಂದ ಮಾಡಬಹುದು ಎಂದು ಮೊದಲು ಕಂಡುಹಿಡಿದವರು ಯಾರು? ಅದೇ ರೀತಿ ನಮ್ಮ ಬಾಳನ್ನು, ನುಡಿಯನ್ನು ಬೆಳಗುವ ಅಕ್ಷರಗಳನ್ನು ಸಂಶೋಧಿಸಿದ ಮಹನೀಯರು ಯಾರು? ಇಂತಹ ಮಹತ್ಕಾರ್ಯಗಳನ್ನು ಮಾಡಿದವರ ಲೆಕ್ಕವನ್ನೇ ಈ ಜಗತ್ತು ಇಟ್ಟಿಲ್ಲ ಎಂದಾದ ಮೇಲೆ ನಾವು ಅಂತಹ ಹೊಸದು ಎನ್ನುವ ಯಾವ ಘನ ಕಾರ್ಯವನ್ನು ಮಾಡಿದ್ದೇವೆ? ಹೀಗಾಗಿ ನನ್ನ ಹೆಸರೇ 'ನವೀನ' ಎಂದಾದರೂ ನಾನು ಹೇಳುವುದೆಲ್ಲಾ ಸಂಪೂರ್ಣ ಹೊಸತು ಎಂದರೆ ನನ್ನಷ್ಟು ದೊಡ್ಡ ಮೂರ್ಖ ಇನ್ನೊಬ್ಬನಿರಲಾರ. ನನ್ನ ಮನೆತನದ ಹೆಸರು ಹೊಸಮನೆ, ನನಗೆ ಬದುಕು ನೀಡಿದ ಊರು ಹೊಸದುರ್ಗ, ಹೀಗೆ ಇಷ್ಟೆಲ್ಲ ಹೊಸತುಗಳ ಜೊತೆಗಿರುವ ಈ 'ಹೊಸ' ಕುಮಾರ ಹೇಳುವುದೆಲ್ಲಾ ಹಳತೇ!

ಏಕೆ ಈ ವಿಚಾರ ಪ್ರಸ್ತಾಪಿಸಿದೆನೆಂದರೆ, ನಮಗೆ ನಮ್ಮ ಬದುಕಿಗೆ ಬೆಳಕಾಗಬಲ್ಲ ವಿಚಾರಗಳು, ಚಿಂತನೆಗಳು, ದರ್ಶನಗಳು ನಮ್ಮೊಳಗೆ ಇರುವ ಹಳೆಯ ಸಂಗತಿಗಳೇ. ಸಮಸ್ಯೆ ಎಂದರೆ ನಮಗೆ ಅವುಗಳ ಇರುವಿಕೆಯ ಬಗ್ಗೆ ಸರಿಯಾಗಿ ಗೊತ್ತಿರುವುದಿಲ್ಲ. "ನಮಗೆಲ್ಲರಿಗೂ ವಿಷಯಗಳು ಗೊತ್ತಿವೆ,ಆದರೆ ಗೊತ್ತಿವೆ ಎಂದು ಗೊತ್ತಿಲ್ಲ!" ಈ ನೆಲೆಯಲ್ಲಿ ನಮಗೆ ಗೊತ್ತಿರುವ ವಿಚಾರಗಳನ್ನು ಹೊಸ ಬಗೆಯಲ್ಲಿ ಹೊಸ ರೀತಿಯಲ್ಲಿ ಆಲೋಚನೆ ಮಾಡುವ ಪ್ರಕ್ರಿಯೆಯೇ ನಮ್ಮ ಮನೋವಿಕಾಸ. ಈ ಪಥದಲ್ಲಿ ನಮಗೆ ಚೈತನ್ಯ ನೀಡುವ, ಸ್ಫೂರ್ತಿ ತುಂಬುವ ವಿಚಾರಗಳನ್ನು ಅಕ್ಷರಗಳಲ್ಲಿ ಹಿಡಿದಿಡುವ ಪ್ರಯತ್ನ ನನಗೆ ಸದಾ ಸಂತಸ ನೀಡುವಂಥಾದ್ದು. ಜೊತೆಗೆ ನಾನೊಬ್ಬ ಹವ್ಯಾಸಿ ವ್ಯಕ್ತಿತ್ವ ವಿಕಸನ ತರಬೇತುದಾರ. ನನ್ನ ಬದುಕಿನ ಅತ್ಯಂತ ಸಂತಸದ ಕ್ಷಣಗಳೆಂದರೆ ನಾನು ಪರಿಣಾಮಕಾರಿಯಾಗಿ ಇಂತಹ ತರಬೇತಿ ಕಾರ್ಯಕ್ರಮಗಳಲ್ಲಿ, ಪಾಲ್ಗೊಂಡ ಶ್ರೋತೃಗಳ ಜೊತೆಗೆ ಸಂವಹನ ಸಂವಾದ ನಡೆಸುವ ಕ್ಷಣಗಳು. ಈ ಸಂವಹನ ಕಲೆ, ನನಗೆ ನನ್ನ ತಂದೆ ಶೃಂಗೇರಿ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದ ದಿವಂಗತ ಎಚ್ ಎಲ್ ಸುಬ್ರಹ್ಮಣ್ಯ ಇವರಿಂದ ಲಭಿಸಿದ್ದು. ನನ್ನ ಎದೆಯಲ್ಲಿ ಅಕ್ಷರ ಪ್ರೀತಿಯ ಹಣತೆಯನ್ನು ಹಚ್ಚಿಸಿದ ಮಹನೀಯರು ಅವರು. ಅವರು ನಮ್ಮನ್ನಗಲಿ ಸುಮಾರು ಮೂರು ದಶಕಗಳು ಸಂದರೂ ಅವರು ಹಚ್ಚಿದ ಎದೆಯ ದೀಪ ಮಾತ್ರ ಎಂದಿಗೂ ಆರದಂತೆ ನನ್ನ ಬದುಕಿಗೆ ಬೆಳಕಾಗಿದೆ. 'ನೀನು ಮಾತನಾಡುವುದನ್ನು ಬರವಣಿಗೆ ರೂಪದಲ್ಲಿ ದಾಖಲಿಸು' ಎಂಬುದು ಅವರ ಆಶಯವಾಗಿತ್ತು. ಈ ನೆಲೆಯಲ್ಲಿ ನನ್ನ ಭಾವನೆಗಳ ಅಕ್ಷರ ರೂಪಾಂತರವನ್ನು ದಾಖಲಿಸುವ ಐದನೇ ಪ್ರಯತ್ನ ಇದು.

2023ರಲ್ಲಿ ಒಮ್ಮೆ ಪ್ರಜಾವಾಣಿಯ ರಾಜಕೀಯ ಬ್ಯುರೋ ಮುಖ್ಯಸ್ಥರಾದ ವೈ ಗ ಜಗದೀಶ್ ರವರ ಕರೆ ನನಗೆ ಬಂತು. 'ನನ್ನ ಬಳಿ ನಿಮ್ಮ ಫೋನ್ ನಂಬರ್ ಇರಲಿಲ್ಲ, ಹೊಸದುರ್ಗದ ಪ್ರಜಾವಾಣಿ ವರದಿಗಾರರ ಬಳಿ ಸಂಗ್ರಹಿಸಿ ಫೋನ್ ಮಾಡುತ್ತಿದ್ದೇನೆ. ನಮ್ಮ ಪತ್ರಿಕೆಯ **ನುಡಿ ಬೆಳಗು** ಅಂಕಣಕ್ಕೆ ವಾರಕ್ಕೊಮ್ಮೆ ಬರೆಯಲು ಸಾಧ್ಯವೇ?' ಎಂದವರು ಕೇಳಿದಾಗ ನನಗೆ ಆಶ್ಚರ್ಯ ಆತಂಕ ಸಂತೋಷಗಳು ಒಟ್ಟಿಗೇ ಆದವು. ಜಗದೀಶ್ ಮೂಲತಃ ಶೃಂಗೇರಿಯವರು, ನಾನು ಓದಿದ ಹೈಸ್ಕೂಲು, ಕಾಲೇಜಿನಲ್ಲಿಯೇ ಓದಿದವರು, ಶಿವಮೊಗ್ಗದಲ್ಲಿ ಪತ್ರಕರ್ತರಾಗಿದ್ದು ನಮ್ಮ ಅಣ್ಣನಿಗೆ ಸ್ನೇಹಿತರಾಗಿದ್ದರು. ನಂತರ ಪ್ರಜಾವಾಣಿ

ಬಳಗ ಸೇರಿದ ಅವರು ಬಹಳ ವಸ್ತುನಿಷ್ಠ ರಾಜಕೀಯ ವಿಶ್ಲೇಷಕರು. ನನಗೆ ಈ ಮೊದಲು ಅವರ ಸಂಪರ್ಕವೇನೂ ಇರಲಿಲ್ಲ. ಫೇಸ್ಬುಕ್ ನಲ್ಲಿ ನನ್ನ ಗೆಳೆಯರಾಗಿದ್ದ ಜಗದೀಶ್ ನಾನು ಅದರಲ್ಲಿ ಹಂಚಿಕೊಳ್ಳುವ ನನ್ನ ಲೇಖನಗಳು, ಭಾಷಣಗಳ ವಿಡಿಯೋಗಳನ್ನು ಗಮನಿಸಿ, ನನಗೆ ಅಂಕಣ ಬರಹದ ಗುರುತರ ಜವಾಬ್ದಾರಿ ಕೊಡುವ ನಿರ್ಧಾರ ಮಾಡಿದ್ದು ನಿಜಕ್ಕೂ ವಿಶೇಷವಾಗಿತ್ತು. ಹೊಸ ಬರಹಗಾರರನ್ನು ನಾಡಿಗೆ ಪರಿಚಯಿಸಬೇಕೆಂಬ ಅವರ ಕಳಕಳಿ ಅಪರೂಪ. ಸಾಧಾರಣವಾಗಿ ಹೆಸರು ಮಾಡಿದವರಿಗೇ ಪತ್ರಿಕೆಗಳು, ಈ ರೀತಿಯ ಅಂಕಣ ಬರಹಕ್ಕೆ ಮಣೆ ಹಾಕುವುದು ಜಾಸ್ತಿ. ವಾಸ್ತವದಲ್ಲಿ ಜೀವನ ನಿರ್ವಹಣೆಗಾಗಿ ಸಾಹಿತ್ಯಕ್ಕೆ ಏನೇನೂ ಸಂಬಂಧಪಡದ ಜೀವ ವಿಮಾ ನಿಗಮದಲ್ಲಿ ಅಭಿವೃದ್ಧಿ ಅಧಿಕಾರಿಯಾಗಿ ಕೆಲಸ ಮಾಡುವ ನಾನು, ನನ್ನೊಳಗೆ ಹಾಸು ಹೊಕ್ಕಾಗಿರುವ ಅಕ್ಷರ ಪ್ರೀತಿಯನ್ನು ಅಭಿವ್ಯಕ್ತಿಸಲು, ಮಾಡುವ ಪ್ರಯತ್ನಗಳೇ ನನ್ನ ಬರಹಗಳು, ಭಾಷಣ, ವ್ಯಕ್ತಿ ವಿಕಸನ ತರಬೇತಿ ಕಾರ್ಯಕ್ರಮಗಳು ಇತ್ಯಾದಿ.

ಇದನ್ನು ಗುರುತಿಸಿ ಪ್ರಖ್ಯಾತ ಪತ್ರಿಕೆಯ ಪ್ರತಿಷ್ಠಿತ ಅಂಕಣವೊಂದರಲ್ಲಿ 'ನೀವು ಬರೆಯಬಲ್ಲಿರಾ?' ಎಂದು ಜಗದೀಶ್ ರವರು ನನ್ನನ್ನು ಕೇಳಿದ್ದು, ನನಗೆ ಹೊಸ ಸವಾಲೊಂದಕ್ಕೆ ನನ್ನನ್ನು ನಾನೇ ಒಡ್ಡಿಕೊಳ್ಳುವ ಸದವಕಾಶದಂತಿತ್ತು. ಹೆಚ್ಚಾಗಿ ವ್ಯಕ್ತಿತ್ವ ವಿಕಸನದ ಚಿಂತನೆಗಳನ್ನು **ಮಂಕುತಿಮ್ಮನ ಕಗ್ಗದ** ನೆಲೆಯಲ್ಲಿ ನಾನು ಮಾಡುತ್ತಿದ್ದೆ. ಇದನ್ನು ಗಮನಿಸಿದ್ದ ಜಗದೀಶ್ ರವರು, 'ನಿಮ್ಮ ಬರಹಗಳಲ್ಲಿ ಬರೀ ಕಗ್ಗವೊಂದಷ್ಟೇ ಅಲ್ಲ, ಪ್ರಸ್ತುತತೆಗೆ ಹತ್ತಿರವಾಗಿರುವ ಕಥೆಗಳು, ನಿದರ್ಶನಗಳು, ಉದಾಹರಣೆಗಳೂ ಸಹ ಇರಲಿ' ಎಂದು ಕಿವಿಮಾತು ಹೇಳಿದ್ದರು. ಈ ನೆಲೆಯಲ್ಲಿ 2023 ಆಗಸ್ಟ್ 14 ನೇ ತಾರೀಖಿನಿಂದ, ಅಗಸ್ಟ್ 12, 2024 ರವರೆಗೆ ಪ್ರಜಾವಾಣಿಯ **'ನುಡಿ ಬೆಳಗು'** ಅಂಕಣದಲ್ಲಿ ಒಂದು ವರ್ಷದ ಕಾಲ, ಪ್ರತೀ ಸೋಮವಾರ ನನ್ನ ಐವತ್ತೆರಡು ಚಿಂತನೆಗಳು ಪ್ರಕಟಗೊಂಡವು. ನನ್ನ ಈ ವಾರ್ಷಿಕ ಜವಾಬ್ದಾರಿ ಸಂಪೂರ್ಣಗೊಂಡ ನಂತರ ಪ್ರಜಾವಾಣಿಯ ಕಾರ್ಯ ನಿರ್ವಾಹಕ ಸಂಪಾದಕರಾದ ಶ್ರೀ ರವೀಂದ್ರಭಟ್ಟ ಅವರು ನನಗೆ ಕಳಿಸಿದ ಅಭಿನಂದನಾ ಪತ್ರದಲ್ಲಿ 'ಯಾರು ಬೇಕಾದರೂ ಬರೆಯಬಹುದು ಎನ್ನುವ ಆತ್ಮವಿಶ್ವಾಸವನ್ನು ಓದುಗರಲ್ಲಿ ಮೂಡಿಸುವಂತೆ ಬರೆದಿದ್ದೀರಿ' ಎಂದು ಉಲ್ಲೇಖಿಸಿದ್ದು ನನಗೆ ನಿಜಕ್ಕೂ ಹೆಮ್ಮೆ ಮೂಡಿಸಿದ ವಿಷಯ. ಏಕೆಂದರೆ ನನ್ನ ಬರವಣಿಗೆಯ ಉದ್ದೇಶವೇ ಇದಾಗಿತ್ತು. ಕೇವಲ ಪಂಡಿತರಿಗಷ್ಟೇ ಅರ್ಥವಾಗುವ

ವಿಷಯಗಳ ಹರಹು, ದಟ್ಟ ಸಾಂದ್ರತೆ, ವಿಜ್ಞಾನದ ವಿದ್ಯಾರ್ಥಿಯಾದ ಹಾಗೂ ಬರಿಯ ಸಾಹಿತ್ಯದ ಪ್ರೇಮಿ, ಓದುಗನಾದ ನನ್ನ ಬಳಿ ಖಂಡಿತ ಇರಲಿಲ್ಲ. ನಾನು ಅಲ್ಲಲ್ಲಿ ಕೇಳಿದ, ಓದಿದ ಸದ್ವಿಚಾರಗಳನ್ನು, ಮನಸ್ಸಿಗೆ ಮುದ ನೀಡುವಂತೆ, ಆ ಕ್ಷಣಕ್ಕೆ ಸರಿಯೆನಿಸುವ ರೀತಿಯಲ್ಲಿ ಬರೆಯುವುದು ನನ್ನ ಶೈಲಿ.

ಇದು ಇನ್ನೊಬ್ಬರ ಬದುಕಿನ ನೋವು ನಲಿವುಗಳಿಗೆ ಇಂಬು ಕೊಡುವಂತಾದರೆ, ಅದಕ್ಕಿಂತ ಹೆಚ್ಚು ಇನ್ನೇನು ಬೇಕು? ನಾಡಿನ ಅತ್ಯುತ್ತಮ ಪತ್ರಿಕೆಯೊಂದರಲ್ಲಿ ನನ್ನ ಮನದ ಮಾತುಗಳನ್ನು ನಿವೇದಿಸಿಕೊಳ್ಳುವುದಕ್ಕೆ ವೇದಿಕೆ ನೀಡಿ, ಬೆನ್ನು ತಟ್ಟಿ ಪ್ರೋತ್ಸಾಹಿಸಿದ **ಪ್ರಜಾವಾಣಿ** ಬಳಗಕ್ಕೆ ನನ್ನ ಮನದಾಳದ ಧನ್ಯವಾದಗಳು. ಆ ಸಂದರ್ಭದಲ್ಲಿ ಕೆಲವು ಕಾರಣಗಳಿಂದ ದೈಹಿಕವಾಗಿ, ಮಾನಸಿಕವಾಗಿ ಸ್ವಲ್ಪ ಹಿನ್ನಡೆಯಲ್ಲಿದ್ದ ನನಗೆ ಈ ಅವಕಾಶ ಒಂದು ಚೇತೋಹಾರಿ ಊರುಗೋಲಿನಂತಾಯಿತು. ಹೀಗಾಗಿ ಈ ಬರಹಗಳು ಬೇರೆಯವರಿಗೆ ಎಷ್ಟರ ಮಟ್ಟಿಗೆ ಪ್ರೇರಣೆ ನೀಡಿತೋ ನಾನರಿಯೆ. ಆದರೆ ನನ್ನ ಮಟ್ಟಿಗಂತೂ ಆ ಕ್ಷಣದಲ್ಲಿ ಅದು ಹೊಸ ಚೈತನ್ಯವನ್ನು ತುಂಬಿದ್ದು ನಿಜ. ಪ್ರತಿ ವಾರದ ಹೊಸ ಬರಹಕ್ಕಾಗಿ ಹೊಸ ಹೊಸ ಸ್ಫೂರ್ತಿದಾಯಕ ಚಿಂತನೆ, ನಿದರ್ಶನಗಳ ಹುಡುಕಾಟಗಳು, ನನ್ನನ್ನು ಮಾನಸಿಕವಾಗಿ ದೈಹಿಕವಾಗಿ ಗಟ್ಟಿಯಾಗಿಸಲು ನೆರವಾದವು. ನನ್ನ ವ್ಯಕ್ತಿತ್ವ ವಿಕಸನದ ತರಬೇತಿಗಳಿಗೂ ಹೊಸ ವಿಚಾರಗಳು ಸಿಕ್ಕಂತಾದವು. ಈ ಲೇಖನಗಳು ಪ್ರಕಟವಾಗುತ್ತಿದ್ದ ಸಂದರ್ಭದಲ್ಲಿ ಅದನ್ನು ಓದಿ ಮೆಚ್ಚಿದವರ ಸಂಖ್ಯೆ ಅಪಾರ. ಇದರಿಂದ ನನಗೆ ಹಲವಾರು ಹೊಸ ಸಹೃದಯೀ ಸ್ನೇಹಿತರು ಸಿಕ್ಕರು. ಹಲವರು 'ಮನಮುಟ್ಟುವಂತೆ ಬರೆಯುತ್ತಿದ್ದೀರಿ, ನಿಮ್ಮ ಲೇಖನಗಳನ್ನು ಸಂಗ್ರಹಿಸಿ ಇಟ್ಟಿದ್ದೇವೆ' ಎನ್ನುವ ಪ್ರೋತ್ಸಾಹದಾಯಕ ಸಂದೇಶಗಳನ್ನು ಕಳಿಸಿ ಬೆನ್ನು ತಟ್ಟಿದರು. ಈ ಸಂದರ್ಭದಲ್ಲಿ ಆಕಾಶವಾಣಿ ಚಿತ್ರದುರ್ಗ ಎಫ್ ಎಂ ಕೇಂದ್ರದ ಕಾರ್ಯಕ್ರಮ ಮುಖ್ಯಸ್ಥರಾಗಿದ್ದ ಶ್ರೀ ರೇಣುಕಾಪ್ರಕಾಶ್ ರವರು, ನನ್ನ ಈ ಲೇಖನಗಳನ್ನು ಓದಿ ಮೆಚ್ಚುಗೆ ಸೂಚಿಸಿ, ತಮ್ಮ ಆಕಾಶವಾಣಿ ಕೇಂದ್ರದಲ್ಲಿ '**ಗೆಲುವಿಗೊಂದು ಸೋಪಾನ**' ಎಂಬ ಶೀರ್ಷಿಕೆಯ ಅಡಿಯಲ್ಲಿ ವ್ಯಕ್ತಿ ವಿಕಸನದ ಕುರಿತಾದ ಇಪ್ಪತ್ತು ರೇಡಿಯೋ ಭಾಷಣಗಳನ್ನು ಮಾಡುವ ಅದ್ಭುತ ಅವಕಾಶವನ್ನು ಸಹ ಮಾಡಿಕೊಟ್ಟರು. ಈ ಎಲ್ಲಾ ಸಹೃದಯರ ಪ್ರೀತಿಪೂರ್ವಕ ಪ್ರತಿಕ್ರಿಯೆಗಳೇ ಈ ಬರಹಗಳನ್ನು ಒಂದು ಪುಸ್ತಕ ರೂಪದಲ್ಲಿ ಹೊರತರಲು ಅತೀ ಮುಖ್ಯ ಕಾರಣ.

ನನ್ನಲ್ಲಿ ಅಕ್ಷರ ಪ್ರೀತಿಯನ್ನು ಮೂಡಿಸಿ, ನನ್ನನ್ನು ಜೀವಂತ ವ್ಯಕ್ತಿಯಾಗಿಸಿದ ನನ್ನ ತಂದೆ, ಶೃಂಗೇರಿಯ ಜೆಸಿಬಿಎಂ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದ, ಎಚ್‌ಎಲ್‌ಎಸ್ ಎಂದೇ ಪ್ರಖ್ಯಾತರಾಗಿದ್ದ ದಿವಂಗತ ಎಚ್ ಎಲ್ ಸುಬ್ರಹ್ಮಣ್ಯರವರಿಗೆ ಈ ಸಂದರ್ಭದಲ್ಲಿ ನನ್ನ ಮನದಾಳದ ಅನಂತ ಪ್ರಣಾಮಗಳು. ಇದು ನನ್ನ ಜೀವನಾನುಭವಗಳ ದಾಖಲೆ. ಬಾಲ್ಯದಿಂದಲೇ ಬದುಕಿನ ಈ ಅನುಭವಗಳನ್ನು ತಿದ್ದಿ ತೀಡಿದ ನನ್ನ ಪ್ರೀತಿಯ ತಾಯಿ ನಾಗರತ್ನಳಿಗೆ ನನ್ನ ಸಾಷ್ಟಾಂಗ ನಮಸ್ಕಾರಗಳು. ನನ್ನ ಬರವಣಿಗೆಯ ಓರೆ ಕೋರೆಗಳನ್ನು ಸದಾ ಗಮನಿಸಿ ಹೇಳುವ, ಸಮಾನ ಚಿಂತನೆಯ ಸಹೋದರ, ಮಂಗಳೂರಿನ ಕರ್ನಾಟಕ ಬ್ಯಾಂಕಿನಲ್ಲಿ ಹಿರಿಯ ಅಧಿಕಾರಿಯಾಗಿರುವ ನಂದಕುಮಾರ್ ಸ್ವತಃ ಒಳ್ಳೆಯ ಬರಹಗಾರ ಹಾಗೂ ನನ್ನ ಬಹುಪಾಲು ಲೇಖನಗಳ ನೇರ ವಿಮರ್ಶಕ. ಅವನ ಅಮೂಲ್ಯ ಸಲಹೆ, ಮಾರ್ಗದರ್ಶನಗಳಿಗೆ ನಾನು ಋಣಿ. ಅದೇ ರೀತಿ ನನ್ನ ಇನ್ನೊಬ್ಬ ಸಹೋದರ, ಉಡುಪಿಯಲ್ಲಿ ವೈದ್ಯನಾಗಿರುವ ಡಾ. ನರೇಂದ್ರ ಕುಮಾರ್ ಸಹ ಒಳ್ಳೆಯ ಓದುಗ. ನಮ್ಮ ನಡುವೆ ನಡೆವ ಹಲವಾರು ಚರ್ಚೆ ಮಾತುಕತೆಗಳನ್ನು ನಾನು ಬರಹವಾಗಿಸಿದ್ದೇನೆ. ಶ್ರಮಜೀವಿಯಾದ ಆತ, ಬೌದ್ಧ ಚಿಂತನೆಗಳಿಂದ ಪ್ರಭಾವಿತನಾದವನು. ಕಠಿಣ ಪರಿಶ್ರಮಕ್ಕೆ ಆತ್ಮವಿಶ್ವಾಸಕ್ಕೆ ನಾನು ಹಲವೆಡೆಗಳಲ್ಲಿ ಉದಾಹರಣೆಯಾಗಿ ಹೇಳುವ ಈ ನನ್ನ ಸಹೋದರನಿಗೂ ಸಹ ನನ್ನ ಪ್ರೀತಿಯ ಧನ್ಯವಾದಗಳು.

**ಬಂಧನವದೇನಲ್ಲ ಜೀವ ಜೀವ ಪ್ರೇಮ.. ಒಂದೆನಿಲೆ, ಜೀವವರೆ.. ಬೆರೆತರಳೆ ಪೂರ್ಣ.. ದಂದುಗವನರೆಗೈದು ಸಂತಸವನಿಮ್ಮಡಿಪ ಬಾಂಧವ್ಯ ದೈವ ಕೃಪೆ- ಮಂಕುತಿಮ್ಮ** ಎಂಬ ತಿಮ್ಮಗುರುವಿನ ಮಾತಿನಂತೆ, ದಾಂಪತ್ಯವೆನ್ನುವುದು ಬಂಧನವಲ್ಲ, ಎರಡು ಜೀವಗಳ ಪ್ರೇಮ. ನಾವೊಬ್ಬರೇ ಇದ್ದರೆ ಅರ್ಧ ಮಾತ್ರ.. ಬೆರೆತು ಅರಳಿದಾಗ ಮಾತ್ರ ಬದುಕು ಪರಿಪೂರ್ಣ. ಹೀಗಿದ್ದಾಗ ನಾವು ಅನುಭವಿಸುವ ಕಷ್ಟಗಳು ಹಂಚಿಕೆಯಾಗುತ್ತವೆ, ನಮ್ಮ ಸಂತಸ ಇಮ್ಮಡಿಯಾಗುತ್ತದೆ ಎನ್ನುವ ಈ ಚಿಂತನೆಗೆ ಜ್ವಲಂತ ಉದಾಹರಣೆಯಂತಿರುವ ಹಾಗೂ ನನ್ನೆಲ್ಲಾ ಲೇಖನಗಳ ಮೊದಲ ಓದುಗಳಾದ ನನ್ನ ಧರ್ಮಪತ್ನಿ ರೇಖಾಳಿಗೆ ನಾನು ಚಿರಋಣಿ. ನನ್ನ ಲೇಖನಗಳು ಪ್ರಕಟವಾದಾಗ ನನಗಿಂತ ಹೆಚ್ಚು ಸಂಭ್ರಮಿಸುವವಳು ಈಕೆಯೇ. ಇದೇ ಮಾತು ನನ್ನಿಬ್ಬರು ಮಕ್ಕಳಾದ ಸುಶ್ರಾವ್ಯ ಹಾಗೂ ನಲ್ಮೆಗೂ ಅನ್ವಯಿಸುತ್ತದೆ. ನಾನೇನೇ ಬರೆದರೂ, ಎಲ್ಲೇ

ಮಾತನಾಡಿದರೂ 'ಬಹಳ ಚೆನ್ನಾಗಿತ್ತಪ್ಪಾ' ಎಂದು ಮನದಾಳದಿಂದ ಅಭಿನಂದಿಸುವ ಮುಗ್ಧೆ, ನನ್ನ ಮೊದಲ ಮಗಳು ಸುಶ್ರಾವ್ಯ. ಹಾಗೆಯೇ ಚಿಕ್ಕ ವಯಸ್ಸಿನಲ್ಲಿಯೇ ನನ್ನ ಹಾಗೆಯೇ ಸಾಹಿತ್ಯಾಸಕ್ತಿ ಮೂಡಿಸಿಕೊಳ್ಳುತ್ತಿರುವ ನನ್ನ ಚಿಕ್ಕಮಗಳು ನಲ್ಮೆಯ ಕುರಿತು ನನಗೆ ವಿಶೇಷ ಹೆಮ್ಮೆ.. ನನ್ನ ತಂದೆ ನನ್ನ ಎದೆಯಲ್ಲಿ ಹಚ್ಚಿದ ಈ ಅಕ್ಷರ ದೀಪವನ್ನು ನಮ್ಮ ಮನೆಯಲ್ಲಿ ಈಕೆ ಬೆಳಗಿಸುತ್ತಾಳೆ ಎಂಬ ಭರವಸೆ ನನ್ನದು. ಹಾಗೆಯೇ ನನ್ನೆಲ್ಲ ಚಟುವಟಿಕೆಗಳನ್ನು ಸದಾ ಪ್ರೀತಿಯಿಂದ ಗಮನಿಸಿ, ಹಾರೈಸುವ ನನ್ನ ಅತ್ತೆ ಮಾವರಾದ ಶ್ರೀಮತಿ ಕನಕ ಹಾಗೂ ಶ್ರೀಯುತ ಕೆ ಪಿ ಕೃಷ್ಣಮೂರ್ತಿ ಇವರಿಗೂ ನನ್ನ ಗೌರವಪೂರ್ವಕ ಪ್ರಣಾಮಗಳು.

ಹಾಗೆಯೇ ಈ ಪುಸ್ತಕವನ್ನು ಪ್ರಕಟಿಸುವಲ್ಲಿ ಆಸಕ್ತಿ ತೋರಿದ ನವದೆಹಲಿಯ ಬ್ಲೂರೋಸ್ ಪಬ್ಲಿಷರ್ಸ್‌ನ ಮುದ್ರಣ ತಂಡಕ್ಕೆ ನಾನು ಮನದಾಳದ ಧನ್ಯವಾದಗಳು ಸಲ್ಲಿಸುತ್ತೇನೆ. ಬಹಳ ವೃತ್ತಿಪರವಾದ ಮುದ್ರಣ ಸಂಸ್ಥೆ ಇದು. ಈ ಪ್ರಕಾಶನದಡಿಯಲ್ಲಿ ತಮ್ಮ ಹಲವಾರು ವಿಶೇಷ ಪುಸ್ತಕಗಳನ್ನು ಪ್ರಕಟಿಸಿರುವ, ನನ್ನ ಮಂಗಳೂರು ಮೀನುಗಾರಿಕಾ ಕಾಲೇಜಿನ ಸಹಪಾಠಿ ಹಾಗೂ ಅದೇ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿರುವ ಸನ್ಮಿತ್ರ ಡಾ. ಶಿವಕುಮಾರ್ ಮಗದ ನನ್ನ ಪುಸ್ತಕವನ್ನು ಈ ಪ್ರಕಾಶನದಡಿಯಲ್ಲಿ ಹೊರತರಲು ವಿಶೇಷ ಮಾರ್ಗದರ್ಶನ ನೀಡಿದ್ದಾರೆ. ಕಾಲೇಜು ದಿನಗಳಿಂದಲೂ ನನ್ನ ಸಾಹಿತ್ಯ ಪಯಣದ ಒಡನಾಡಿಯಾಗಿರುವ ಡಾ. ಮಗದ ಇತ್ತೀಚಿನ ದಿನಗಳಲ್ಲಿ ಇಂಗ್ಲೀಷಿನಲ್ಲಿ ಬರೆಯುತ್ತಿರುವ ಪರಿ ಬೆರಗು ಮೂಡಿಸುವಂಥದ್ದು. ಸದಾ ಕ್ರಿಯಾಶೀಲರಾಗಿರುವ ಡಾ.ಮಗದ ಈ ಪುಸ್ತಕಕ್ಕೆ ಬೆನ್ನುಡಿಯನ್ನು ಬರೆದು, ಇದರ ಮೆರಗು ಹೆಚ್ಚಿಸಿದ್ದಾರೆ. ಈ ಪುಸ್ತಕಕ್ಕೆ ಸೂಕ್ತವೆನಿಸುವ ಶೀರ್ಷಿಕೆ ಸೂಚಿಸಿ, ಅರ್ಥಪೂರ್ಣವಾದ ಮುಖಪುಟ ವಿನ್ಯಾಸವನ್ನೂ ಮಾಡಿಕೊಟ್ಟಿರುವ ಶಿವಕುಮಾರ್‌ರವರಿಗೆ ನನ್ನ ವಿಶೇಷ ಧನ್ಯವಾದಗಳು. ನನ್ನ ಬರಹಗಳನ್ನು ಓದಿ, ಚಟುವಟಿಕೆಗಳನ್ನು ಗಮನಿಸಿ ಬೆನ್ನು ತಟ್ಟುವ ನನ್ನೆಲ್ಲಾ ವೃತ್ತಿ ಬಾಂಧವರ, ಬಂಧು ಬಾಂಧವರ, ಅಸಂಖ್ಯಾತ ಸ್ನೇಹಿತ ವರ್ಗದ ಪ್ರೀತಿಯ ಋಣಭಾರ ನನ್ನ ಮೇಲಿದೆ. ಅವರೆಲ್ಲರನ್ನೂ ಈ ಸಂದರ್ಭದಲ್ಲಿ ಮನದಾಳದಿಂದ ನೆನೆಯಬೇಕಾದ್ದು ನನ್ನ ಆದ್ಯ ಕರ್ತವ್ಯ.

ಅಂದಹಾಗೆ ಇದು ಅಕ್ಕರ ಲೋಕದ ಅಕ್ಕರೆಯ ಪಯಣ..ನಮ್ಮ ಬಾಳ ನೌಕೆಯ ನಾವಿಕರಾದ ನಾವು ಸಾಗಲೇ ಬೇಕಾದ ಬಾಳೆಂಬ ಅನಂತ ಶರಧಿಯ ಪಯಣಕ್ಕೆ ಹುಮ್ಮಸ್ಸು ತುಂಬುವ ಕೆಲ ಹುರುಪಿನ ನುಡಿಗಳು ಇಲ್ಲಿವೆ.ಈ ನುಡಿಗಳನ್ನು ಮನಕ್ಕಿಳಿಸಿಕೊಂಡು, ಕೊನೆಯಿರದ ಬಾಳ ಪಯಣದಲ್ಲಿ ನಮ್ಮೊಳಗಿರುವ ಬೆಳಕನ್ನೇ ದೀವಿಗೆಯನ್ನಾಗಿಸಿಕೊಂಡು ಸಾಗಲು ಈ ಪುಸ್ತಕ ನೆರವಾದರೆ ಅದೇ ಈ ಪರಿಶ್ರಮದ ಸಾರ್ಥಕತೆ..

**ನವೀನ ಕುಮಾರ್ ಎಚ್. ಎಸ್.**

ಹೊಸದುರ್ಗ

27-06-2026

# ಮುನ್ನುಡಿ

## “ಅತ್ತ ದೀಪ ಭವ, ಭವಕ್ಕೆ ಭವಿತವ್ಯದ ಕುಸುರಿ”

**“ಮಾತೆಂಬುದು ಜ್ಯೋತಿರ್ಲಿಂಗ, ಸ್ವರವೆಂಬುದು ಪರತತ್ವ”** ಎನ್ನುತ್ತಾರೆ, ವಚನಕಾರ ಅಲ್ಲಮಪ್ರಭು. ಸಕಲ ಪ್ರಭೆಯನ್ನು ಹೊರಸೂಸಿ, ಸುತ್ತಲ ಕತ್ತಲೆಯನ್ನು ನಿವಾರಿಸುವ ‘ಜ್ಯೋತಿರ್ಲಿಂಗ’ದಂತೆ ಮಾತುಗಳಿರಬೇಕು; ಶಬ್ಧಮೂಲದಿಂದ ಹೊರಡುವ ಸ್ವರವು ಪರತತ್ವವನ್ನು, ಅಂದರೆ ದಿವ್ಯಶಕ್ತಿಯನ್ನು ಒಳಗೊಂಡಿರಬೇಕು ಎನ್ನುವುದು ಇದರ ವಾಚ್ಯಾರ್ಥ. ಮಾತಿಗೆ ಅಂತಹ ಕಸುವು ಇದ್ದರಷ್ಟೇ ಹೊರಗಿನ ಕತ್ತಲೆಯ ಜತೆಗೆ, ಒಳಗಿನ ಕತ್ತಲನ್ನು ಭೇದಿಸುವ ಬೆಳಕಿನಂತೆ ನುಡಿ ಬೆಳಗತೊಡಗುತ್ತದೆ.

**‘ಪ್ರಜಾವಾಣಿ’**ಯ ದೈನಂದಿನ ಹಾಗೂ ಜನಪ್ರಿಯ ಅಂಕಣಗಳಲ್ಲಿ ಒಂದಾದ **‘ನುಡಿಬೆಳಗು’** ಇಂತಹದೇ ಆಶಯವನ್ನು ತನ್ನೊಳಗೆ ಹುದುಗಿಸಿಕೊಂಡಿದೆ. ಅಂಕಣ ಆರಂಭಗೊಂಡ ಆರಂಭಿಕ ದಿನಗಳಲ್ಲಿ ಇದರಲ್ಲಿ ಪ್ರತೀ ವಾರವೂ ಅವಿತರವಾಗಿ ಬರೆದು, ಅಪಾರ ಮೆಚ್ಚುಗೆ ಗಳಿಸಿಕೊಂಡವರು, ಎಚ್.ಎಸ್. ನವೀನಕುಮಾರ್ ಹೊಸದುರ್ಗ. ನಮ್ಮ ಬಾಳನೌಕೆಗೆ ನಾವೇ ನಾವಿಕರು. ಈ ಭವಸಾಗರದಲ್ಲಿ ನಾವೇ ನಮ್ಮ ದೋಣಿಗೆ ಹುಟ್ಟು ಹಾಕಬೇಕು. ಶಿಕ್ಷಣದಲ್ಲಿ ಮೀನುಗಾರಿಕಾ ಪದವೀಧರರಾದ ನವೀನಕುಮಾರ್‌ರವರು ವೃತ್ತಿಯಲ್ಲಿ ಜೀವವಿಮಾನಿಗಮವೆಂಬ ಬೃಹತ್ ಸಾಗರದಲ್ಲಿ ಈಜುತ್ತಿದ್ದಾರೆ. ಆದರೆ ಪ್ರವೃತ್ತಿಯಲ್ಲಿ ವ್ಯಕ್ತಿ ವಿಕಸನ ತರಬೇತುದಾರರು ಹಾಗೂ ಬರಹಗಾರರಾದ ಅವರು ತಮ್ಮ ಅಧ್ಯಯನ, ಅನುಭವಗಳ ಮೂಸೆಯಲ್ಲಿ ಮೈದಳೆದು, ಪ್ರಜಾವಾಣಿಯ **ನುಡಿ ಬೆಳಗು** ಅಂಕಣದಲ್ಲಿ ಬೆಳಕಾಗಿ ಮೂಡಿದ ಬರಹಗಳನ್ನು ಸಂಗ್ರಹಿಸಿ **“ನಿನಗೆ ನೀನೇ ನಾವಿಕ”** ಎಂಬ ಹೊತ್ತಿಗೆಯಾಗಿಸಿ, ಅದನ್ನು ಸಾರಸ್ವತ ಲೋಕದ ಸಾಗರದಲ್ಲಿ ತೇಲಿ ಬಿಡುತ್ತಿದ್ದಾರೆ. ಯಾವುದೇ ಒಂದು ಬರಹವು ತನ್ನಿಂತಾನೇ ಓದುಗರನ್ನು ಆಕರ್ಷಿಸಿ, ಅವರ ಒಳಗಣ್ಣು ತೆರೆಯಿಸಬೇಕು. ಅದರ ಜತೆಗೆ, ಆಪತ್ಕಾಲದಲ್ಲೋ,

ನೋವಿನ ಹುಂಡಿಯಲ್ಲೋ ಇದ್ದೇವೆಂದು ಭಾವಿಸಿಕೊಳ್ಳುವ ಜನಪದರಿಗೆ ಸಾಂತ್ವನದ ಮುಲಾಮು ಆಗಬೇಕು. ಅಯಾಚಿತವಾಗಿ ಬಂದೊದಗುವ ಸಂದರ್ಭ, ಆರ್ಥಿಕ ಹಳವಂಡಗಳು, ಕೌಟುಂಬಿಕ ಕ್ಲೇಶಗಳು, ದೈಹಿಕ ಬೇನೆಗಳಿಂದ ಬೇಯುವ ಜೀವಿಗಳಲ್ಲಿ ಹೊಸ ಕನಸು ಮೊಳೆಸಿ, ಹೊಸಹುಟ್ಟಿನ ಕಡೆಗೆ ಸಾಗಲು ಇಂಬುಕೊಡುವಲ್ಲಿ ಈ ಕೃತಿಯಲ್ಲಿನ ಪ್ರತಿಯೊಂದು ಬರಹಗಳು ಸಾಲುದೀಪಗಳಂತಿವೆ. ಒಂದು ದೀಪದಿಂದ ಮತ್ತೊಂದು ದೀಪಕ್ಕೆ ಹೋಗುವಷ್ಟರಲ್ಲಿ ಕಾಲದ ಕತ್ತಲೆ ಕಳೆದು, ಸೂರ್ಯನ ಕಿರಣಗಳು ಹೊಮ್ಮಲಾರಂಭಿಸಿದ ಅನುಭವಕ್ಕೆ ತೆರೆದುಕೊಳ್ಳಲು ಇಂಬು ನೀಡುತ್ತವೆ, ಇಲ್ಲಿನ ಬರಹಗಳು.ಇವು ಜೀವನವೆಂಬ ಉಬ್ಬರವಿಳಿತದ ಕೊನೆಯಿರದ ಕಡಲಿನಲ್ಲಿ, ಬದುಕಿನ ದೋಣಿ ನಡೆಸಲೇ ಬೇಕಾದ ನಾವಿಕರ ಆತ್ಮವಿಶ್ವಾಸ ಹೆಚ್ಚಿಸುವ ಚೇತೋಹಾರೀ ಹಾಡಿನ ಸಾಲುಗಳಂತಿವೆ. ಕೀಳರಿಮೆಯನ್ನು ಕಿತ್ತುಹಾಕಿ, ಯಶಸ್ಸಿನತ್ತ ಹೆಜ್ಜೆ ಹಾಕುವ ಹುಮ್ಮಸ್ಸು ನೀಡುವ ಶಕ್ತಿ ಇಲ್ಲಿನ ಕಿರು ಬರಹಗಳಲ್ಲಿ ಮೈದಾಳಿದೆ. ನೈರಾಶ್ಯದ ಕೊಂಪೆಗೆ ಬಿದ್ದು ಕುಗ್ಗಿ ಹೋಗಿರುವವರನ್ನು ಮೇಲೆತ್ತುವ ಬೆಳಕಿನ ಏಣಿಯಂತಿದೆ, ಈ ಹೊತ್ತಿಗೆ.

ಅದಕ್ಕಾಗಿಯೇ, ಲೇಖಕರು ತಮ್ಮ ಅಗಾಧ ಅಧ್ಯಯನ ಫಲದಿಂದ ದಕ್ಕಿದ ಹಲವು ಪುಟ್ಟ ನೀತಿಕಥೆಗಳನ್ನು ಸಮರ್ಥವಾಗಿ ತಮ್ಮ ಲೇಖನಗಳಲ್ಲಿ ಬಳಸಿಕೊಂಡಿದ್ದಾರೆ. ಈ ಕಥೆಗಳನ್ನು ಅವರು ನಿರೂಪಿಸುವ ಶೈಲಿ, ವೇದಾಂತದ ಪರಿಭಾಷೆಯಲ್ಲಿ ಇಲ್ಲದೇ, ಓದುಗನೇ ತನ್ನೊಳಗೆ ಬಿಟ್ಟುಕೊಳ್ಳುವ ಹೊಳಪಿನ ಅಕ್ಷರಗಳ ಮಾದರಿಯಲ್ಲಿವೆ. ಅದಕ್ಕಾಗಿ, ಅವರು ಸೂಫೀಸಂತ ಮುಲ್ಲಾ ನಸರುದ್ದೀನ್, ವಿಂಬಲ್ಡನ್ ಗೆದ್ದ ಆರ್ಥರ್ ಆಶ್, ಜಪಾನಿನ ಸಮುರಾಯ್, ಕ್ರಿಕೆಟಿಗ ರಾಹುಲ್ ದ್ರಾವಿಡ್, ಕ್ಯಾನ್ಸರ್‌ನಿಂದ ಬಳಲುತ್ತಿದ್ದ ರಾಂಡಾಲ್ಫ್ ಫ್ರೆಡ್ರಿಕ್ ಪಾಶ್ ಹೀಗೆ ಹಲವರ ಅನುಭವ ಕಥನಗಳನ್ನು ಹೇಳುತ್ತಲೇ, ಅವರೆಲ್ಲರ ಸಾಧನೆಯ ಗರಿಮೆಯನ್ನು ಕಟ್ಟಿಕೊಡುತ್ತಾರೆ. ನೋವುಗಳನ್ನು ಹೆಡೆಮುರಿ ಕಟ್ಟಿ, ಗುರಿ ಶಿಖರವನ್ನೇರಿದ ಮಹನೀಯರನ್ನು ತಮ್ಮ ಪುಟ್ಟಬರಹದಲ್ಲಿ ಪೋಣಿಸುವ ಶೈಲಿ ಅವರಿಗೆ ಕರಗತವಾಗಿದೆ. ಬಹುಶಃ ಸುದೀರ್ಘ ವರ್ಷಗಳ ಕಾಲ 'ವ್ಯಕ್ತಿತ್ವ ವಿಕಸನ' ಶಿಬಿರಗಳನ್ನು ನಡೆಸಿಕೊಟ್ಟ ಅವರ ಮಾತಿನ ವೈಖರಿ ಇಲ್ಲಿ ಅಕ್ಷರ ರೂಪ ಪಡೆದಿದೆ. ವ್ಯಕ್ತಿತ್ವ ವಿಕಸನ ಶಿಬಿರಗಳಲ್ಲಿ ಅವರು ಶ್ರೋತೃಗಳ ಜತೆ ಸಂವಹನ-ಸಂವಾದ ನಡೆಸುವ ಮಾದರಿಯೊಳಗೆ ಇಲ್ಲಿ, ಓದುಗನ ಜತೆಗೂ ಸರಳ ಸಂವಾದ

ನಡೆಸುತ್ತಾರೆ. ಈ ಬರಹಗಳಲ್ಲಿ ಯಾವುದೋ ವ್ಯಕ್ತಿಯ ಚಿತ್ರಣಕ್ಕೆ ಮಾತ್ರ ಸೀಮಿತರಾಗದ ಲೇಖಕರು, ಪಂಚತಂತ್ರದ ಕತೆಗಳು, ತತ್ವಜ್ಞಾನಿಯೊಬ್ಬನ ಪ್ರಸಂಗ, ಡಿವಿಜಿಯವರ ಮಂಕುತಿಮ್ಮನ ಕಗ್ಗದ ಸಾಲುಗಳನ್ನು ತಮ್ಮ ಬರಹಕ್ಕೆ ಪೂರಕವಾಗಿ ದುಡಿಸಿಕೊಂಡಿದ್ದಾರೆ.

ಮಕ್ಕಳನ್ನು ಶೈಕ್ಷಣಿಕ ಪ್ರವಾಸಕ್ಕಾಗಿ, ಮೃಗಾಲಯಕ್ಕೆ ಕರೆದುಕೊಂಡು ಹೋಗುವ ಪ್ರಸಂಗವೊಂದು ಇಲ್ಲಿನ ಬರಹವೊಂದರಲ್ಲಿದೆ. ಗುಹೆಯಾಕಾರದ ಒಂದು ಕೋಣೆಯ ಮುಂದೆ 'ಈ ಪ್ರಪಂಚದ ಕ್ರೂರ ಪ್ರಾಣಿ' ಎಂದು ಬರೆದಿರಲಾಗಿರುತ್ತಿದೆ. ಒಳಗೆ ಇಣುಕಿ ನೋಡಿದರೆ ಪಂಜರದ ಹಿಂದೆ ದೊಡ್ಡ ಕನ್ನಡಿ ಅಷ್ಟೇ ಇತ್ತು ಎಂದಷ್ಟೇ ಬರೆದಿದ್ದಾರೆ. ಇದನ್ನು ಓದಿದಾಗ ಫಳಕ್ಕನೆ ಒಂದು ಹೊಳಹು ಚಿಮ್ಮಿ, ನಗೆಯ ಜತೆಗೆ ಪ್ರಾಣಿ ಪ್ರಪಂಚದಲ್ಲಿ ನಾವೆಷ್ಟು ಕ್ರೂರಿಗಳು ಎಂಬ ಸತ್ಯದರ್ಶನವೂ ಆಗಿಬಿಡುತ್ತದೆ. ಇನ್ನೊಬ್ಬರ ನಂಬಿಕೆಯನ್ನು ಕುಸಿಯುವ ಕೆಲಸವನ್ನು ಸಮಾಜದಲ್ಲಿ ಹಲವರು ಮಾಡುತ್ತಲೇ ಇರುತ್ತಾರೆ. ಮೇಲುಮೇಲಕ್ಕೆ ಹೋಗುವವರನ್ನು ಏಡಿಗಳಂತೆ ಹಿಡಿದೆಳೆಯುವ ಕಾಯಕವೂ ಕೆಲವರಿಗೆ ವ್ರತವಾಗಿ ಬಿಡುತ್ತದೆ. ಇಂಥವರ ಸಂಗಡ ಏಗಲಾಗದೇ ಪಡಿಪಾಟಲಿಗೆ ಸಿಕ್ಕವರಿಗೆ ಧೈರ್ಯ ತುಂಬುವ ಕಥೆ, 'ಮೂಗು ತೂರಿಸುವ ಮುನ್ನ ಎಚ್ಚರವಿರಲಿ' ಎಂಬ ಬರಹದಲ್ಲಿ ಇದೆ.

ಜೀವನದಲ್ಲಿ ತನಗೆ ಅಪಮಾನವಾಗಿದ್ದರೂ ಪ್ರತಿಭೆಯನ್ನು ಗುರುತಿಸಬೇಕೆಂಬ ನಮ್ಮಲ್ಲಿರಬೇಕಾದ ಔದಾರ್ಯವನ್ನು ಅಬ್ರಹಾಂ ಲಿಂಕನ್ ಅವರಿಗೆ ಸಂಬಂಧಿಸಿದ ಬರಹವೊಂದು ಬಿನ್ನವಿಸುತ್ತದೆ. 'ಶತ್ರುವಿನ ಸಾಮರ್ಥ್ಯವನ್ನು ಗುರುತಿಸುವುದೇ ನಿಜದ ನಾಯಕತ್ವ' ಶೀರ್ಷಿಕೆಯಡಿ, ಚೆಂದದ ಘಟನೆಯನ್ನು ಲೇಖಕರು ಹೆಣೆದುಕೊಟ್ಟಿದ್ದಾರೆ. ನಾಯಕತ್ವ ಬೇಕೆಂದಾಗ ಬರುವುದಿಲ್ಲ, ಬಂದಾಗ ನಿಜದ ನಾಯಕತ್ವ ಹೇಗಿರುತ್ತದೆ, ಹೇಗಿರಬೇಕು ಎಂಬುದು ಬರಹದ ಹೂರಣವಾಗಿದ್ದು ಮನಮುಟ್ಟುವಂತಿದೆ. ಲೇಖಕರು ತಮ್ಮ ಬರಹಗಳನ್ನು ಚೆಂದಗಾಣಿಸಲು 'ಅಕ್ಷರದ ಗಣಿ'ಯೊಳಗೆ ಇಳಿದುಬಿಡುತ್ತಾರೆ. ಅದಕ್ಕೆ ಸಾಕ್ಷಿ 'ಅತ್ತದೀಪ ಭವ' ಎಂಬ ಲೇಖನ. ಈ ಲೇಖನದಲ್ಲವರು ನಾಡಿನ ಬಹುದೊಡ್ಡ ಬುದ್ಧ ತತ್ವಜ್ಞ ನಟರಾಜ ಬೂದಾಳ ಅವರು ತಮ್ಮ ಭಾಷಣವೊಂದರಲ್ಲಿ ಉಲ್ಲೇಖಿಸಿದ ಬುದ್ಧ, ತನ್ನ ಶಿಷ್ಯ ಆನಂದನಿಗೆ ಹೇಳಿದ ಕಥೆಯನ್ನು ಬಳಸಿಕೊಳ್ಳುತ್ತಾರೆ. ಬುದ್ಧನ

ಬಳಿ ಭಿಕ್ಷುಕನೊಬ್ಬ, ಭಿಕ್ಷೆ ಕೇಳುತ್ತಾನೆ. ಆಗ ಬುದ್ಧ, ಭಿಕ್ಷುಕ ಮೂವತ್ತು ವರ್ಷಗಳಿಂದ ಕುಳಿತಿದ್ದ ಪಾಳು ಪೆಟ್ಟಿಗೆಯನ್ನು ತೆಗೆದು ನೋಡು ಎನ್ನುತ್ತಾನೆ. ಭಿಕ್ಷುಕ ಪೆಟ್ಟಿಗೆಯ ಬಾಗಿಲು ತೆರೆದು ನೋಡಿದಾಗ ಅದರಲ್ಲಿ ಚಿನ್ನದ ನಾಣ್ಯಗಳೇ ತುಂಬಿರುತ್ತವೆ ಎಂಬುದು ಪ್ರಸಂಗ. ಇದನ್ನು ವಿಸ್ತರಿಸುವ ಲೇಖಕರು, ಅಪಾರ ಸಂಪತ್ತಿನ ಮೇಲೆ ಕುಳಿತ ಭಿಕ್ಷುಕ, ದರಿದ್ರನಂತೆ ಅಂಗಲಾಚುತ್ತಿದ್ದ ಎನ್ನುತ್ತಾ, ನಮ್ಮ ಬಳಿ ಇರುವ ನಿಜ ಸಂಪತ್ತು, ಶಕ್ತಿಯ ಬಗ್ಗೆ ನಮಗೆ ಅರಿವಿರುವುದಿಲ್ಲ ಎನ್ನುತ್ತಾರೆ. ಅಷ್ಟಕ್ಕೆ ನಿಲ್ಲದೇ, **‘ಅಗಸ ನೀರೊಳಗಿರ್ದೂ ಬಾಯಾರಿ ಸತ್ತಂತೆ, ತಮ್ಮೊಳಗಿರ್ದ ಮಹಾ ಘನವನು ಅರಿಯರು’** ಎಂಬ ಅಕ್ಕನ ವಚನವನ್ನೂ ಸೇರಿಸುತ್ತಾರೆ. ಆನಂದನಿಗೆ ಬುದ್ಧ ‘ಅತ್ತ ದೀಪ ಭವ ಅಂದರೆ ನಿನಗೆ ನೀನೇ ಬೆಳಕು’ ಎಂದು ನೀಡಿದ ಕೊನೆಯ ಸಂದೇಶವನ್ನು ಅವರಿಲ್ಲಿ ಪ್ರಸ್ತಾಪಿಸುತ್ತಾರೆ. ಇದನ್ನು ಓದಿದಾಕ್ಷಣ ಎಂತಹದೇ ದಿಗಿಲು, ಆತಂಕದಲ್ಲಿದ್ದವರಲ್ಲೂ ಚೈತನ್ಯದ ಭಾವ ಸ್ಫುರಿಸುತ್ತದೆ. ಹೀಗೆ ಪುಸ್ತಿಕೆಯ ಬಹುತೇಕ ಬರಹಗಳು ಕತ್ತಲ ದಾರಿಯಲ್ಲಿ ‘ದೊಂದಿ’ಯಂತೆ ಬೆಳಕನ್ನು ಕೊಟ್ಟು ನಿಡುಸುಯ್ಯುವಂತೆ ಮಾಡುತ್ತವೆ. ಬಾಳ ದೋಣಿಯ ನಡೆಸುವ ನಾವಿಕರ ಬೆನ್ನು ತಟ್ಟುತ್ತವೆ. ಹೀಗೆ ಬಾಳ್ವೆಗೊಂದು ಬೆಳಕಿನ ಕೈಪಿಡಿಯಾಗುವ ಚೇತೋಹಾರಿ ಗುಣವನ್ನು ಈ ಪುಸ್ತಕ ಹೊಂದಿದೆ.

**ವೈ.ಗ. ಜಗದೀಶ್**
**ರಾಜಕೀಯ ಬ್ಯುರೋ ಮುಖ್ಯಸ್ಥ**
**“ಪ್ರಜಾವಾಣಿ”**
**ಬೆಂಗಳೂರು**

# ಪರಿವಿಡಿ


1. ಅತ್ತ ದೀಪ ಭವ.. 1

2. ಸದಾ ಇರಲಿ, ಸಹಾನುಭೂತಿ 1

3. ಆರದ ಬೆಳಕಾಗ ಬೇಕು,  ನಾವು ಮಾಡುವ ಕಾಯಕ 6

4. ಇಲ್ಲದಿರುವಿಕೆಯನ್ನು ಪ್ರೀತಿಸಿ 8

5. ಸಮಚಿತ್ತತೆಯೇ ನೆಮ್ಮದಿಯ ಮಾರ್ಗ 10

6. ಕೀಳರಿಮೆ ಕಿತ್ತು ಹಾಕಿ, ಯಶಸ್ಸಿನತ್ತ ಹೆಜ್ಜೆ ಹಾಕಿ 12

7. ಯಶಸ್ಸಿಗೆ ಒಳದಾರಿಗಳಿಲ್ಲ 14

8. ಇಲ್ಲೇ ಸ್ವರ್ಗ.. ಇಲ್ಲೇ ನರಕ 16

9. ಪ್ರಪಂಚದ ಅತಿ ಕ್ರೂರ ಪ್ರಾಣಿ 18

10. ಮೂಗು ತೂರಿಸುವ ಮುನ್ನ ಎಚ್ಚರವಿರಲಿ 20

11. ನಮ್ಮ ಭವಿಷ್ಯ ನಮ್ಮ ಕೈಯಲ್ಲೇ 22

12. ಉದ್ದೇಶ ಒಳ್ಳೆಯದಾಗಿದ್ದಾಗ ಎಲ್ಲವೂ ಒಳಿತಾಗುತ್ತದೆ 24

13. ಮೌಲ್ಯವೆಂಬ ನಿಲದ ಅಮೃತಧಾರೆ 26

14. ನಿತ್ಯವೂ ಮೂಡಲಿ ಹೊಸ ಬೆಳಕು 28

15. ಗುರುತಿಸು ಒಳಿತಿರುವುದನು ಕೇಡುಗಳ ನಡುವೆ 30

16. ಅಂತರಂಗದ ಅರಿವೇ ವಿಕಾಸ 33

17. ಬಾಧಿಸದಿರಲಿ ಮೇಲರಿಮೆಯ ವೈರಸ್ಸು 36

18. ಪ್ರಶ್ನಿಸುವ ಮನೋಭಾವ ಮನೋವಿಕಸನದ ಮೂಲ ಅಗತ್ಯ 38

19. ನಾವು ಹೇಗಿದ್ದೇವೆಯೋ ಹಾಗೇ ಕಾಣಿಸುತ್ತದೆ ಜಗತ್ತು 41

20. ದೂರ ದೃಷ್ಟಿ- ಭವಿಷ್ಯ ರೂಪಿಸುವ ಅಂತರಂಗದ ಒಳನೋಟ. 43

21. ಮನಸ್ಸೇ ಸಾಧನೆಯ ಮೂಲ 46

22. ಜವಾಬ್ದಾರಿಗೆ ಹೆಗಲೊಡ್ಡುವುದೇ ನಿಜವಾದ ನಾಯಕತ್ವ........................48
23. ನಮ್ಮನ್ನು ನಾವು ಕಂಡುಕೊಳ್ಳುವುದೇ ನಿಜವಾದ ಸಾಧನೆ....................50
24. ಶತ್ರುವಿನಲ್ಲೂ ಸಾಮರ್ಥ್ಯವನ್ನು ಗುರುತಿಸುವುದೇ ನಿಜವಾದ ನಾಯಕತ್ವ .52
25. ಶಿಕ್ಷಣವೆಂಬುದು ಬುದ್ಧಿ ಭಾವಗಳ ನಿರಂತರ ಬೆಳವಣಿಗೆ ........................54
26. ಗೊಬ್ಬರಕ್ಕೂ ಸಿಗಲಿ ಗೌರವ ........................................................56
27. ಹೇಳುವ ಮುನ್ನ ಚೆನ್ನಾಗಿ ಕೇಳಿಸಿಕೊಳ್ಳಿ...........................................59
28. ಸೋಲು ಕಲಿಸುವ ಜೀವನ ಪಾಠ....................................................61
29. ಸಾವನ್ನೂ ಸಹಾ ಸಕಾರಾತ್ಮಕವಾಗಿ ಸ್ವೀಕರಿಸಲು ಸಾಧ್ಯ ...................63
30. ಬೆನ್ನ ಹಿಂದೆ ಬಿದ್ದಿದೆ, ಸ್ಪರ್ಧೆ ಎಂಬ ಹೆಬ್ಬುಲಿ .......................................66
31. ಜ್ಞಾನದ ಸರಿಯಾದ ಬಳಕೆ...........................................................68
32. ಸ್ತ್ರೀ ಸಮಾನತೆ ಎಂದರೆ................................................................70
33. ನಮ್ಮ ತಪ್ಪನ್ನು ನಾವೇ ನಿಖರವಾಗಿ ಗುರುತಿಸಿಕೊಳ್ಳೋಣ. .................72
34. ಭಯ ಬಿಸಾಕಿ ...........................................................................74
35. ಸಂದರ್ಭಕ್ಕೆ ಅನುಗುಣವಾಗಿ ಸದಾ ಬದಲಾಗಿ ...................................76
36. ಯದ್ಭಾವಂ ತದ್ಭವತಿ..................................................................78
37. ನಾನು ಎಂಬ ಭಾವ ನಾಶವಾಗಲಿ ..................................................80
38. ದೇಶದ ಕುರಿತಾದ ನಿಜವಾದ ಕಾಳಜಿ.............................................82
39. ಹಾರುವ ಸಿಖ್ ನ ಪ್ರೇರಣೆಯ ಕಥೆ .................................................84
40. ನಿಜವಾದ ನೈತಿಕ ಮೌಲ್ಯವೆಂದರೆ.. ..............................................86
41. ನಾವೇ ಬದಲಾವಣೆಯ ಬಿಂದುವಾಗೋಣ ........................................88
42. ಸಣ್ಣ ಸಣ್ಣ ಕ್ಷಣಗಳಲ್ಲಡಗಿವೆ, ಬದುಕಿನ ಅಮೃತ ಬಿಂದುಗಳು...................90
43. ಅತಿರೇಕದ ಪ್ರತಿಕ್ರಿಯೆ ಅಪಾಯಕಾರಿ.............................................92
44. ಭಯವೆಂಬ ದೆವ್ವವನ್ನು ಮನದಿಂದ ಹೊಡೆದೋಡಿಸಿ ...........................94
45. ವಯಸ್ಸೆಂಬುದು ಬರಿಯ ಸಂಖ್ಯೆಯಷ್ಟೇ...........................................96
46. ನಿರಂತರ ಅಭ್ಯಾಸವೇ ಪರಿಪೂರ್ಣತೆಯ ಏಕೈಕ ಮಾರ್ಗ....................98

47. ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ ........................................... 100
48. ಇನ್ನೂ ಅತ್ಯುತ್ತಮವಾದ್ದು ಹೊರ ಬರಲಿಕ್ಕಿದೆ .................................. 102
49. ಹಿರಿಯರನ್ನು ಸದಾ ಗೌರವಿಸೋಣ............................................... 104
50. ಹೊಂದಾಣಿಕೆಯೇ ಹರುಷದ ಹಾದಿ ................................................ 106
51. ಆಗೋದೆಲ್ಲಾ ಒಳ್ಳೇದಕ್ಕೆ ............................................................ 108
52. ಹಳಸದಿರಲಿ ಸಂಬಂಧಗಳು......................................................... 110
53. ಮನದ ಧೂಳನ್ನು ಮೊದಲು ಒರೆಸಿಕೊಳ್ಳೋಣ................................ 112

# 1. ಅತ್ತ ದೀಪ ಭವ..



ಸಾಹಿತಿ ಹಾಗೂ ಸಾಂಸ್ಕೃತಿಕ ಚಿಂತಕರಾದ ಎಸ್ ನಟರಾಜ ಬೂದಾಳ್ ಅವರು, ಬೌದ್ಧ ದರ್ಶನದ ಕುರಿತು ಯೂಟ್ಯೂಬ್ ವಾಹಿನಿಯೊಂದಕ್ಕೆ ಬಹಳ ಅರ್ಥಗರ್ಭಿತವಾದ ಉಪನ್ಯಾಸ ಸರಣಿಯನ್ನು ನೀಡಿದ್ದಾರೆ. ಅದರಲ್ಲಿ ಅವರು ಉಲ್ಲೇಖಿಸಿದ ಕಥೆಯೊಂದು ನನ್ನ ಮನಸ್ಸಿಗೆ ತುಂಬಾ ನಾಟಿತು. ಒಂದೂರಿನಲ್ಲಿ ಒಬ್ಬ ಭಿಕ್ಷುಕ ರಸ್ತೆ ಬದಿ ಹಳೇ ಪೆಟ್ಟಿಗೆಯೊಂದರ ಮೇಲೆ ಕುಳಿತು ದಿನವೂ ಭಿಕ್ಷೆ ಬೇಡುತ್ತಿದ್ದ. ಒಮ್ಮೆ ಆ ದಾರಿಯಲ್ಲಿ ಸಾಗುತ್ತಿದ್ದ ಬುದ್ಧನ ಬಳಿಯೂ ಭಿಕ್ಷೆಗಾಗಿ ತನ್ನ ಪಾತ್ರೆಯನ್ನೊಡ್ಡಿದ. ಬುದ್ಧ ತನ್ನ  ಜೋಳಿಗೆಯನ್ನೆಲ್ಲ ತಡಕಾಡಿದ. ಆದರೆ ಅವನಿಗೆ ಭಿಕ್ಷುಕನಿಗೆ ಹಾಕಲು ಒಂದು ಬಿಡಿಗಾಸೂ ಸಿಗಲಿಲ್ಲ. ಆದರೆ ಅವನಿಗೇಕೋ ಭಿಕ್ಷುಕ ಕುಳಿತಿದ್ದ ಪೆಟ್ಟಿಗೆಯ ಕುರಿತು ಕುತೂಹಲವೆನಿಸಿತು.

“ಏನಿದೆ ಆ ಪೆಟ್ಟಿಗೆಯಲ್ಲಿ?” ಎಂದು ಪ್ರಶ್ನಿಸಿದ, ಬುದ್ಧ.  “ಗೊತ್ತಿಲ್ಲ ಸ್ವಾಮಿ, ಹಳೇಕಾಲದ ಪೆಟ್ಟಿಗೆ..ಏನಿದ್ದೀತು ಮಣ್ಣು” ಎಂದು ಉದಾಸೀನದಿಂದ ಉತ್ತರಿಸಿದ ಭಿಕ್ಷುಕ. “ನೀನು ಯಾವಾಗಿನಿಂದ ಇದರ ಮೇಲೆ ಕುಳಿತು ಭಿಕ್ಷೆ ಬೇಡುತ್ತಿದ್ದಿ?” ಎಂದು ಕೇಳಿದ ಬುದ್ಧ. “ಸುಮಾರು ಮೂವತ್ತು ವರ್ಷಗಳಿಂದಲೂ ನಾನು ಇದರ ಮೇಲೆ

ಕೂತು ಭಿಕ್ಷೆ ಬೇಡ್ತಿದೀನಿ ಸ್ವಾಮಿ" ಎಂದ ಭಿಕ್ಷುಕ. "ಒಮ್ಮೆ ಬೀಗ ಒಡೆದು ಅದರೊಳಗೆ ಏನಿದೆ ಅಂತ ನೋಡು" ಎಂದ ಬುದ್ಧ. "ಅಯ್ಯೋ ಬಿಡಿ ಸ್ವಾಮಿ ಅದರಲ್ಲೇನಿದ್ದೀತು" ಎಂದು ನಿರ್ಲಕ್ಷ್ಯ ಮಾಡಿದ ಭಿಕ್ಷುಕ. ಕೊನೆಗೂ ಬುದ್ಧನ ಒತ್ತಾಯದ ಮೇರೆಗೆ ಭಿಕ್ಷುಕ ಒಂದು ಕಲ್ಲನ್ನೆತ್ತಿ ತುಕ್ಕು ಹಿಡಿದಿದ್ದ ಪೆಟ್ಟಿಗೆಯ ಬೀಗವನ್ನು ಒಡೆದ. ಒಳಗೆ ನೋಡಿದರೆ ಆ ಪೆಟ್ಟಿಗೆಯ ತುಂಬಾ ಚಿನ್ನದ ನಾಣ್ಯಗಳು! ಇಂತಹ ಅಪಾರ ಸಂಪತ್ತಿನ ಮೇಲೇ ಕುಳಿತು ಮೂವತ್ತು ವರ್ಷಗಳಿಂದ ಈ ಭಿಕ್ಷುಕ, ಎಲ್ಲರ ಬಳಿ ದರಿದ್ರನಂತೆ ಅಂಗಲಾಚಿ ಭಿಕ್ಷೆ ಬೇಡುತ್ತಿದ್ದಾನೆ! ಹೀಗೇ ಅಲ್ಲವೇ ನಮ್ಮೆಲ್ಲರ ಬದುಕು? ನಮ್ಮ ಅಂತರಂಗದ ಅನರ್ಘ್ಯ ಸಿರಿವಂತಿಕೆಯನ್ನು ನಾವು ಗುರುತಿಸುವುದೇ ಇಲ್ಲ. ಇದು ನಮ್ಮಾಳದಲ್ಲಿದ್ದರೂ ಅದನ್ನು ಪಡೆದುಕೊಳ್ಳುವ ಗೋಜಿಗೆ ಹೋಗದೇ ಬಾಹ್ಯ ಸಂಪತ್ತಿಗಾಗಿ ಎಲ್ಲರೂ ಭಿಕ್ಷುಕರಂತೆ ಈ ಜಗತ್ತಿನಲ್ಲಿ ಕಂಡ ಕಂಡ ಕಡೆ ಕೈ ಚಾಚುವವರೇ. ಅಕ್ಕಮಹಾದೇವಿಯವರು **"ಅಗಸ ನೀರೊಳಗಿರ್ದೂ ಬಾಯಾರಿ ಸತ್ತಂತೆ, ತಮ್ಮೊಳಗಿರ್ದ ಮಹಾಘನವನು ಅರಿಯರು"** ಎಂಬ ಮಾತನ್ನು ಹೇಳಿರುವುದು ಈ ನೆಲೆಯಲ್ಲಿಯೇ. ನೀರಿನಲ್ಲಿಯೇ ಕೆಲಸ ಮಾಡುವ ಅಗಸನಿಗೆ ವಿಪರೀತ ಬಾಯಾರಿಕೆಯಾದಾಗ ತನ್ನನ್ನು ಸುತ್ತುವರಿದಿರುವ ನೀರನ್ನು ಕುಡಿದು ನಾನು ಬದುಕಿಕೊಳ್ಳಬಹುದು ಎಂಬ ಅರಿವು ಮೂಡದೇ ಆತ ಸತ್ತೇ ಹೋಗುತ್ತಾನೆ. ಅದೇ ರೀತಿ ನಾವು ಸಹ ನಮ್ಮೊಳಗಿರುವ ವ್ಯಕ್ತಿತ್ವವೆಂಬ ಮಹಾಘನದ ಕುರಿತು ಅರಿವನ್ನು ಮೂಡಿಸಿಕೊಳ್ಳುವ ಪ್ರಯತ್ನವನ್ನೇ ಮಾಡುವುದಿಲ್ಲ. ಬುದ್ಧನ ಕಟ್ಟ ಕಡೆಯ ಸಂದೇಶವೂ ಇದೇ ಆಗಿತ್ತು. ಬುದ್ಧ ನಿರ್ವಾಣದ ಹಂತದಲ್ಲಿದ್ದಾಗ ಅವನ ಶಿಷ್ಯ ಆನಂದ ಈ "ಜಗತ್ತಿಗೆ ನಿಮ್ಮ ಕೊನೆಯ ಸಂದೇಶವೇನು?" ಎಂದು ಪ್ರಶ್ನಿಸಿದಾಗ ಬುದ್ಧ **"ಅತ್ತ ದೀಪ ಭವ"** ಎಂದು ಉತ್ತರಿಸಿದ. ಅಂದರೆ **'ನಿನಗೆ ನೀನೇ ಬೆಳಕು'** ಎಂಬುದಾಗಿತ್ತು, ಆ ಕೊನೆಯ ದಿವ್ಯ ಸಂದೇಶ. ನಮ್ಮ ಒಳಗಣ ಬೆಳಕನ್ನು, ಸಿರಿವಂತಿಕೆಯನ್ನು ಕಂಡುಕೊಳ್ಳುವುದೇ ಅರ್ಥಪೂರ್ಣ ಬದುಕು. ಅದೇ ಅನುಭಾವಿಗಳ ಸಾಧನೆಯ ಪಥ.

# 2. ಸದಾ ಇರಲಿ, ಸಹಾನುಭೂತಿ



ಒಮ್ಮೆ ಒಬ್ಬ ಪುಟ್ಟ ಬಾಲಕ ನಾಯಿಮರಿಯನ್ನು ಕೊಂಡುಕೊಳ್ಳಬೇಕೆಂದು ಸಾಕುಪ್ರಾಣಿಗಳನ್ನು ಮಾರುವ ಅಂಗಡಿಗೆ ಹೋದ. ಅವನ ಜೇಬಿನಲ್ಲಿ ಐದುಸಾವಿರ ರೂಪಾಯಿಗಳಿದ್ದವು. ಎಲ್ಲಾ ಉತ್ತಮ ತಳಿಯ ನಾಯಿಮರಿಗಳಿದ್ದ ಆ ಅಂಗಡಿಯಲ್ಲಿ ಒಂದು ನಾಯಿಮರಿಯ ಕನಿಷ್ಠ ಬೆಲೆಯೇ ಹತ್ತುಸಾವಿರವಾಗಿತ್ತು. ಅಷ್ಟು ಹಣವಿರದ ಬಾಲಕ, ನಿರಾಶೆ ಕಂಗಳಿಂದ ಅಂಗಡಿಯಿಂದ ಹೊರಹೊರಟ. ಹಾಗೆ ಹೋಗುವಾಗ ಅವನ ಕಣ್ಣಿಗೆ ಒಂದು ಕಾಲು ಕುಂಟಾಗಿದ್ದ ಒಂದು ಮುದ್ದಾದ ನಾಯಿಮರಿ ಕಣ್ಣಿಗೆ ಬಿತ್ತು. ತಕ್ಷಣ ಬಾಲಕ ಅಂಗಡಿ ಮಾಲೀಕನ ಬಳಿ ಹೋಗಿ "ಅಂಕಲ್ ದಯವಿಟ್ಟು ನನಗೆ ಈ ನಾಯಿಮರಿಯನ್ನು ಕೊಡುತ್ತೀರಾ? ನನ್ನ ಬಳಿ ಐದುಸಾವಿರ ರೂಪಾಯಿಗಳಿವೆ. ಅದನ್ನೀಗ ಕೊಡುತ್ತೇನೆ. ಬಾಕಿ ಹಣವನ್ನು ಆಮೇಲೆ ಕಂತಿನಲ್ಲಿ ತೀರಿಸುತ್ತೇನೆ" ಎಂದು ಬೇಡಿಕೊಂಡ. ಈ ಬಾಲಕನ ಆಸಕ್ತಿಯನ್ನು ಗಮನಿಸುತ್ತಿದ್ದ ಅಂಗಡಿ ಮಾಲೀಕ "ಪುಟ್ಟಾ, ಈ ನಾಯಿಮರಿಯ ಕಾಲು ಕುಂಟಾಗಿದೆ. ಅದನ್ನು ಸಾಕೋದು ನಿನಗೆ ಕಷ್ಟವಾಗಬಹುದು. ಸರಿಯಾದ ಮರಿಯನ್ನೇ ಕೊಡುತ್ತೇನೆ, ನೀನು ಹೇಳಿದಂತೆ ಐದುಸಾವಿರ ಈಗ ಕೊಡು. ಉಳಿದ ಹಣವನ್ನು ನಂತರ ತೀರಿಸುವಂತೆ" ಎಂದು ನುಡಿದ. ಆಗ ಬಾಲಕ "ಇಲ್ಲ ಅಂಕಲ್, ನನಗೆ ಈ ನಾಯಿಮರಿಯೇ ಬೇಕು. ಐದು ಸಾವಿರ ಈಗ ಕೊಡುತ್ತೇನೆ ಬಾಕಿ ಹಣವನ್ನು

ಆಮೇಲೆ ತೀರಿಸುತ್ತೇನೆ" ಎಂದ. ಅಂಗಡಿಯವನಿಗೆ ಆಶ್ಚರ್ಯವಾಯಿತು. "ಸರಿಯಪ್ಪ, ಒಂದು ಕೆಲಸ ಮಾಡು. ನಿನ್ನ ಬಳಿ ಇರುವ 5000 ಕೊಟ್ಟು ಈ ಮರಿಯನ್ನು ತೆಗೆದುಕೊಂಡು ಹೋಗು, ಬೇರೆ ಏನೂ ಕೊಡಬೇಕಾಗಿಲ್ಲ" ಎಂದ. ಆಗ ಬಾಲಕ "ಇಲ್ಲ ಅಂಕಲ್ ಬೇರೆ ಮರಿಗಳಿಗೆ ಇರುವಷ್ಟೇ ಬೆಲೆ ಇದಕ್ಕೂ ಇದೆ. ಹಾಗಾಗಿ ಐದುಸಾವಿರ ಈಗ ಕೊಡುತ್ತೇನೆ. ಉಳಿದ ಬಾಕಿ ಹಣವನ್ನು ಆಮೇಲೆ ತೀರಿಸುತ್ತೇನೆ" ಎಂದು ನುಡಿದ. ಹುಡುಗನ ಹಠವನ್ನು ನೋಡಿ ಅಂಗಡಿಯವನಿಗೆ ಅಚ್ಚರಿಯಾಯಿತು. "ಅಲ್ಲ ಪುಟ್ಟಾ, ಇದೇ ನಾಯಿಮರಿಯನ್ನು ಬೇರೆ ಮರಿಗಳಿಗೆ ಇರುವಷ್ಟೇ ಬೆಲೆಕೊಟ್ಟು ಕೊಂಡುಕೊಳ್ಳಬೇಕೆಂದು ಹಠ ಮಾಡುತ್ತಿದ್ದೀಯಲ್ಲ, ಇದರ ಕಾಲು ಕುಂಟಾಗಿದೆ. ಅದನ್ನು ಸಾಕುವುದು ನಿನಗೆ ಕಷ್ಟವಾಗುವುದಿಲ್ಲವೇ?" ಎಂದು ಪ್ರಶ್ನಿಸಿದ. ಆಗ ಆ ಬಾಲಕ ನಿಧಾನವಾಗಿ ತಾನು ತೊಟ್ಟಿದ್ದ ಪ್ಯಾಂಟನ್ನು ಮೇಲಕ್ಕೆ ಮಡಿಸಿ ತೋರಿಸಿದ. ಆ ಬಾಲಕನ ಒಂದು ಕಾಲು ಸಹಾ ಕುಂಟಾಗಿತ್ತು. "ಅಂಕಲ್ ಒಂದು ಕಾಲಿಲ್ಲದ ನನಗೆ, ಖಂಡಿತವಾಗಿಯೂ ಈ ಕುಂಟಮರಿಯ ಕಷ್ಟ ಏನೆಂದು ಅರ್ಥವಾಗುತ್ತದೆ. ಅದನ್ನು ನಾನು ಚೆನ್ನಾಗಿ ಸಾಕಬಲ್ಲೆ" ಎಂದ ಆ ಬಾಲಕ.

ಇದನ್ನೇ ಇಂಗ್ಲೀಷಿನಲ್ಲಿ "ಎಂಪಥಿ" ಎಂದು ಕರೆಯುತ್ತಾರೆ. ಕನ್ನಡದಲ್ಲಿ ಇದಕ್ಕೆ "ಸಹಾನುಭೂತಿ" ಎನ್ನಬಹುದು. ಅಂದರೆ ಇನ್ನೊಬ್ಬರ ಜಾಗದಲ್ಲಿ ನಿಂತು ಅವರ ಕಷ್ಟವನ್ನು ಅರ್ಥ ಮಾಡಿಕೊಳ್ಳುವ ಮನಸ್ಥಿತಿ. ತುಟಿ ಮೇಲಿನ ಅನುಕಂಪ ಅಥವಾ "ಸಿಂಪಥಿ"ಯನ್ನು ಎಲ್ಲರೂ ವ್ಯಕ್ತಪಡಿಸುತ್ತಾರೆ. "ಅಯ್ಯೋ ನಿಮಗೆ ಹೀಗಾಗಬಾರದಿತ್ತು" ಎಂದು ಹೇಳುವಾಗ "ಒಳಗಿಂದಲೇ ಇವರಿಗೆ ಸರಿಯಾಗಿಯೇ ಆಗಿದೆ. ಇದನ್ನೇ ನಾನು ಕಾಯುತ್ತಿದ್ದೆ" ಎಂದು ಖುಷಿ ಪಡುವ ಮನಸ್ಸು ಕೆಲವರದ್ದು. ಈ ರೀತಿಯ ತುಟಿ ಮೇಲಿನ ಅನುಕಂಪ, ನೊಂದವರ ನೋವಿಗೆ ಹೆಗಲುಕೊಟ್ಟು ನಿಲ್ಲುವುದಿಲ್ಲ, ಅದಕ್ಕೆ ಇನ್ನಷ್ಟು ತುಪ್ಪ ಸುರಿಯುತ್ತದಷ್ಟೇ. ಬದಲಿಗೆ ಇನ್ನೊಬ್ಬರ ಜಾಗದಲ್ಲಿ ನಿಂತು ಅವರ ಸಂಕಷ್ಟವನ್ನು ಅರ್ಥ ಮಾಡಿಕೊಳ್ಳುವ ಸೂಕ್ಷ್ಮವಾದ ಸಂವೇದನೆ ಅತ್ಯಗತ್ಯ. ಇಂದಿನ ಮಕ್ಕಳಲ್ಲಿ **ಬುದ್ಧಿಮತ್ತೆಯ ಗುಣಾಂಕ** ಅಂದರೆ **“ಐಕ್ಯೂ” (Intelligence Quotient)** ಬಹಳಷ್ಟಿದೆ. ಆದರೆ ಅವರಲ್ಲಿ ಎದ್ದು ಕಾಣುತ್ತಿರುವುದು "ಸಂಬಂಧದ ಗುಣಾಂಕ"ದ ಅಂದರೆ **ಆರ್ ಕ್ಯೂ (Relationship quotient)** ಕೊರತೆ. ಈ "ಆರ್ ಕ್ಯೂ" ಇದ್ದಾಗ ನಮ್ಮಲ್ಲಿ **“ಈಕ್ಯೂ" (Emotional quotient**) ಅಂದರೆ ಭಾವನಾತ್ಮಕ ಗುಣಾಂಕ ಹೆಚ್ಚುತ್ತದೆ. ಈ ಭಾವನಾತ್ಮಕ ಗುಣಾಂಕವೇ, ವೃತ್ತಿಯಲ್ಲಾಗಲಿ ಕುಟುಂಬದಲ್ಲಾಗಲಿ

ಸಮಾಜದಲ್ಲಾಗಲಿ ಒಂದು ತಂಡವಾಗಿ ಕೆಲಸ ಮಾಡುವ ಮನಸ್ಥಿತಿಯನ್ನು ಕಟ್ಟಿಕೊಡುತ್ತದೆ. **ಈ ಕ್ಯೂ** ಹೆಚ್ಚಬೇಕೆಂದರೆ ನಮ್ಮಲ್ಲಿ ಎಂಪಥಿ ಅಥವಾ ಸಹಾನುಭೂತಿ ಸದಾ ಇರಬೇಕು. ಅದನ್ನು ಮಕ್ಕಳಲ್ಲಿ ಬಾಲ್ಯದಿಂದಲೇ ಬಿತ್ತುವ ಪ್ರಯತ್ನವನ್ನು ನಿರಂತರವಾಗಿ ಮಾಡಬೇಕು. ಆಗ ಅವರು ಸಮಾಜಮುಖಿಯಾಗಿ ಬದುಕುವ, ಇನ್ನೊಬ್ಬರ ಕಷ್ಟಕ್ಕೆ ತುಡಿಯುವ ಸಂವೇದನಾಶೀಲ ಪ್ರಜೆಗಳಾಗಿ ರೂಪಗೊಳ್ಳುತ್ತಾರೆ.

# 3. ಆರದ ಬೆಳಕಾಗ ಬೇಕು,
# ನಾವು ಮಾಡುವ ಕಾಯಕ..



ಪ್ರಪಂಚ ಕಂಡ ಬಹುದೊಡ್ಡ ದಾರ್ಶನಿಕ ಗೌತಮ ಬುದ್ಧ, ಬೋಧಿ ವೃಕ್ಷದಡಿಯಲ್ಲಿ ತನಗೆ ಸಿಕ್ಕಂತಹ ಜ್ಞಾನದ ಬೆಳಕನ್ನು, ದೇಶದಾದ್ಯಂತ ಪ್ರವಾಸ ಮಾಡಿ ಎಲ್ಲ ಕಡೆಯಲ್ಲೂ ಪಸರಿಸುತ್ತಿದ್ದ. ಬುದ್ಧ ಒಂದೆಡೆಯಲ್ಲಿ ನೆಲೆ ನಿಂತು ಪ್ರವಚನ ನೀಡುತ್ತಿದ್ದ ಸ್ಥಳಗಳಿಗೆ "ವಿಹಾರ" ಎನ್ನುತ್ತಿದ್ದರು. ಇಂದಿನ "ಬಿಹಾರ" ರಾಜ್ಯದಲ್ಲಿ ಅತೀ ಹೆಚ್ಚಿನ ಸಂಖ್ಯೆಯ ವಿಹಾರಗಳಿದ್ದವು, ಹೀಗಾಗಿ ಆ ಪ್ರದೇಶಕ್ಕೆ "ಬಿಹಾರ" ಎಂಬ ಹೆಸರು ಬಂದಿತು ಎಂಬುದಾಗಿಯೂ ಹೇಳುತ್ತಾರೆ. ಇಂತಹ ಒಂದು ವಿಹಾರದಲ್ಲಿ ಬುದ್ಧನ ಪ್ರವಚನ ಮಾಲಿಕೆ ಸಾಗಿತ್ತು. ಸಾಧಾರಣವಾಗಿ ಬುದ್ಧನ ಪ್ರವಚನ, ಸಂಜೆಯ ವೇಳೆ ಇರುತ್ತಿದುದರಿಂದ ಅದನ್ನು ಆಲಿಸಲು ಬರುತ್ತಿದ್ದ ಶ್ರಾವಕರು ಅಲ್ಲಿಗೆ ದೀಪಗಳನ್ನು ತಂದು ಬೆಳಗಿಸುತ್ತಿದ್ದರು. ತಮ್ಮ ತಮ್ಮ ಶ್ರೀಮಂತಿಕೆ, ಪ್ರತಿಷ್ಠೆಗಳಿಗೆ ಅನುಸಾರವಾಗಿ ಚಿನ್ನ, ಬೆಳ್ಳಿ, ತಾಮ್ರ ಮುಂತಾದ ದುಬಾರಿ ಬೆಲೆಯ ದೀಪಗಳನ್ನು ಅಲ್ಲಿಗೆ ಬರುವ ಬುದ್ಧಾನುಯಾಯಿಗಳು ತರುತ್ತಿದ್ದರು. ಆ ಊರಿನಲ್ಲಿ ಒಬ್ಬಳು ಹಣ್ಣು ಹಣ್ಣು ಮುದುಕಿ ಇದ್ದಳು. ಆಕೆ ಬುದ್ಧನ ಪರಮಭಕ್ತೆ. ಅವಳಿಗೂ ಸಹ ಬುದ್ಧನ ಕಾರ್ಯಕ್ರಮದಲ್ಲಿ ದೀಪ ಹಚ್ಚಿಡಬೇಕೆಂಬ ಆಸೆ. ತಾನು ಕಷ್ಟಪಟ್ಟು ಗಳಿಸಿ ಉಳಿಸಿದ ಹಣದಲ್ಲಿ ಆಕೆ ಒಂದು ಮಣ್ಣಿನ ಪ್ರಣತಿಯನ್ನು ಖರೀದಿಸಿದಳು. ಅದಕ್ಕೆ ಹೇಗೋ ಮಾಡಿ ಎಣ್ಣೆ, ದೀಪಗಳನ್ನು ಹೊಂದಿಸಿದಳು. ಅದನ್ನು ಬುದ್ಧನ ಪ್ರವಚನ ನಡೆಯುವ ವಿಹಾರಕ್ಕೆ ಒಯ್ದು, ಒಂದು ಮೂಲೆಯಲ್ಲಿ ಹಚ್ಚಿಟ್ಟು ತನ್ನಷ್ಟಕ್ಕೆ ತಾನು ಬುದ್ಧನ ಪ್ರವಚನವನ್ನು

ತನ್ಮಯತೆಯಿಂದ ಆಲಿಸಿ, ಅಲ್ಲಿಂದ ಹೊರಟುಹೋದಳು. ಕಾರ್ಯಕ್ರಮ ಮುಗಿದ ಮೇಲೆ ಕಾರ್ಯಕರ್ತರು ಒಂದೊಂದಾಗಿ ದೀಪಗಳನ್ನು ಆರಿಸುತ್ತಾ ಬಂದರು. ಕೊನೆಗೆ ನಮ್ಮ ಅಜ್ಜಿ ಹಚ್ಚಿಟ್ಟ ದೀಪದ ಬಳಿ ಬಂದು ಉಫ್ ಎಂದು ಊದಿದರು. ದೀಪ ಆರಲಿಲ್ಲ! ಕೈಯಲ್ಲಿ ಬೀಸಿ ಆರಿಸುವ ಪ್ರಯತ್ನವನ್ನು ಮಾಡಿದರು, ಆಗಲೂ ದೀಪ ಆರಲಿಲ್ಲ! ಕೊನೆಗೆ ತಮ್ಮ ವಸ್ತ್ರದಿಂದ ಗಾಳಿ ಹಾಕಿ ಅದನ್ನು ಆರಿಸುವ ಪ್ರಯತ್ನ ಮಾಡಿದರು. ಏನಾಶ್ಚರ್ಯ, ದೀಪ ಆರುತ್ತಿಲ್ಲ! ಇದನ್ನು ದೂರದಿಂದ ಗಮನಿಸುತ್ತಾ ಕುಳಿತಿದ್ದ ಬುದ್ಧದೇವ ಅಲ್ಲಿಂದಲೇ ಹೇಳಿದ, "ಅದನ್ನು ಆರಿಸುವ ಪ್ರಯತ್ನವನ್ನು ಬಿಟ್ಟುಬಿಡಿ. ಅದು ಅತ್ಯಂತ ಶ್ರದ್ಧೆಯಿಂದ, ಭಕ್ತಿಯಿಂದ, ಪ್ರಾಮಾಣಿಕತೆಯಿಂದ ಹಾಗೂ ಪ್ರೀತಿಯಿಂದ ಹಚ್ಚಿದ ದೀಪ, ಅದೆಂದಿಗೂ ಆರದ ಬೆಳಕು"

ಯಾವ ಕಾಯಕವನ್ನು ನಾವು ಶ್ರದ್ಧೆ, ಭಕ್ತಿ, ಪ್ರಾಮಾಣಿಕತೆ ಹಾಗೂ ಪ್ರೀತಿಯಿಂದ ಮಾಡುತ್ತೇವೆಯೋ ಅಂತಹ ಕಾಯಕ ಸಮಾಜಕ್ಕೆ ಆರದ ಬೆಳಕಾಗುತ್ತದೆ. ಕಾಯಕ ಯಾವುದೇ ಇರಲಿ ಶರಣರು ಹೇಳಿದಂತೆ **"ಕಾಯಕವೇ ಕೈಲಾಸ"** ಎಂದುಕೊಂಡು ಮಾಡಿದರೆ ಮಾಡುವ ಕೆಲಸ ಪರಿಪೂರ್ಣವಾಗಿ ಮೂಡಿಬರುತ್ತದೆ. ಒಂದು ಸುಸಜ್ಜಿತ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಮಾಡುವ ಪರಿಣಿತ ವೈದ್ಯನ ಕಾಯಕದಷ್ಟೇ ಶ್ರೇಷ್ಠವಾದದ್ದು, ಆ ಆಸ್ಪತ್ರೆಯ ಕಸಗುಡಿಸಿ, ಒರೆಸಿ ಸ್ವಚ್ಛವಾಗಿರಿಸುವ ಕೆಲಸಗಾರನದ್ದು. ಮಾಡುವ ಕೆಲಸದಲ್ಲಿ ತನ್ಮಯತೆ ಇರದಿದ್ದರೆ ಅದು ಎಷ್ಟೇ ದೊಡ್ಡ ಕೆಲಸವಾಗಿದ್ದರೂ ಪರಿಪೂರ್ಣವಾಗಿ ಮೂಡಿಬರಲು ಸಾಧ್ಯವಿಲ್ಲ. ನಮ್ಮ ದೇಶ ಕಂಡಂತಹ ಅತ್ಯದ್ಭುತ ಕ್ರೀಡಾಪಟು ಮಿಲ್ಖಾಸಿಂಗ್ ತಮ್ಮ ಜೀವನ ಚರಿತ್ರೆ **"ದ ರೇಸ್ ಆಫ್ ಮೈ ಲೈಫ್"** ನಲ್ಲಿ ಒಂದು ಮಾತು ಹೇಳುತ್ತಾರೆ, "ನೀವು ಮಾಡುವ ಕೆಲಸ ಯಾವುದೇ ಇರಲಿ ಅದು ಅತ್ಯುತ್ತಮವಾಗಿ ಮೂಡಿಬರಲು ನಿಮ್ಮಲ್ಲಿ ಮೂರು ಗುಣಗಳು ಅತ್ಯಗತ್ಯ. ಅವುಗಳೆಂದರೆ ಕಠಿಣ ಪರಿಶ್ರಮ, ದೃಢ ಇಚ್ಛಾಶಕ್ತಿ ಹಾಗೂ ಸಮರ್ಪಣಾ ಮನೋಭಾವ". ಈ ಮೂರು ಗುಣಗಳು ನಮಗೆ ಲಭಿಸುವುದು ಶ್ರದ್ಧೆ, ಭಕ್ತಿ, ಪ್ರಾಮಾಣಿಕತೆ ಹಾಗೂ ನಾವು ಮಾಡುವ ಕೆಲಸವನ್ನು ಸದಾ ಪ್ರೀತಿಸಿ ಮಾಡುವುದರಿಂದ.

# 4. ಇಲ್ಲದಿರುವಿಕೆಯನ್ನು ಪ್ರೀತಿಸಿ..

ಒಮ್ಮೆ ಸ್ವಲ್ಪ ದುರಾಸೆ ಬುದ್ಧಿಯ ಸ್ನೇಹಿತನೊಬ್ಬ ಮುಲ್ಲಾ ನಸುರುದ್ದೀನನ ಬಳಿ ಬಂದ. "ಮಿತ್ರಾ, ನಾನು ಈ ಊರನ್ನು ಬಿಟ್ಟು ಬೇರೆ ಊರಿಗೆ ಹೋಗಿ ನೆಲೆಸಲು ನಿರ್ಧಾರ ಮಾಡಿದ್ದೇನೆ. ಪ್ರಾಣಸ್ನೇಹಿತನಾದ ನಿನ್ನ ನೆನಪು ಸದಾ ನನಗೆ ಇರಬೇಕು. ಹೀಗಾಗಿ ನಿನ್ನ ಬೆರಳಲ್ಲಿರುವ ಉಂಗುರವನ್ನು ನನಗೆ ಕೊಡು. ಅದನ್ನು ನೋಡಿದಾಗಲೆಲ್ಲ ನಿನ್ನ ನೆನಪು ಮಾಡಿಕೊಳ್ಳುತ್ತೇನೆ" ಎಂದು ನುಡಿದ. ಆದರೆ ಆತ ಚಾಪೆ ಕೆಳಗೆ ನುಸಿಯುವವನಾದರೆ ನಸರುದ್ದೀನ್, ರಂಗೋಲಿ ಕೆಳಗೆ ನುಸಿಯುವಷ್ಟು ಬುದ್ಧಿವಂತ! "ಅದೇನೋ ನಿಜ ಮಿತ್ರ. ಆದರೆ ಅಕಸ್ಮಾತ್ ನಾನು ನೀಡಿದ ಉಂಗುರವನ್ನು ನೀನೇನಾದರೂ ಕಳೆದುಕೊಂಡು ಬಿಟ್ಟರೆ ಆಗ ನೀನು ನನ್ನನ್ನು ಮರೆತು ಬಿಡುತ್ತೀಯಾ.. ಅದಕ್ಕೆ ನಾನು ನನ್ನ ಉಂಗುರವನ್ನು ನಿನಗೆ ಕೊಡುವುದಿಲ್ಲ. ಆಗ ನೀನು ನಿನ್ನ ಖಾಲಿ ಬೆರಳನ್ನು ನೋಡಿಕೊಂಡಾಗಲೆಲ್ಲ, ನಾನು ಮುಲ್ಲಾನ ಬಳಿ ಉಂಗುರ ಕೇಳಿದ್ದೆ. ಆದರೆ ಅವನು ಕೊಡಲೇ ಇಲ್ಲ, ಎಂಬುದಾಗಿ ಸದಾ ನನ್ನನ್ನು ನೆನಪಿಸಿಕೊಳ್ಳುತ್ತೀ. ಆಗ ನನ್ನನ್ನು ನೀನು ಮರೆಯುವ ಸಾಧ್ಯತೆಯೇ ಇರುವುದಿಲ್ಲ" ಎಂದು ಉತ್ತರಿಸಿದ! ನಗು ತರಿಸುವ ಈ ಹಾಸ್ಯ ಚಟಾಕಿಯಲ್ಲಿ ಮುಲ್ಲಾ ನಸ್ರುದ್ದೀನನ ಬುದ್ಧಿವಂತಿಕೆ ಜೊತೆಗೆ, ಬದುಕಿನ ಒಂದು ಬಹುದೊಡ್ಡ ಸಂದೇಶ ಕೂಡ ಅಡಗಿದೆ. ನಾವು ನಮ್ಮ ಬಳಿ ಇರುವುದನ್ನು ಪ್ರೀತಿಸುತ್ತೇವೆ ಹಾಗೂ ಅದರ ಕುರಿತು ವ್ಯಾಮೋಹಿತರಾಗಿರುತ್ತೇವೆ. ಎಲ್ಲಿಯಾದರೂ ಅದು ನಮ್ಮಿಂದ ದೂರಾದರೆ ಗತಿ ಏನು ಎಂದು ಆತಂಕಿತರಾಗುತ್ತಿರುತ್ತೇವೆ. ಆದರೆ ಇಲ್ಲದಿರುವಿಕೆಯನ್ನು ಸಹಾ ಪ್ರೀತಿಸಬೇಕೇ ಹೊರತು ಅದರ ಕುರಿತು ಕೊರಗಬಾರದು. ಏಕೆಂದರೆ ಇಲ್ಲದಿರುವಿಕೆಯ ಬಗ್ಗೆ ಕೊರಗಲಾರಂಭಿಸಿದಾಗ ಮನಸ್ಸು ಚಿಂತೆಯ ಗೂಡಾಗುತ್ತದೆ ಹಾಗೂ ಇರುವುದನ್ನು ಅನುಭವಿಸುವ ಅದರಲ್ಲಿ ಸಂತೋಷಪಡುವ ನೆಮ್ಮದಿಯ ಬದುಕನ್ನು ನಾವು ಕಳೆದುಕೊಳ್ಳುತ್ತೇವೆ. ಇಲ್ಲದಿರುವಿಕೆಯನ್ನು ಪ್ರೀತಿಸುವುದು ಸ್ಥಿತಪ್ರಜ್ಞತೆ. ನಮಗೆ ತೀರಾ ಬೇಕಾದವರು ನಮ್ಮಿಂದ ದೂರವಾದಾಗ ಸಹಾ ಅವರ

ಇರುವಿಕೆಯನ್ನು ಪ್ರೀತಿಸಿದಷ್ಟೇ ಇಲ್ಲದಿರುವಿಕೆಯನ್ನೂ ಪ್ರೀತಿಸಬೇಕು ಎನ್ನುತ್ತಾನೆ, ಗೌತಮ ಬುದ್ಧ.



# 5. ಸಮಚಿತ್ತತೆಯೇ ನೆಮ್ಮದಿಯ ಮಾರ್ಗ

ಆರ್ಥರ್ ಆಶ್, ಆಫ್ರಿಕಾ ಮೂಲದ ಅಮೆರಿಕನ್ ಟೆನಿಸ್ ಪಟು. 1975ರಲ್ಲಿ ಆಶ್, ಅಂದಿನ ವಿಶ್ವ ಟೆನಿಸ್ ಸಾಮ್ರಾಜ್ಯದ ಅನಭಿಷಿಕ್ತ ಸಾಮ್ರಾಟರಾಗಿದ್ದ ಜಿಮ್ಮಿ ಕಾರ್ನರ್ಸ್ ಅವರನ್ನು ಅನಿರೀಕ್ಷಿತವಾಗಿ ಮಣಿಸಿ ವಿಂಬಲ್ಡನ್ ಕಿರೀಟವನ್ನು ಮುಡಿಗೇರಿಸಿಕೊಂಡರು. ಆಗಿನ ಕಾಲದಲ್ಲಿ ಟೆನ್ನಿಸ್ ರಂಗದ ಹೊಸ ಸೆನ್ಸೇಷನ್ ಆಗಿದ್ದ ಆರ್ಥರ್ ಆಶ್ ಹಲವಾರು ಟೆನಿಸ್ ಪ್ರಶಸ್ತಿಗಳನ್ನೂ ಗೆದ್ದಿದ್ದರು. ಇಂತಹ ವಿಶಿಷ್ಟ ಪ್ರತಿಭೆ 1988ರಲ್ಲಿ ಎರಡೆರಡು ಹೃದಯ ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಾಗಿ ಬಂತು. ದುರದೃಷ್ಟವಶಾತ್ ಶಸ್ತ್ರಚಿಕಿತ್ಸೆಗಾಗಿ ಅವರು ಪಡೆದ ರಕ್ತದಿಂದ ಹೆಚ್‌ಐವಿ ಸೋಂಕಿತರಾದರು.

ಆಗ ಅವರ ಅಸಂಖ್ಯಾತ ಅಭಿಮಾನಿಗಳು, ಅವರನ್ನು ಸಂತೈಸುವ ಸಂದೇಶಗಳನ್ನು ಅವರಿಗೆ ಕಳಿಸುತ್ತಿದ್ದರು. ಇದರಲ್ಲಿ ಬಹುಪಾಲು ಮಂದಿಯ ಪ್ರಶ್ನೆ "ಎಲ್ಲವನ್ನೂ ಒಳ್ಳೆಯದೇ ಮಾಡಿರುವ ನಿಮ್ಮನ್ನೇ ಏಕೆ ದೇವರು ಈ ದುರದೃಷ್ಟಕ್ಕೆ ಗುರಿ ಮಾಡಿದ?" ಎಂಬುದಾಗಿತ್ತು. ಇದಕ್ಕೆ ಆರ್ಥರ್ ಆಶ್ ನೀಡಿದ ಉತ್ತರ ಅತ್ಯಂತ ಧನಾತ್ಮಕವೂ, ಪ್ರೇರಣಾದಾಯಕವೂ ಆಗಿದೆ.

'ಪ್ರಪಂಚದಲ್ಲಿ ಮಿಲಿಯಗಟ್ಟಲೆ ಜನ ಟೆನ್ನಿಸ್ ಆಟಗಾರರಾಗಬೇಕೆಂದು ಆಶಿಸಿ ಪ್ರಯತ್ನ ಪಡುತ್ತಾರೆ. ಅದರಲ್ಲಿ ಸುಮಾರು ಒಂದು ಲಕ್ಷ ಜನ ವೃತ್ತಿಪರ ಟೆನ್ನಿಸ್ ಆಟಗಾರರಾಗುತ್ತಾರೆ. ಅದರಲ್ಲಿನ ಕೆಲವೇ ಸಾವಿರ ಜನ ವಿಶ್ವದ ನಾನಾ ಟೆನ್ನಿಸ್ ಸರ್ಕಿಟ್ ಗಳಲ್ಲಿ ಆಡುವ ಅವಕಾಶ ಪಡೆಯುತ್ತಾರೆ. ಅದರಲ್ಲಿ ಕೇವಲ 100 ಮಂದಿ ಗ್ರಾಂಡ್ ಸ್ಲಾಮ್ ಪ್ರಶಸ್ತಿಗಳಲ್ಲಿ ಆಡುವ ಅವಕಾಶ ಪಡೆಯುತ್ತಾರೆ. ಅದರಲ್ಲಿ ಕೇವಲ ಇಬ್ಬರಿಗೆ ಮಾತ್ರ ಫೈನಲ್ ಆಡುವ ಅವಕಾಶ ದೊರೆಯುತ್ತದೆ. ಕೊನೆಯಲ್ಲಿ ಒಬ್ಬ ವ್ಯಕ್ತಿ ಮಾತ್ರ ಗ್ರಾಂಡ್ ಸ್ಲಾಮ್ ಚಾಂಪಿಯನ್ನಾಗಿ ಟ್ರೋಫಿಯನ್ನು ಎತ್ತಿ ಹಿಡಿಯುತ್ತಾನೆ. ಅಂತಹ ಅದೃಷ್ಟವಂತ ವ್ಯಕ್ತಿ ನಾನಾಗಿದ್ದೆ. ಆ ಸಂದರ್ಭದಲ್ಲಿ ನಾನು

ದೇವರೇ ನನಗೆ ಮಾತ್ರ ಈ ಅವಕಾಶ ಏಕೆ ಕೊಟ್ಟೆ? ಎಂದು ಕೇಳಲಿಲ್ಲ. ಹಾಗೆಯೇ ಈ ರೀತಿಯ ದುರದೃಷ್ಟಕರ ಖಾಯಿಲೆಗೆ ತುತ್ತಾದಾಗ ನಾನು, ದೇವರನ್ನು ನನಗೇ ಏಕೆ ಇದನ್ನು ನೀಡಿದೆ ಎಂದು ದೂಷಿಸಲಿ?"; ಎಂಬ ಅವರ ಹೇಳಿಕೆ ಸುಖ ದುಃಖಗಳನ್ನು, ನೋವು ನಲಿವುಗಳನ್ನು ಸಮಚಿತ್ತದಿಂದ ಸ್ವೀಕರಿಸುವ ಮನಸ್ಥಿತಿ ಸದಾ ನಮ್ಮದಾಗಿರಬೇಕು ಎಂಬುದಕ್ಕೆ ಬಹುದೊಡ್ಡ ಉದಾಹರಣೆಯಾಗಿದೆ. ಕಷ್ಟ ಬಂದಾಗ, ದುಃಖವಾದಾಗ ಅಯ್ಯೋ ನನಗೇ ಏಕೆ ಇದು ಬಂದೊದಗಿದೆ ಎಂದು ಕೊರಗುವ ನಾವು ಸುಖ ಲಭಿಸಿದಾಗ, ಬೇರೆಯವರಿಗೆ ಲಭಿಸದ ಇದು ನನಗೇ ಏಕೆ ಸಿಕ್ಕಿದೆ ಎಂದು ಆಲೋಚಿಸುವುದಿಲ್ಲ. ಹೀಗಾಗಿ ಡಿವಿಜಿಯವರು ಕಗ್ಗದಲ್ಲಿ ಹೇಳಿದಂತೆ **ಅರೆಗಣ್ಣು ನಮದೆಂದು ಕೊರಕೊರಗಿ ಫಲವೇನು? ಅರೆಬೆಳಕು ಧರೆಯೊಳು ಎಂದೊರಲಿ ಸುಖವೇನು? ಇರುವ ಕಣ್ಣಿಂದ ಆದಿನಿತ ಪರಿಕಿಸಿ ನೋಡಿದರದು ಲಾಭ -ಮಂಕುತಿಮ್ಮ...** ನಮಗಿರೋದೇ ಅರೆಗಣ್ಣು, ನಮಗೆ ಕಾಣಿಸುವುದೇ ಅರೆಬೆಳಕು ಎಂದು ಕೊರಗುತ್ತಾ ಕೂರುವುದರ ಬದಲು, ಇರುವ ಅರ್ಧ ಕಣ್ಣಿನಿಂದ ನೋಡ ಸಿಗುವ ಜಗತ್ತಿನ ಸವಿಯನ್ನು ಸವಿಯುವುದೇ ಲಾಭ. ಅಂತಹ ಮನೋಧರ್ಮವೇ ನೆಮ್ಮದಿಯ ಬದುಕಿನ ಮಾರ್ಗ.



# 6. ಕೀಳರಿಮೆ ಕಿತ್ತು ಹಾಕಿ, ಯಶಸ್ಸಿನತ್ತ ಹೆಜ್ಜೆ ಹಾಕಿ

ವಿಕಾಸ ಒಳ್ಳೆಯ ಮಾತುಗಾರ. ಆದರೆ ಕಾಲೇಜಿನ ಸಭೆಗಳಲ್ಲಿ ಮಾತನಾಡಲು ಆತನಿಗೆ ಅಳಕು. ಬುದ್ಧಿವಂತಿಕೆಯಲ್ಲಿ, ವಿಷಯ ಸಂಗ್ರಹಣೆಯಲ್ಲಿ ಇವನಿಗಿಂತ ದುರ್ಬಲರಾದವರು, ಭಾಷಣ ಸ್ಪರ್ಧೆಯಲ್ಲಿ ಬಹುಮಾನ ಗಿಟ್ಟಿಸುತ್ತಿದ್ದರು. ವಿಕಾಸನನ್ನು ವೇದಿಕೆ ಏರದಂತೆ ಕಾಡುತ್ತಿದ್ದ ಮುಖ್ಯ ಸಮಸ್ಯೆ ಎಂದರೆ ಅವನಲ್ಲಿದ್ದ ಕೀಳರಿಮೆ ಅಥವಾ ಹಿಂಜರಿಕೆ. ತಾನು ಗ್ರಾಮೀಣ ಪ್ರದೇಶದ ಕನ್ನಡ ಶಾಲೆಯಲ್ಲಿ ಕಲಿತವನು, ಕಾನ್ವೆಂಟ್ ಶಾಲೆಯಲ್ಲಿ ಕಲಿತ ವಿದ್ಯಾರ್ಥಿಗಳು ಇಂಗ್ಲೀಷಿನಲ್ಲಿ ಸರಾಗವಾಗಿ ಮಾತಾಡುತ್ತಾರೆ, ನನಗದು ಸಾಧ್ಯವಾಗದು. ಅವರೆದುರು ಸ್ಪರ್ಧೆಗಿಳಿದರೆ ಎಲ್ಲಿ ಅವಮಾನಿತನಾಗುತ್ತೇನೋ ಎಂಬ ಅಳಕು ವಿಕಾಸನಿಗೆ! ಹಾಗೆಯೇ ಲಕ್ಷ್ಮಿಗೆ ಒಳ್ಳೆಯ ಕಂಠಸಿರಿ ಇದೆ. ಆದರೆ ತನಗಿಂತಲೂ ಚೆನ್ನಾಗಿ ಹಾಡುವವರಿದ್ದಾರೆ, ಅವರೆದುರು ಸ್ಪರ್ಧಿಸಲಾರೆನೆಂಬ ಹಿಂಜರಿಕೆ ಅವಳದ್ದು. ಹೀಗಾಗಿ ಮನೆಯಲ್ಲಿ ಸುಶ್ರಾವ್ಯವಾಗಿ ಹಾಡುವ ಆಕೆ, ಶಾಲೆಯ ಗಾಯನ ಸ್ಪರ್ಧೆಗಳಲ್ಲಿ ಭಾಗವಹಿಸುವ ಗೋಜಿಗೇ ಹೋಗುತ್ತಿರಲಿಲ್ಲ! ಹೀಗಾಗಿ ಅವಳ ಪ್ರತಿಭೆ ಬೆಳಕಿಗೇ ಬರಲಿಲ್ಲ. ರಮೇಶನಿಗೆ ಉತ್ತರಗಳೆಲ್ಲವೂ ಗೊತ್ತಿದ್ದರೂ ಪರೀಕ್ಷೆಗೆ ಕುಳಿತಾಗ ತಾನು ಬೇರೆಯವರಿಗಿಂತ ದಡ್ಡನೆಂಬ ಕೀಳರಿಮೆಯ ಭಾವ ಕಾಡಿ, ಸರಿಯಾಗಿ ಬರುತ್ತಿದ್ದ ಉತ್ತರವನ್ನೂ ತಪ್ಪಾಗಿ ಬರೆದು ಕಡಿಮೆ ಅಂಕ ಗಳಿಸಿ ದುಃಖಿತನಾಗುತ್ತಿದ್ದ!

ನಮ್ಮ ವ್ಯಕ್ತಿತ್ವಕ್ಕೆ ಕಾಟ ಕೊಡುವ ಅತಿ ದೊಡ್ಡ ವೈರಸ್ ಎಂದರೆ ಕೀಳರಿಮೆ ಅಥವಾ ಹಿಂಜರಿಕೆ. ನಮಗೆ ಗೊತ್ತಿರುವ ವಿಷಯವನ್ನೂ ಗೊತ್ತಾಗಲು ಬಿಡದ ವೈರಸ್ಸೇ ಈ ಕೀಳರಿಮೆ. ಇದಕ್ಕೆ ಇಂಗ್ಲಿಷ್ ನಲ್ಲಿ **Inferiority Complex** ಎನ್ನುತ್ತಾರೆ. ಹೆಚ್ಚಾಗಿ ಬಾಲ್ಯದಲ್ಲಿ ಅಂಟಿಕೊಳ್ಳುವ ಈ ವೈರಸ್ಸು, ದೊಡ್ಡವರಾದ ಮೇಲೂ ಹಾಗೇ ಉಳಿದುಕೊಂಡರೆ ನಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಸಾಧನೆ

ಮಾಡದಂತೆ ಬಿಡದೆ ಕಾಡುತ್ತದೆ. ಎಲ್ಲಾ ವ್ಯಕ್ತಿಗಳಲ್ಲೂ ಸಾಮರ್ಥ್ಯ ಹಾಗೂ ದೌರ್ಬಲ್ಯಗಳೆರಡೂ ಇರುತ್ತವೆ. ಯಶಸ್ವೀ ವ್ಯಕ್ತಿಗಳು ತಮ್ಮ ಸಾಮರ್ಥ್ಯದ ಕಡೆಗೆ ಕೇಂದ್ರೀಕರಿಸಿ ಶ್ರಮಪಟ್ಟು ಸಾಧನೆಯ ಮೆಟ್ಟಿಲೇರುತ್ತಾರೆ. ಅದೇ ರೀತಿ ಅವರಿಗೆ ತಮ್ಮ ದೌರ್ಬಲ್ಯಗಳ ಅರಿವೂ ಇರುತ್ತದೆ. ಆದರೆ ಯಶಸ್ಸು ಪಡೆಯದೇ ಸದಾ ಕೊರಗುವವರು ತಮ್ಮ ದೌರ್ಬಲ್ಯಗಳನ್ನೇ ದೊಡ್ಡದಾಗಿಸಿಕೊಂಡು ಕೀಳರಿಮೆಗೆ ಒಳಗಾಗಿ ತಮ್ಮ ಸಾಮರ್ಥ್ಯಗಳೇನೆಂದು ಗುರುತಿಸಿಕೊಳ್ಳುವುದೇ ಇಲ್ಲ. ಕೀಳರಿಮೆಗೆ ಮುಖ್ಯ ಕಾರಣವೆಂದರೆ ಸೋಲಿನ ಭಯ. ಸೋಲು ಎಂಬುದರ ಆಂಗ್ಲ ರೂಪವಾದ **FAIL** ಅನ್ನು **First Attempt In Learning** ಎಂದು ಧನಾತ್ಮಕವಾಗಿ ವಿಸ್ತರಿಸಬಹುದು. ಹೀಗಾಗಿ ವೈಫಲ್ಯದ ಕಥೆಗಳನ್ನು ಓದಿದರೆ ಯಶಸ್ಸಿನ ದಾರಿ ಖಂಡಿತ ಗೋಚರಿಸುತ್ತದೆ. ಅದೇ ರೀತಿ ದೈಹಿಕ ರೂಪ, ವೃತ್ತಿ ಅಂತಸ್ತುಗಳೂ ಕೀಳರಿಮೆಯ ಭಾವನೆಗೆ ಕಾರಣವಾಗುತ್ತದೆ.

ಕೀಳರಿಮೆಯನ್ನು ಹೋಗಲಾಡಿಸಲು ಸೋಲಿಗೆಂದೂ ಅಂಜದ, ಸೋಲಿನಿಂದ ಕಲಿಯುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ನಮ್ಮ ಸಾಮರ್ಥ್ಯದ ಮೇಲೆ ಕೇಂದ್ರೀಕರಿಸಿ, ಅದರ ಮೇಲೆ ನಂಬಿಕೆಯಿರಿಸಿ ಪರಿಶ್ರಮ ಪಡಬೇಕು. ಬಸವಣ್ಣನವರು ಹೇಳಿದಂತೆ **ಕಾಯಕವೇ ಕೈಲಾಸ** ಎಂದುಕೊಂಡು ನಾವು ಮಾಡುವ ಕೆಲಸ ಶ್ರೇಷ್ಠವಾದದ್ದೆಂದು ಅದನ್ನು ಸದಾ ಪ್ರೀತಿಸಬೇಕು.



# 7. ಯಶಸ್ಸಿಗೆ ಒಳದಾರಿಗಳಿಲ್ಲ..

ಒಮ್ಮೆ ಸಮರಕಲೆಗಳಲ್ಲಿ ಒಂದು ಮಟ್ಟಕ್ಕೆ ಸಾಧನೆ ಮಾಡಿದ್ದ ಯುವಕನೊಬ್ಬ ಇದರಲ್ಲಿ ಅತ್ಯದ್ಭುತವಾದದ್ದನ್ನು ಸಾಧಿಸಿದ್ದ ಗುರುವೊಬ್ಬನ ಬಳಿ ಬಂದ. "ಗುರುಗಳೇ ನಾನು ಸಮರ ಕಲೆಗಳಲ್ಲಿ ನಿಮ್ಮಂತೆ ಅತ್ಯಂತ ದೊಡ್ಡ ಸಾಧಕನಾಗಬೇಕು ಎಂದಿದ್ದೇನೆ. ಈ ರೀತಿಯ ಯಶಸ್ಸನ್ನು ಗಳಿಸಲು, ನಾನು ನಿಮ್ಮ ಶಿಷ್ಯನಾಗಲು ಬಯಸುತ್ತೇನೆ. ಇದರಲ್ಲಿ ನಿಮ್ಮಂತೆ ಅತ್ಯುನ್ನತ ಹಂತಕ್ಕೇರಲು ನನಗೆ ಎಷ್ಟು ವರ್ಷಗಳ ಸಾಧನೆಯ ಅಗತ್ಯವಿದೆ?" ಎಂದು ಪ್ರಶ್ನಿಸಿದ. ಆಗ ಆ ಗುರು ಸ್ವಲ್ಪ ಯೋಚಿಸಿ "ಸುಮಾರು ಹತ್ತು ವರ್ಷ ಬೇಕಾಗಬಹುದು" ಎಂದ. ಈ ಮಾತನ್ನು ಕೇಳಿ ಅವಾಕ್ಕಾದ ಯುವಕ "ಅಯ್ಯೋ ಅಷ್ಟು ವರ್ಷ ಕಾಯಲು ನನ್ನಿಂದ ಸಾಧ್ಯವಿಲ್ಲ. ನಾನು ಬೇಕಾದರೆ ಪ್ರತಿದಿನವೂ ಎರಡು ಪಟ್ಟು ಅಭ್ಯಾಸ ಮಾಡುತ್ತೇನೆ. ನನಗೆ ಬೇಗ ಸಾಧಕನಾಗಬೇಕಾಗಿದೆ" ಎಂದು ನುಡಿದ. ಅದಕ್ಕೆ ಆ ವೃದ್ಧ ಗುರು "ಹಾಗಾದರೆ ನೀನು ಇಪ್ಪತ್ತು ವರ್ಷಗಳ ಅಭ್ಯಾಸವನ್ನು ಖಂಡಿತ ಮಾಡಬೇಕು" ಎಂದು ಹೇಳಿದ!

ಇಂದಿನ ಜಗತ್ತಿನಲ್ಲಿ ಪ್ರತಿಯೊಬ್ಬರೂ ದಿಢೀರ್ ಯಶಸ್ಸನ್ನು ಬಯಸುತ್ತಾರೆ. ದಿಢೀರೆಂದು ಶ್ರೀಮಂತರಾಗುವುದನ್ನು ಇಷ್ಟಪಡುತ್ತಾರೆ. ಮಾರ್ಗ ಯಾವುದೇ ಇರಲಿ ಹಣಗಳಿಕೆ ಬೇಗ ಆಗಬೇಕು ಎಂಬುದೇ ಎಲ್ಲರ ಆಸೆ. ಆದರೆ ಯಾವುದೇ ಕ್ಷೇತ್ರದಲ್ಲಿ ಯಶಸ್ವಿಯಾಗಬೇಕಾದರೆ, ಆಳಕ್ಕಿಳಿದು ಅಧ್ಯಯನ ಹಾಗೂ ನಿರಂತರ ಅಭ್ಯಾಸ ಮಾಡಬೇಕು.

ಯಶಸ್ಸಿಗೆ ಯಾವುದೇ ಒಳದಾರಿಗಳಿಲ್ಲ. ಕಠಿಣ ಪರಿಶ್ರಮ ಒಂದೇ ಯಶಸ್ಸಿನ ಸರಿಯಾದ ಮಾರ್ಗ. ಶತಕಗಳ ಶತಕ ಬಾರಿಸಿದ ಸಚಿನ್ ತೆಂಡೂಲ್ಕರ್, ಅತ್ಯದ್ಭುತ ಟೆನ್ನಿಸ್ ಪ್ರತಿಭೆಗಳಾದ ರೋಜರ್ ಫೆಡರರ್, ಜೋಕೋವಿಕ್,ಮಿಂಚಿನ ಓಟಗಾರ ಉಸ್ಸೈನ್ ಬೋಲ್ಟ್ ಮುಂತಾದ ಕ್ರೀಡಾತಾರೆಯರು ಗಳಿಸಿರುವ ಅಪಾರ ಸಂಪತ್ತು ನಮ್ಮ ಗಮನ ಸೆಳೆಯುತ್ತದೆ. ಆದರೆ ಆ ಸಂಪತ್ತಿನ ಗಳಿಕೆ ಹಿಂದಿರುವ ಅವರ ಕಠಿಣ ಪರಿಶ್ರಮ ನಮ್ಮ ಅರಿವಿಗೆ

ಬರುವುದೇ ಇಲ್ಲ. ಅದೇ ರೀತಿ ಪ್ರಖ್ಯಾತ ಸಂಗೀತಗಾರರಾದ ಪಂಡಿತ್ ಭೀಮಸೇನಜೋಶಿ, ಎಂ ಎಸ್ ಸುಬ್ಬಲಕ್ಷ್ಮಿ, ಎಸ್ ಪಿ ಬಾಲಸುಬ್ರಮಣ್ಯಂ ಮುಂತಾದವರು ಅತ್ಯುನ್ನತ ಮಟ್ಟದ ಸಾಧನೆ ಮಾಡಲು ಸಾಧ್ಯವಾಗಿದ್ದು ಅವರ ಅವಿರತ ಪರಿಶ್ರಮದಿಂದ. ಸಾಹಿತ್ಯ ಕ್ಷೇತ್ರದ ದಿಗ್ಗಜರಾದ ಕುವೆಂಪು, ಬೇಂದ್ರೆ, ಕಾರಂತ ಮುಂತಾದವರ ಸಾಹಿತ್ಯಕ ಸಾಧನೆಯ ಬೃಹತ್ ವೃಕ್ಷದಡಿಯಲ್ಲಿ ಅವರ ಆಳವಾದ ಅಧ್ಯಯನದ ಬೇರುಗಳಿರುವುದನ್ನು ನಾವೆಂದಿಗೂ ಮರೆಯುವಂತಿಲ್ಲ. ನಟನಾ ಸಾಮರ್ಥ್ಯದಲ್ಲಿ ಮೇರು ಶಿಖರವನ್ನೇರಿದ ಡಾ.ರಾಜಕುಮಾರ್ ಅವರ ಸಾಧನೆ ಸಹ ಅವರ ನಿರಂತರವಾದ ಅಭ್ಯಾಸ ಪರಿಶ್ರಮಗಳಿಂದ ಪ್ರಾಪ್ತವಾದದ್ದು. **"ಹತ್ತೆಡೆಯೊಳು ತೋಡಿ, ಒಂದಡಿಯಷ್ಟನು ಬರಲಿಲ್ಲ ನೀರು ಎಂದೆನಬೇಡ. ಒಂದೆಡೆಯಲಿ ತೋಡು ಹತ್ತಡಿಯಷ್ಟನು ಚಿಮ್ಮುವುದು ಉದಕವು ನೋಡ"** ಎಂಬುದಾಗಿ ಹಿರಿಯ ಕವಿ ಎಸ್ ವಿ ಪರಮೇಶ್ವರ ಭಟ್ಟರು ಹೇಳುತ್ತಾರೆ. ಹತ್ತು ಕಡೆಯಲ್ಲಿ ಬರೀ ಒಂದಡಿ ತೋಡಿದರೆ ನೀರು ಸಿಕ್ಕುವುದಿಲ್ಲ. ಅದೇ ಒಂದೇ ಕಡೆಯಲ್ಲಿ ಆಳಕ್ಕಿಳಿದು ತೋಡಿದಾಗ ಖಂಡಿತವಾಗಿಯೂ ನೀರು ಚಿಮ್ಮುತ್ತದೆ. ಹಾಗೆಯೇ ಸಾಧನೆ ಎಂಬುದು ಆಳಕ್ಕಿಳಿದು ಪರಿಶ್ರಮಪಟ್ಟು ಕಾಯಕ ಮಾಡಿದಾಗ ಮಾತ್ರ ಲಭ್ಯವಾಗುವಂಥದ್ದು. ಇದಕ್ಕೆ ನಮ್ಮಲ್ಲಿ ತಾಳ್ಮೆ ಅತ್ಯಗತ್ಯ. **'ತಾಳುವಿಕೆಗಿಂತ ಅನ್ಯ ತಪವಿಲ್ಲ'** ಎಂಬ ಮಾತಿನಂತೆ ತಾಳ್ಮೆ ಎಂಬುದು ತಪಸ್ಸಿನಂತೆ. ಸಾಧಕರ ಯಶಸ್ಸಿನ ಗುಟ್ಟೇ ಅವರ ಅವಿರತ ಪರಿಶ್ರಮ ಹಾಗೂ ಅನನ್ಯವಾದ ತಾಳ್ಮೆ.

# 8. ಇಲ್ಲೇ ಸ್ವರ್ಗ.. ಇಲ್ಲೇ ನರಕ..

ಒಮ್ಮೆ ಝೆನ್ ಗುರುವೊಬ್ಬನ ಬಳಿ, ಯೋಧನೋರ್ವ ಬಂದು ಹೀಗೆಂದು ಕೇಳಿದ 'ಸ್ವರ್ಗ ನರಕಗಳು ನಿಜವಾಗಿಯೂ ಇವೆಯೇ?' ಇದನ್ನಾಲಿಸಿದ ಝೆನ್ ಗುರು ಅವನನ್ನು ತಕ್ಷಣ 'ನೀನು ಯಾರು?' ಪ್ರಶ್ನಿಸಿದ. ಆಗ ಆ ಯೋಧ 'ನಾನೊಬ್ಬ ವೀರ ಸಮುರಾಯ್' ಎಂದು ಉತ್ತರವಿತ್ತ. ಆಗ ಮಾಸ್ಟರ್ 'ಓಹೋ ನೀನೊಬ್ಬ ಸೈನಿಕನೋ ನೋಡಿದರೆ ಒಳ್ಳೇ ಭಿಕ್ಷುಕನ ಥರಾ ಕಾಣಿಸುತ್ತೀ' ಎಂದು ವ್ಯಂಗ್ಯವಾಡಿದ. ಕುಪಿತನಾದ ಯೋಧ ತನ್ನ ಸೊಂಟದಲ್ಲಿದ್ದ ಕತ್ತಿಯನ್ನು ನಿಧಾನಕ್ಕೆ ಹೊರಗೆಳೆದ. ಅದನ್ನು ಗಮನಿಸಿದ ಝೆನ್ ಗುರು 'ನಿನ್ನ ಬಳಿ ಕತ್ತಿ ಕೂಡ ಇದೆಯೋ? ಈ ಮೊಂಡುಕತ್ತಿಯನ್ನು ಇಟ್ಟುಕೊಂಡು ಅದು ಯಾವ ಸಾಮ್ರಾಜ್ಯವನ್ನು ನೀನು ರಕ್ಷಣೆ ಮಾಡ್ತಿಯೋ?' ಎಂದು ಮತ್ತಷ್ಟು ವ್ಯಂಗ್ಯಭರಿತ ಧ್ವನಿಯಲ್ಲಿ ಮೂದಲಿಸಿದ. ಸೈನಿಕನ ಕೋಪ ನೆತ್ತಿಗೇರಿತು. ಕತ್ತಿಯನ್ನು ಪೂರ್ಣವಾಗಿ ಹೊರತೆಗೆದು ಗುರುವಿನ ಮೇಲೆ ಪ್ರಹಾರ ಮಾಡಲು ಹೊರಟ.

ಆಗ ಝೆನ್ ಮಾಸ್ಟರ್ ನಗುತ್ತಾ ನುಡಿದ 'ಇದೋ ನಿನ್ನ ನರಕದ ದ್ವಾರ ತೆರೆದುಕೊಂಡಿತು'. ಅವನ ಮಾತಿನ ಮರ್ಮವನ್ನು ಅರಿತ ಯೋಧ ತಕ್ಷಣ ಅವನಿಗೆ ಶಿರಬಾಗಿ ನಮಿಸಿದ. ಆಗ ಝೆನ್ ಗುರು, 'ಮಿತ್ರಾ ಇದೇ ನೋಡು ಸ್ವರ್ಗ' ಎಂದು ಹೇಳಿದ.

ನಾವು ಕಾಣದ ಸ್ವರ್ಗ ನರಕಗಳ ಬಗ್ಗೆ ಯೋಚಿಸುವುದಕ್ಕಿಂತ ನಮ್ಮ ಬದುಕಿನಲ್ಲಿ ಇವು ಅಡಗಿರುವ ನೆಲೆಯನ್ನು ಗುರುತಿಸುವುದೇ ಅರ್ಥಪೂರ್ಣ ಜೀವನ. 'ಇಲ್ಲೇ ಸ್ವರ್ಗ, ಇಲ್ಲೇ ನರಕ, ಮೇಲೇನಿಲ್ಲ ಸುಳ್ಳು.. ಹುಟ್ಟು ಸಾವು ಎರಡರ ಮಧ್ಯೆ ಮೂರು ದಿನದ ಬಾಳು' ಎಂಬ ಜನಪ್ರಿಯ ಚಲನಚಿತ್ರ ಗೀತೆಯ ಸಾಲಿನಂತೆ ಸ್ವರ್ಗ ನರಕಗಳು, ನಮ್ಮ ಮೂರುದಿನದ ಬದುಕಿನಲ್ಲಿಯೇ ಹುದುಗಿ ಕುಳಿತಿವೆ. **'ಅಯ್ಯಾ ಎಂದರೆ ಸ್ವರ್ಗ ಎಲವೋ ಎಂದರೆ ನರಕ'** ಎಂಬ ಶರಣರ ನುಡಿಯಂತೆ, ಇನ್ನೊಬ್ಬರನ್ನು ಪ್ರೀತಿ ಗೌರವ ಮಾನವೀಯತೆಗಳಿಂದ ಕಾಣುವುದೇ ನಿಜವಾದ ಸ್ವರ್ಗ. ಪರರನ್ನು ಕೀಳಾಗಿ, ದ್ವೇಷ ಅಸೂಯೆಗಳಿಂದ ನೋಡುವುದೇ ನರಕ.

ಹೀಗಾಗಿ ಕೋಪವೆಂಬುದು ನಮ್ಮ ಬದುಕನ್ನು ನಾವೇ ನರಕವಾಗಿಸಿಕೊಳ್ಳುವ ಮಾರ್ಗ. **'ಕೋಪವೆಂಬುದು ಕೇಳು ಪಾಪದ ನೆಲೆಗಟ್ಟು. ಕೂಪದೊಳು ನೇಣು ಹರಿದಂತೆ ನರಕಕ್ಕೆ ಕೋಪಿ ತಾನಿಳಿವ'** ಎನ್ನುವ ಸರ್ವಜ್ಞನ ವಚನದಂತೆ, ಕೋಪ ನಮ್ಮನ್ನು ನಮಗೆ ಅರಿವಿಲ್ಲದಂತೆ ನರಕಕ್ಕೆ ನೂಕುತ್ತದೆ. 'ಕೋಪವೆಂಬುದು ಕೆಂಡದಂತೆ. ಅದನ್ನು ಬೇರೆಯವರ ಮೇಲೆ ಎಸೆಯ ಹೊರಟಾಗ ಅದು ಮೊದಲು ಸುಡುವುದು ನಮ್ಮ ಮುಷ್ಟಿಯನ್ನೇ' ಎನ್ನುತ್ತಾನೆ, ಗೌತಮ ಬುದ್ಧ. ಕೋಪ, ದ್ವೇಷವಾಗಿ ನಮ್ಮ ಮನಸ್ಸನ್ನೇ ಸುಡುತ್ತದೆ, ಬದುಕನ್ನೇ ನರಕವಾಗಿಸುತ್ತದೆ. ಅದೇ ಪ್ರೀತಿಸುವ ಮನಸ್ಥಿತಿ ಮನವನ್ನು ಸದಾ ತಿಳಿಯಾಗಿಸುತ್ತದೆ, ಸಂತೋಷವಾಗಿರಿಸುತ್ತದೆ. ಇಂದು ಎಲ್ಲೆಡೆ ಹೆಚ್ಚಿರುವ ಅಸಹನೆ, ಅಸಹಿಷ್ಣುತೆಯ ದಳ್ಳುರಿ ನಮ್ಮ ಬದುಕನ್ನು ಸುಡುವುದರ ಜೊತೆಗೆ ಜಗತ್ತನ್ನೂ ದಹಿಸುತ್ತಿದೆ. ಲಂಕೇಶ್ ರವರು ಬುದ್ಧನ ಕುರಿತಾಗಿ **'ಮೋಕ್ಷವನ್ನು ಅರಸುತ್ತ ಪ್ರೀತಿಯ ಬಂಧನದಲ್ಲಿ'** ಎಂಬ ಅದ್ಭುತ ಪ್ರಬಂಧವನ್ನು ಬರೆದಿದ್ದರು. ದ್ವೇಷವೆಂಬುದು ನರಕದ ಪಥವಾದರೆ, ಪ್ರೀತಿಯೇ ಮೋಕ್ಷದ ಸರಿಯಾದ ಮಾರ್ಗ.



# 9. ಪ್ರಪಂಚದ ಅತಿ ಕ್ರೂರ ಪ್ರಾಣಿ

ಒಮ್ಮೆ ಶಾಲಾಮಕ್ಕಳನ್ನು ಶೈಕ್ಷಣಿಕ ಪ್ರವಾಸಕ್ಕಾಗಿ ಮೃಗಾಲಯ ಒಂದಕ್ಕೆ ಕರೆದೊಯ್ಯಲಾಗಿತ್ತು. ಅಲ್ಲಿ ಹುಲಿ, ಸಿಂಹ, ಕರಡಿ, ಕತ್ತೆಕಿರುಬ, ಚಿಂಪಾಂಜಿ, ಗೊರಿಲ್ಲ, ಮುಂತಾದ ಭಯಾನಕ ಕಾಡುಪ್ರಾಣಿಗಳನ್ನು ಪಂಜರದಲ್ಲಿ ಕೂಡಿಹಾಕಿಟ್ಟಿದ್ದನ್ನು ಚಿಕ್ಕಮಕ್ಕಳು, ಮೂಕವಿಸ್ಮಿತರಾಗಿ ನೋಡುತ್ತಿದ್ದರು. ಹೀಗೆ ಬೇರೆ ಬೇರೆ ಪಂಜರಗಳಲ್ಲಿದ್ದ ಪ್ರಾಣಿ ಪಕ್ಷಿಗಳನ್ನು ವೀಕ್ಷಿಸುತ್ತಾ ಬಂದ ಮಕ್ಕಳಿಗೆ, ಗುಹೆಯಾಕಾರದ ಒಂದು ಕೋಣೆಯ ಮುಂದೆ 'ಈ ಪ್ರಪಂಚದ ಅತ್ಯಂತ ಕ್ರೂರ ಪ್ರಾಣಿ' ಎಂಬ ಫಲಕ ಕಣ್ಣಿಗೆ ಬಿತ್ತು. ಅವರು ಭಯಭೀತರಾಗಿಯೇ ಅಲ್ಲಿರುವ ಅತ್ಯಂತ ಕ್ರೂರಪ್ರಾಣಿ ಯಾವುದಿರಬಹುದು ಎಂಬ ಕುತೂಹಲದಿಂದ ಒಳಹೊಕ್ಕು ನೋಡಿದರೆ, ಅಲ್ಲಿ ಪಂಜರದ ಹಿಂದೆ ದೊಡ್ಡದೊಂದು ಕನ್ನಡಿ ಇರಿಸಲಾಗಿತ್ತು. ಒಳಹೊಕ್ಕವರಿಗೆ ತಮ್ಮ ಪ್ರತಿಬಿಂಬವೇ ಕಾಣಿಸುತ್ತಿತ್ತು ಮಕ್ಕಳಿಗೆ ಏನೂ ಅರ್ಥವಾಗಲಿಲ್ಲ. ಆಗ ಒಳಬಂದ ಶಿಕ್ಷಕರಿಗೆ 'ಇಲ್ಲಿ ಯಾವ ಪ್ರಾಣಿಯೂ ಇಲ್ಲವಲ್ಲ ಸರ್' ಎಂದು ಮಕ್ಕಳು ಹೇಳಿದರು. ಆಗ ಆ ಶಿಕ್ಷಕರು ನಸುನಗುತ್ತಾ 'ಮಕ್ಕಳೇ ಅಲ್ಲಿರುವ ಕನ್ನಡಿಯಲ್ಲಿ ಯಾರ ಪ್ರತಿಬಿಂಬ ಕಾಣಿಸುತ್ತಿದೆ ಹೇಳಿ?' ಎಂದು ಕೇಳಿದರು. ಆಗ ಮಕ್ಕಳು ಒಕ್ಕೊರಲಿನಿಂದ 'ನಮ್ಮದೇ ಪ್ರತಿಬಿಂಬ ಸರ್' ಎಂದು ಉತ್ತರಿಸಿದರು. ಆಗ ಶಿಕ್ಷಕರು 'ಅಂದರೆ ಈ ಪ್ರಪಂಚದಲ್ಲಿ ಮನುಷ್ಯನೇ ಅತ್ಯಂತ ಕ್ರೂರ ಪ್ರಾಣಿ. ಏಕೆಂದರೆ ಈ ಪ್ರಪಂಚದಲ್ಲಿ ತನಗೆ ಮಾತ್ರ ಬದುಕುವ ಹಕ್ಕಿರುವುದು ಎಂಬಂತೆ ಮನುಷ್ಯ ವರ್ತಿಸುತ್ತಾನೆ. ತನ್ನ ದುರಾಸೆಗಾಗಿ ಕಾಡುಗಳನ್ನು ಕಡಿದು ಪ್ರಾಣಿ ಪಕ್ಷಿಗಳಿಗೆ ವಾಸಕ್ಕೆ ಜಾಗವಿಲ್ಲದಂತೆ ಮಾಡುತ್ತಾನೆ. ಕಾಡುಪ್ರಾಣಿಗಳನ್ನು ಸಾಯಿಸಿ ಅವುಗಳ ಅಂಗಾಂಗಗಳನ್ನು ಮಾರಿ ಶ್ರೀಮಂತನಾಗುವಷ್ಟು ದುರಾಸೆ ಅವನದ್ದು. ಬುದ್ಧಿಶಕ್ತಿಯಲ್ಲಿ ಎಲ್ಲ ಪ್ರಾಣಿಗಳಿಗಿಂತಲೂ ಉನ್ನತ ಸ್ತರದಲ್ಲಿರುವ ಮನುಷ್ಯ, ಇಡೀ ಜಗತ್ತನ್ನು ತನ್ನ ನಿಯಂತ್ರಣದಲ್ಲಿರಿಸಿಕೊಳ್ಳಲು ಬಯಸುತ್ತಾನೆ. ಆದರೆ ಪ್ರಕೃತಿಯ ಮುಂದೆ ಅವನು ತೀರಾ ಕುಬ್ಜ ಎಂಬ ವಾಸ್ತವದ ಅರಿವು ಅವನಿಗಿಲ್ಲ ಹೀಗಾಗಿ ಮನುಷ್ಯನೇ ಈ ಪ್ರಪಂಚದ ಅತ್ಯಂತ ಕ್ರೂರ ಪ್ರಾಣಿ' ಎಂದು ನುಡಿದರು.

ಎಷ್ಟು ವಾಸ್ತವವಲ್ಲವೇ ಈ ವಿಚಾರ? ಡಿ.ವಿ.ಜಿ.ಯವರು ತಮ್ಮ ಕಗ್ಗದಲ್ಲಿ **'ಹುಲಿ ಕಪಿಗಳವಿತಿರದ ನರಜಂತುವೆಲ್ಲಿ?'** ಎನ್ನುತ್ತಾರೆ. ಮನುಷ್ಯ ಹೊರಗಿನಿಂದ ನಗುತ್ತಾ, ವಿಶ್ವಾಸದ ನಾಟಕವಾಡುತ್ತಾ, ಒಳಗಿನಿಂದ ತನ್ನಲ್ಲಿ ಅಡಕವಾಗಿರುವ ಪ್ರಾಣಿಜನ್ಯ ಗುಣಗಳನ್ನು ತನ್ನವರ ಮೇಲೇ ಪ್ರದರ್ಶಿಸುವ ಕೆಟ್ಟ ಕ್ರೌರ್ಯವನ್ನು ತೋರಿಸುತ್ತಾನೆ.

ಇದಲ್ಲದೇ ಅಭಿವೃದ್ಧಿಯ ನೆಪದಲ್ಲಿ ಮಾತೃ ಸ್ವರೂಪಿ ಪ್ರಕೃತಿಯ ಮೇಲೇ ಸತತ ದಾಳಿ ನಡೆಸುತ್ತಾನೆ. ಇತ್ತೀಚೆಗೆ ನಮ್ಮ ಮನೆಯ ಹತ್ತಿರವಿದ್ದ ರಸ್ತೆಯ ಅಗಲೀಕರಣಕ್ಕೆ ಅಲ್ಲಿದ್ದ ಹಲವಾರು ಮರಗಳ ಮಾರಣ ಹೋಮ ಮಾಡಲಾಯಿತು. ಆ ಮರಗಳಲ್ಲಿ ಗೂಡು ಕಟ್ಟಿದ್ದ, ಅವುಗಳ ಮೇಲೆ ಬಂದು ಕೂರುತ್ತಿದ್ದ, ಅವುಗಳ ಹಣ್ಣುಗಳನ್ನು ತಿಂದು ನಲಿಯುತ್ತಿದ್ದ ವಿವಿಧ ರೀತಿಯ ಪಕ್ಷಿಗಳು ನಾಪತ್ತೆಯಾದವು. ಅವುಗಳ ಸುಮಧುರ ಇಂಚರ ಕೇಳದಂತಾಯ್ತು.

ಅಭಿವೃದ್ಧಿ, ಪ್ರಗತಿಯ ನೆಪದಲ್ಲಿ ಮನುಷ್ಯನ ಈ ಅತಿಕ್ರಮಣ ನಿಜಕ್ಕೂ ಆತಂಕಕಾರಿ. ದಿನನಿತ್ಯವೂ ನನ್ನ ಪುಟ್ಟಮಗಳ ಜೊತೆ ಈ ಹಕ್ಕಿಗಳ ಚಟುವಟಿಕೆಗಳನ್ನು ಗಮನಿಸುತ್ತಿದ್ದೆ. ಅವುಗಳ ಜೀವನ ಶೈಲಿಯನ್ನು ಕುತೂಹಲದ ಕಣ್ಣುಗಳೊಂದಿಗೆ ನೋಡುತ್ತಿದ್ದ ಆಕೆಗೆ ಪ್ರಕೃತಿ ಕಲಿಸುವ ವಿಶಿಷ್ಟ ಪಾಠಗಳ ಕುರಿತು ವಿವರಿಸುತ್ತಿದ್ದೆ. ಇವೆಲ್ಲವೂ ದಿನೇದಿನೇ ಕಣ್ಮರೆಯಾದರೆ ಈ ಭುವಿಯ ಭವಿಷ್ಯ ಹಾಗೆಯೇ ಅದರ ಜೊತೆಗೇ ಬದುಕಬೇಕಾದ ಮುಂದಿನ ಪೀಳಿಗೆಯ ಭವಿಷ್ಯ ಏನಾದೀತು ಎಂದು ಯೋಚಿಸಿದಾಗ ನಿಜಕ್ಕೂ ಆತಂಕವಾಯಿತು. ಮನುಷ್ಯನ ಈ ಕ್ರೌರ್ಯವೇ, ದಿನದಿನಕ್ಕೂ ಹೆಚ್ಚುತ್ತಿರುವ ಪ್ರಾಣಿ-ಮಾನವ ಸಂಘರ್ಷಗಳಿಗೆ ಕಾರಣವಲ್ಲವೇ? ಈ ಕ್ರೌರ್ಯವನ್ನು ನಿಯಂತ್ರಿಸಿಕೊಂಡು ಭೂಮಿಯ ಮೇಲೆ ಬದುಕುವ ಕೋಟ್ಯಂತರ ಜೀವಿಗಳ ಜೊತೆ ಹೊಂದಾಣಿಕೆ ಮಾಡಿಕೊಂಡು ಸಹಿಷ್ಣುತೆಯಿಂದ ಬದುಕಬೇಕೆಂದು ಅವನ ವಿವೇಕಕ್ಕೆ ಹೊಳೆದರೆ ಲೋಕಕ್ಕೆ ಹಿತವಲ್ಲವೇ?

# 10. ಮೂಗು ತೂರಿಸುವ ಮುನ್ನ ಎಚ್ಚರವಿರಲಿ

ಒಂದು ತತ್ವಜ್ಞಾನಿ ಕಪ್ಪೆ ಇತ್ತು. ಅದಕ್ಕೆ ತನ್ನ ತತ್ವ, ಸಿದ್ಧಾಂತದ ನೆಲೆಯಲ್ಲಿ ಬೇರೆಯವರ ಬದುಕನ್ನು ವಿಶ್ಲೇಷಿಸುವ ಹವ್ಯಾಸ. ತನ್ನ ಅನುಮಾನ, ಪ್ರಶ್ನೆಗಳನ್ನು ಬೇರೆಯವರ ತಲೆಯೊಳಗೆ ತೂರಿ ಬಿಟ್ಟು ತಾನು ತಣ್ಣಗೆ ಕೂರುತ್ತಿತ್ತು. ದಿನವೂ ಅದರ ಗೂಡಿನ ಎದುರಿನಲ್ಲಿ ಶತಪದಿಯೊಂದು ಹಾದು ಹೋಗುತ್ತಿತ್ತು. ತನ್ನ ನೂರು ಕಾಲುಗಳಿಂದ ಶತಪದಿ ಚಲಿಸುವುದನ್ನು ದಿನವೂ ನೋಡುತ್ತಿದ್ದ ಕಪ್ಪೆಗೆ ಅದರ ತಲೆಯಲ್ಲಿ ಒಂದು ಪ್ರಶ್ನೆ ಕೊರೆಯತೊಡಗಿತು. ಈ ಶತಪದಿ ನಡೆಯುವಾಗ ತನ್ನ ನೂರುಕಾಲುಗಳಲ್ಲಿ ಯಾವ ಕಾಲನ್ನು ಮೊದಲು ಮುಂದೆ ಇಡುತ್ತದೆ ಎಂಬುದೇ ಕಪ್ಪೆಯ ತಲೆ ಹೊಕ್ಕಿದ್ದ ಪ್ರಶ್ನೆ! ಇದಕ್ಕೆ ಉತ್ತರ ಸಿಗದ ಕಪ್ಪೆ ಒಂದು ದಿನ ಶತಪದಿಯನ್ನು ತಡೆದು ನಿಲ್ಲಿಸಿ, ಕೇಳಿಯೇ ಬಿಟ್ಟಿತು. 'ಅಣ್ಣಾ ನಾನು ನಿನ್ನನ್ನು ದಿನವೂ ಗಮನಿಸುತ್ತೇನೆ. ನೂರು ಕಾಲುಗಳನ್ನು ಹೊಂದಿರುವ ನಿನಗೆ ನನ್ನ ವಿಶೇಷ ಅಭಿನಂದನೆಗಳು. ಆದರೆ ನನ್ನ ತಲೆಯಲ್ಲಿ ಈ ಬಗ್ಗೆ ಪ್ರಶ್ನೆಯೊಂದು ಕೊರೆಯುತ್ತಿದೆ. ನೀನು ನಡೆಯುವಾಗ ನಿನ್ನ ನೂರು ಕಾಲುಗಳಲ್ಲಿ ಯಾವ ಕಾಲನ್ನು ಮೊದಲಿಗೆ ಇಡುತ್ತೀ?'

ಈ ಪ್ರಶ್ನೆಯನ್ನು ಆಲಿಸಿದ ಶತಪದಿ ಕಕ್ಕಾಬಿಕ್ಕಿಯಾಯಿತು. ಅದು ಈವರೆಗೂ ತನ್ನ ಚಲನೆಯ ಬಗ್ಗೆ ಯೋಚಿಸಿಯೇ ಇರಲಿಲ್ಲ. ತನ್ನ ಪಾಡಿಗೆ ತಾನು ನೂರುಕಾಲುಗಳಲ್ಲಿ ನಡೆದುಕೊಂಡಿತ್ತು. ಈಗ ಈ ಕಪ್ಪೆಯ ಮಾತನ್ನಾಲಿಸಿದ ನಂತರ, 'ಹೌದಲ್ಲ, ನಾನು ಯಾವ ಕಾಲು ಮೊದಲು ಇಟ್ಟು ನಡೆಯುತ್ತೇನೆ?' ಎಂಬ ಚಿಂತೆ ಅದನ್ನು ತೀವ್ರವಾಗಿ ಕಾಡಲಾರಂಭಿಸಿತು. ಎಷ್ಟರಮಟ್ಟಿಗೆ ಈ ಚಿಂತೆ ಶತಪದಿಯನ್ನು ಆವರಿಸಿಕೊಂಡು ಬಿಟ್ಟಿತು ಎಂದರೆ ಮುಂದಕ್ಕೆ ಅಡಿ ಇಡಲಾರದಷ್ಟು! ಈ ಚಿಂತೆಯ ತೀವ್ರತೆಯಲ್ಲಿ ಶತಪದಿ ಅಲ್ಲಿಯೇ ಕುಸಿದು ಬಿತ್ತು!

ಕೆಲವೊಮ್ಮೆ ನಮ್ಮ ನಡುವೆ ಇರುವ ಬುದ್ಧಿವಂತರು ಸಹಾ ಇದೇ ಕೆಲಸವನ್ನು ಮಾಡುತ್ತಿರುತ್ತಾರೆ. ಇನ್ನೊಬ್ಬರ ಕೆಲಸ ಕಾರ್ಯದಲ್ಲಿ ಮೂಗು ತೂರಿಸಿ, ತಮ್ಮ ಅಭಿಪ್ರಾಯವೇ ಸರಿ ಎಂಬ ಗುಂಗಿಹುಳುವನ್ನು ಅವರ ತಲೆಯಲ್ಲಿ ತೂರಿಬಿಡುತ್ತಾರೆ. ಮನೆ ಕಟ್ಟುವ ಸಂದರ್ಭ ಇರಬಹುದು, ಮಕ್ಕಳ ವಿದ್ಯಾಭ್ಯಾಸ ಇರಬಹುದು ಹೊಸತೊಂದು ಉದ್ಯೋಗಕ್ಕೆ, ಪ್ರಯತ್ನಕ್ಕೆ ಕೈಹಾಕುವ ವಿಚಾರವಿರಬಹುದು. ಇಂತಹ ಸಂದರ್ಭದಲ್ಲಿ ಒಬ್ಬೊಬ್ಬರದು ಒಂದೊಂದು ರೀತಿಯ ಅಗತ್ಯ, ಅವಶ್ಯಕತೆ ಹಾಗೂ ಸನ್ನಿವೇಶವಿರುತ್ತದೆ. ಆಗ ಸಲಹೆ ಸೂಚಿಸುವ ಭರದಲ್ಲಿ ವಿಭಿನ್ನ ರೀತಿಯ ಪ್ರಶ್ನೆ ಸಂದೇಹಗಳನ್ನು ಅವರ ತಲೆಯಲ್ಲಿ ತುರುಕಿದ್ದೇ ಆದರೆ ಮೊದಲೇ ಸಂದೇಹದಲ್ಲಿರುವ ವ್ಯಕ್ತಿ, ಇನ್ನಷ್ಟು ಗೊಂದಲಕ್ಕೆ ಒಳಗಾಗುವ ಸಾಧ್ಯತೆ ಇರುತ್ತದೆ. ಇನ್ನು ಕೆಲವರ ಬದುಕು ಅವರ ನಂಬಿಕೆಯ ಮೇಲೆ ಅವಲಂಬಿತವಾಗಿರುತ್ತದೆ. ನಾವು ಇನ್ನೊಬ್ಬರ ನಂಬಿಕೆಗಳನ್ನು ನಮ್ಮ ತಲೆಯಲ್ಲಿರುವ ಸಂದೇಹ, ಪ್ರಶ್ನೆಗಳೊಂದಿಗೆ ಅಲ್ಲಾಡಿಸುವ ಕೆಲಸವನ್ನು ಎಂದೂ ಮಾಡಬಾರದು. ಹಾಗೆಯೇ ನಮ್ಮ ನಂಬಿಕೆಯೇ ಸರಿ ಅದನ್ನು ಬೇರೆಯವರೂ ಒಪ್ಪಲೇಬೇಕು ಎಂಬ ರೀತಿಯ ವರ್ತನೆಯೂ ಸಲ್ಲ. ಇದರಿಂದ ಇನ್ನೊಬ್ಬರ ಬದುಕು, ನಂಬಿಯೂ ನಂಬದಿರುವ ಇರ್ಬಂದಿ ಸ್ಥಿತಿಯನ್ನು ತಲುಪುವ ಸಾಧ್ಯತೆ ಇರುತ್ತದೆ ಎಂಬುದನ್ನು ನಾವೆಂದಿಗೂ ಮರೆಯಬಾರದು.



# 11. ನಮ್ಮ ಭವಿಷ್ಯ ನಮ್ಮ ಕೈಯಲ್ಲೇ

ಒಂದು ಊರಿನಲ್ಲಿ ಒಬ್ಬ ತತ್ವಜ್ಞಾನಿ ಇದ್ದ. ಅವನು ಹೇಳಿದ್ದೆಲ್ಲ ನಿಜವಾಗುತ್ತಿತ್ತು. ಆ ಊರಿನ ಇಬ್ಬರು ಕಿಡಿಗೇಡಿ ಹುಡುಗರಿಗೆ ಏನಾದರೂ ಮಾಡಿ, ಇವನ ಬಾಯಿಂದ ಸುಳ್ಳು ಹೊರಡಿಸಬೇಕೆಂಬ ಕೆಟ್ಟ ಆಸೆ. ಅದಕ್ಕಾಗಿ ಅವರು ಒಂದು ಉಪಾಯ ಮಾಡಿದರು.

ಒಂದು ಪುಟಾಣಿ ಹಕ್ಕಿಮರಿಯನ್ನು ತಮ್ಮ ಮುಷ್ಟಿಯೊಳಗೆ ಹಿಡಿದುಕೊಂಡು ಹೋಗಿ, ಇದರೊಳಗೆ ಇರುವುದೇನು ಎಂದು ತತ್ವಜ್ಞಾನಿಯನ್ನು ಪ್ರಶ್ನಿಸಿದರು. ಎಲ್ಲವನ್ನು ಬಲ್ಲವನಾದ ಆತ 'ಅದೊಂದು ಪುಟ್ಟ ಹಕ್ಕಿಮರಿ' ಎಂದು ಉತ್ತರಿಸಿದ. ಮುಂದಿನ ಪ್ರಶ್ನೆಗೆ ಅವನು ಕೊಡುವ ಉತ್ತರ ಸುಳ್ಳಾಗಲೇಬೇಕು ಆ ರೀತಿ ಇತ್ತು, ಅವರ ಯೋಜನೆ! 'ಅದು ಬದುಕಿದೆಯೋ ಇಲ್ಲ ಸತ್ತಿದೆಯೋ' ಎಂಬುದಾಗಿತ್ತು ಅವರ ಪ್ರಶ್ನೆ. ತತ್ವಜ್ಞಾನಿ ಹೇಳುವ ಉತ್ತರವನ್ನು ಸುಳ್ಳು ಮಾಡಲು ಆತ ಹಕ್ಕಿಮರಿ ಬದುಕಿದೆ ಎಂದರೆ, ಅದನ್ನು ಆ ಕಿಡಿಗೇಡಿ ಹುಡುಗರು ಮುಷ್ಟಿಯಿಂದ ಹಿಚುಕಿ, ಸಾಯಿಸಿಬಿಡುತ್ತಿದ್ದರು. ಅದು ಸತ್ತಿದೆ ಎಂದರೆ ಮುಷ್ಟಿ ಬಿಚ್ಚಿ ಹಾರಲು ಬಿಡುತ್ತಿದ್ದರು. ಇವರ ಉದ್ದೇಶವನ್ನರಿತ ತತ್ವಜ್ಞಾನಿ 'ಅದರ ಭವಿಷ್ಯ ನಿಮ್ಮ ಕೈನಲ್ಲೇ ಇದೆ' ಎಂದು ಉತ್ತರಿಸಿದ!

ನಮ್ಮ ಭವಿಷ್ಯ ನಮ್ಮ ಕೈಯಲ್ಲಿಯೇ ಇರುತ್ತದೆ. ಅದನ್ನು ಹಿಸುಕಿ ಸಾಯಿಸುವ ಅಥವಾ ಸ್ವಚ್ಛಂದವಾಗಿ ಹಾರಿ ಬಿಡುವ ಶಕ್ತಿ ನಮ್ಮ ಕೈಯಲ್ಲೇ ಇದೆ. ನಾವೇ ನಮ್ಮ ಭವಿಷ್ಯದ ಶಿಲ್ಪಿಗಳು. ನಮ್ಮೊಳಗಿರುವ ಶಿಲೆಯನ್ನು ವ್ಯಕ್ತಿತ್ವವೆಂಬ ಸುಂದರ ಶಿಲ್ಪವಾಗಿ ರೂಪಿಸಿಕೊಳ್ಳಬೇಕಾದವರು ನಾವೇ. ಅದಕ್ಕೆ ಅತಿ ಮುಖ್ಯವೆಂದರೆ ಸಿಕ್ಕಿರುವ ಸದವಕಾಶವನ್ನು ಸರಿಯಾಗಿ ಉಪಯೋಗಿಸಿಕೊಳ್ಳುವ ಮನಸ್ಥಿತಿ. ಇದನ್ನು ಇಂಗ್ಲೀಷಿನಲ್ಲಿ **Grabbing the opportunity** ಎನ್ನುತ್ತಾರೆ. ನಾನು ಶಾಲಾ ಕಾಲೇಜುಗಳಲ್ಲಿ ಮಕ್ಕಳಿಗೆ ತರಬೇತಿಯನ್ನು ನೀಡುವಾಗ, ಕಾರ್ಯಕ್ರಮ ಮುಗಿದ ನಂತರ ನಿಮ್ಮಲ್ಲಿ ಯಾರಾದರೂ ಕಾರ್ಯಕ್ರಮದ ಕುರಿತು ನಿಮ್ಮ ಅನಿಸಿಕೆಗಳನ್ನು ಅಭಿಪ್ರಾಯಗಳನ್ನು ಹೇಳಿ

ಅಥವಾ ಪ್ರಶ್ನೆಗಳಿದ್ದರೆ ಕೇಳಿ ಎಂದು ಹೇಳುತ್ತೇನೆ. ಆದರೆ ಬಹುಪಾಲು ಕಡೆಗಳಲ್ಲಿ ಈ ಮುಕ್ತ ಆಹ್ವಾನವನ್ನು ಅವಕಾಶವನ್ನು ಯಾರೂ ಸ್ವೀಕರಿಸುವುದೇ ಇಲ್ಲ. ನಾನೇ ಒತ್ತಾಯ ಮಾಡಿ ಕರೆದ ನಂತರ ಕೆಲವರು ಮುಂದೆ ಬರುತ್ತಾರೆ.

ಇವೆಲ್ಲವೂ ನಮ್ಮ ಭವಿಷ್ಯವನ್ನು ನಾವು ರೂಪಿಸಿಕೊಳ್ಳಲು ಸಿಗುವ ಚಿಕ್ಕ ಚಿಕ್ಕ ಅವಕಾಶಗಳು. ಅವಕಾಶಗಳನ್ನು ಸೂಕ್ತವಾಗಿ ಬಳಸಿಕೊಳ್ಳುವವರು ತಮ್ಮ ಭವಿಷ್ಯವನ್ನು ಸಹ ಸುಂದರವಾಗಿ ರೂಪಿಸಿಕೊಳ್ಳುತ್ತಾರೆ. ನಮ್ಮ ಭವಿಷ್ಯ ನಮ್ಮ ಕೈ ರೇಖೆಯಾಗಲಿ, ಹಣೆಬರಹದಲ್ಲಾಗಲಿ ಖಂಡಿತ ಅಡಗಿಲ್ಲ. ಅದು ಸೂಕ್ತ ಸಮಯದಲ್ಲಿ ನಾವು ತೆಗೆದುಕೊಳ್ಳುವ ಸೂಕ್ತ ನಿರ್ಧಾರವನ್ನು ಅವಲಂಬಿಸಿರುತ್ತದೆ.



# 12. ಉದ್ದೇಶ ಒಳ್ಳೆಯದಾಗಿದ್ದಾಗ ಎಲ್ಲವೂ ಒಳಿತಾಗುತ್ತದೆ

ಒಮ್ಮೆ ಒಂದು ಕಾಡಿನಲ್ಲಿ ಗರ್ಭಿಣಿ ಹರಿಣಿಯೊಂದು ತನ್ನ ಪ್ರಸವಕ್ಕಾಗಿ ಸೂಕ್ತ ಸ್ಥಳವನ್ನು ಅರಸುತ್ತಿತ್ತು. ತನ್ನ ಸಂತಾನವನ್ನು ಸರಿಯಾದ ಸ್ಥಳದಲ್ಲಿ ಈ ಜಗತ್ತಿಗೆ ತರುವ ಆಲೋಚನೆ ಅದರದ್ದು. ಆದರೆ ಇದ್ದಕ್ಕಿದ್ದಂತೆ ಕಾಡಿನಲ್ಲಿ ಎದ್ದ ಕಾಳ್ಗಿಚ್ಚು, ಆ ಗರ್ಭಿಣಿ ಜಿಂಕೆಯನ್ನು ಆತಂಕದಿಂದ ಓಡುವಂತೆ ಮಾಡಿತು. ಓಡುತ್ತಾ ಓಡುತ್ತಾ ಅದು ಒಂದು ನದಿ ದಂಡೆಗೆ ಬಂದಿತು. ಮುಂದೆ ಹೋಗುವಂತಿಲ್ಲ, ಹಿಂದಿನಿಂದ ಕಾಳ್ಗಿಚ್ಚು. ಅದೇ ಸಮಯಕ್ಕೆ ಒಂದು ಹುಲಿ ಅದನ್ನು ಕಬಳಿಸಲು ಸಿದ್ಧವಾಗಿ ಕುಳಿತಿತ್ತು. ಇನ್ನೊಂದು ಬದಿಯಿಂದ ವ್ಯಾಧನೊಬ್ಬ ಜಿಂಕೆಯನ್ನು ಬೇಟೆಯಾಡಲು ತನ್ನ ಬಿಲ್ಲಿಗೆ ಬಾಣವೇರಿಸಿ ಸಿದ್ಧನಾಗಿದ್ದ. ಇಂತಹ ವಿಷಮ ಪರಿಸ್ಥಿತಿಯಲ್ಲಿ ತನ್ನ ಹಾಗೂ ತನ್ನ ಸಂತಾನದ ಕಥೆ ಮುಗಿಯಿತೆಂದು ಜಿಂಕೆ ಚಿಂತಿತವಾಯಿತು. ಆದರೆ ಅದೇ ಸಮಯಕ್ಕೆ ಇದ್ದಕ್ಕಿದ್ದಂತೆ ಕಾರ್ಮೋಡ ಕವಿದು, ಜೋರಾಗಿ ಸುರಿದ ಮಳೆ ಕಾಳ್ಗಿಚ್ಚನ್ನು ಹಠಾತ್ತನೆ ನಂದಿಸಿತು. ಆಗ ಆಗಸದಲ್ಲಿ ಹೊಮ್ಮಿದ ಕೋಲ್ಮಿಂಚೊಂದು ಆ ಬೇಟೆಗಾರನ ಕಣ್ಣಿಗೆ ಬಡಿದು ಅವನನ್ನು ಕುರುಡನನ್ನಾಗಿಸಿ, ಅವನು ಬಿಟ್ಟ ಬಾಣ ಗುರಿ ತಪ್ಪಿ ಬಾಯ್ಕಳೆದು ನಿಂತಿದ್ದ ವ್ಯಾಘ್ರನನ್ನು ಸಾಯಿಸಿಬಿಟ್ಟಿತು! ಹೀಗೆ ಏಕಾಏಕಿ ಸಂಭವಿಸಿದ ಘಟನೆಗಳು ಜಿಂಕೆಯ ಬದುಕಲ್ಲಿ ಕವಿದಿದ್ದ ಕಾರ್ಮೋಡವನ್ನು ದೂರಾಗಿಸಿ ಅದು ನಿಶ್ಚಿಂತೆಯಿಂದ ತನ್ನ ಮರಿಗೆ ಜನ್ಮ ನೀಡುವಂತಾಯ್ತು.

ನಾವು ಮಾಡುವ ಕೆಲಸದ ಉದ್ದೇಶ ಒಳ್ಳೆಯದಾಗಿದ್ದರೆ, ಅದರಲ್ಲಿ ಪ್ರಾಮಾಣಿಕತೆ ಇದ್ದರೆ, ಪರಿಸ್ಥಿತಿ ಎಷ್ಟೇ ಕಷ್ಟಕರವಾಗಿದ್ದರೂ, ಅದು ಅನುಕೂಲಕರ ವಾತಾವರಣವಾಗಿ ಪರಿವರ್ತಿತವಾಗಬಹುದು. ನಮ್ಮ ಕರ್ತವ್ಯವನ್ನು ತಾಳ್ಮೆಯಿಂದ ಪ್ರಾಮಾಣಿಕವಾಗಿ ನಿರ್ವಹಿಸುವುದಷ್ಟೇ ನಮ್ಮ ಕೆಲಸ. ಹೊರಗಿನ ಸನ್ನಿವೇಶಗಳು ನಮ್ಮ ನಿಯಂತ್ರಣದಲ್ಲಿ ಇರುವುದಿಲ್ಲ. ಇದಕ್ಕಾಗಿ ಕೊರಗುತ್ತಾ

ಕೂರುವುದರಲ್ಲಿ ಯಾವುದೇ ಅರ್ಥವಿಲ್ಲ. ನಮ್ಮ ಕಾರ್ಯವನ್ನು ನಮ್ಮ ಆತ್ಮತೃಪ್ತಿಗೆ ಅನುಗುಣವಾಗಿ, ಒಳ್ಳೆಯ ಮನಸ್ಸಿನಿಂದ ನಿರ್ವಹಿಸುತ್ತಿದ್ದರೆ ಪ್ರತಿಕೂಲ ವಾತಾವರಣವೂ, ಅನುಕೂಲಕರವಾಗಿ ಬದಲಾಗಬಹುದು.



# 13. ಮೌಲ್ಯವೆಂಬ ನಿಲದ ಅಮೃತಧಾರೆ

2012 ಇಸವಿಯಲ್ಲಿ ಸ್ಪೇನ್ ದೇಶದ ನವ್ಹಾ ಪ್ರಾವಿನ್ಸ್ ನಲ್ಲಿರುವ ಬುರ್ಲಾಡಾ ಎಂಬಲ್ಲಿ ನಡೆಯುತ್ತಿದ್ದ ಗುಡ್ಡಗಾಡು ಓಟದ ಸ್ಪರ್ಧೆಯೊಂದರ ಕೊನೆಯಲ್ಲಿ ಒಂದು ವಿಶಿಷ್ಟ ಘಟನೆ ಸಂಭವಿಸುತ್ತದೆ. ಈ ಸ್ಪರ್ಧೆಯಲ್ಲಿ ಎಲ್ಲರಿಗಿಂತಲೂ ದೊಡ್ಡ ಅಂತರದಲ್ಲಿ ಮುಂದಿದ್ದು, ಮೊದಲ ಸ್ಥಾನ ಗಳಿಸುವ ಎಲ್ಲ ಸಾಧ್ಯತೆಗಳಿದ್ದ ಲಂಡನ್ ಒಲಂಪಿಕ್ಸ್ ನ ೩೦೦೦ ಮೀಟರ್ ಓಟದ ಸ್ಪರ್ಧೆಯ ಕಂಚಿನ ಪದಕ ವಿಜೇತ, ಕೀನ್ಯಾ ದೇಶದ ಏಬಲ್ ಮ್ಯೂಟಾಯ್, ಓಟದ ಕೊನೆಯ ಲ್ಯಾಪ್ ನಲ್ಲಿ ಗೊಂದಲಕ್ಕೆ ಒಳಗಾಗಿ ಅಂತಿಮ ಗೆರೆ ತಲುಪುವ ಮೊದಲೇ ತಾನು ಗೆದ್ದಿದ್ದೇನೆ ಎಂದು ಸುಮ್ಮನೆ ನಿಂತುಬಿಡುತ್ತಾರೆ. ಅವರ ಹಿಂದೆಯೇ ಎರಡನೇ ಸ್ಥಾನದಲ್ಲಿದ್ದ ಸ್ಪೇನ್ ದೇಶದ ಇವಾನ್ ಫರ್ನಾಂಡಿಸ್ ಅನಾಯ, ಹಿಂದಿನಿಂದ 'ನೀನು ಅಂತಿಮಗೆರೆಯನ್ನು ಇನ್ನೂ ಮುಟ್ಟಿಲ್ಲ.. ಓಡು ಓಡು' ಎಂದು ಸ್ಪಾನಿಷ್ ಭಾಷೆಯಲ್ಲಿ ಕೂಗಿ ಹೇಳುತ್ತಾರೆ. ಆದರೆ ಸ್ಪಾನಿಷ್ ಭಾಷೆ ಅರಿಯದ ಮ್ಯುಟಾಯ್, ಇದನ್ನು ಅರ್ಥ ಮಾಡಿಕೊಳ್ಳದೇ ಅಲ್ಲಿಯೇ ನಿಂತಿರುತ್ತಾರೆ. ಆಗ ಇವಾನ್ ಫರ್ನಾಂಡಿಸ್, ಮ್ಯುಟಾಯನ್ನು ಮುಂದಕ್ಕೆ ತಳ್ಳಿ ಗೆಲುವಿನ ಗೆರೆ ದಾಟಿಸಿ, ಅವರಿಗೆ ಚಿನ್ನದ ಪದಕ ಸಿಗುವಂತೆ ಮಾಡುತ್ತಾರೆ ಹಾಗೂ ತಾನು ಬೆಳ್ಳಿ ಪದಕಕ್ಕೆ ತೃಪ್ತರಾಗುತ್ತಾರೆ.

ಸ್ಪರ್ಧೆ ಮುಗಿದ ನಂತರ ಪತ್ರಿಕಾ ವರದಿಗಾರರು ಇವಾನ್ ಫರ್ನಾಂಡಿಸ್ ಅನಾಯ ಅವರನ್ನು 'ನೀವೇಕೆ ನಿಮಗೆ ಚಿನ್ನದ ಪದಕ ಗೆಲ್ಲುವ ಅವಕಾಶವನ್ನು ಬಿಟ್ಟುಕೊಟ್ಟಿರಿ?' ಎಂದು ಪ್ರಶ್ನಿಸಿದಾಗ, 'ಈ ಓಟದ ಸ್ಪರ್ಧೆಯಲ್ಲಿ ಮ್ಯುಟಾಯ್ ಮೊದಲಿಂದಲೂ ಬಹಳ ಮುನ್ನಡೆಯಲ್ಲಿದ್ದರು. ಹೀಗಾಗಿ ಚಿನ್ನದ ಪದಕ ಗೆಲ್ಲಲು ಅವರೇ ಅರ್ಹರಾಗಿದ್ದರು' ಎಂದು ಉತ್ತರಿಸುತ್ತಾರೆ. 'ಆದರೂ ನೀವು ನಿಯಮದ ಅನುಸಾರವಾಗಿಯೇ ವಿಜೇತರಾಗಬಹುದಿತ್ತು. ಕೈಯಲ್ಲಿದ್ದ ಗೆಲುವನ್ನು ನೀವೇಕೆ ಬಿಟ್ಟುಕೊಟ್ಟಿರಿ?' ಎಂದು ಪ್ರಶ್ನಿಸಿದ ವರದಿಗಾರರಿಗೆ ಇವಾನ್ ಫರ್ನಾಂಡಿಸ್ ಕೊಟ್ಟ ಉತ್ತರ ಬದುಕಿನಲ್ಲಿ ಮೌಲ್ಯದ ಮಹತ್ವ ಎಷ್ಟು ಎಂಬುದನ್ನು ಎತ್ತಿ ಹಿಡಿಯುತ್ತದೆ.

‘ಹೌದು ನಾನೇ ಗೆಲ್ಲಬಹುದಿತ್ತು. ಆದರೆ ಅದು ಅರ್ಹ ಗೆಲುವಾಗುತ್ತಿತ್ತೇ? ಮುನ್ನಡೆಯಲ್ಲಿದ್ದ ವ್ಯಕ್ತಿ ತನಗೆ ಅರಿವಿಲ್ಲದೇ ಗೊಂದಲದಲ್ಲಿರುವಾಗ ಅವನನ್ನು ದಾಟಿ ಮುನ್ನುಗ್ಗಿ ಗೆಲ್ಲುವುದು ನಿಜವಾದ ಗೆಲುವಲ್ಲ. ಹಾಗೆ ಗೆದ್ದಿದ್ದರೆ ನನ್ನ ಅಮ್ಮ ಏನೆಂದುಕೊಳ್ಳುತ್ತಿದ್ದಳು? ಇದು ಅವಳು ಹೇಳಿಕೊಟ್ಟ ಮೌಲ್ಯಗಳಿಗೆ ವಿರುದ್ಧವಲ್ಲವೇ?’

ಎಂತಹ ವಿಶೇಷವಾಗಿದೆಯಲ್ಲ ಈ ಚಿಂತನೆ, ಈ ಕ್ರೀಡಾ ಸ್ಫೂರ್ತಿ? ಇಂದು ಹೇಗಾದರೂ ಸರಿ ನಾವೇ ಗೆಲ್ಲಬೇಕು ಎಂಬ ಮನಸ್ಥಿತಿಯವರೇ ಎಲ್ಲೆಡೆಯೂ ಕಾಣಿಸುತ್ತಾರೆ. ತಮ್ಮ ಮಕ್ಕಳು ಹೇಗಾದರೂ ಸರಿ, ಮೊದಲ ಸ್ಥಾನ ಗಳಿಸಲೇಬೇಕು ಎಂದು ಹಪಹಪಿಸುವ ಪೋಷಕರು, ಅದಕ್ಕಾಗಿ ತಮ್ಮ ಮಕ್ಕಳ ಮೇಲೆ ಇನ್ನಿಲ್ಲದ ಒತ್ತಡ ಹೇರುತ್ತಾರೆ. ತಾನು ಗೆಲ್ಲುವುದರ ಜೊತೆಗೆ ಇನ್ನೊಬ್ಬರನ್ನೂ ಗೆಲ್ಲಿಸುವ ಯೋಚನೆ ನಮ್ಮಲ್ಲಿರಬೇಕು. ಇದಕ್ಕೆ **Win-Win situation** ಎನ್ನುತ್ತಾರೆ. ‘ಸ್ಪರ್ಧೆಯಿಂದ ನಾವು ಗುರಿ ತಲುಪಬಹುದು. ಆದರೆ ಅಲ್ಲಿಂದ ಮುಂದೆ ಪ್ರಗತಿ ಸಾಧಿಸಲು ಸಹಕಾರವೇ ಬೇಕು’ ಎನ್ನುತ್ತಾರೆ ಫ್ರಾಂಕ್ ರೂಸ್ವೆಲ್ಟ್. ತಂಡವಾಗಿ ಯಶಸ್ವಿಗೊಳಿಸಲು ಎಲ್ಲರೂ ಗೆಲ್ಲಬೇಕೆಂಬ ಸಹಕಾರೀ ಮನೋಭಾವವೇ ಅತ್ಯಗತ್ಯ. ಹಾಗೆಯೇ ನಮ್ಮ ಸಾಮರ್ಥ್ಯ ನಮ್ಮ ಗೆಲುವಿನ ಮೂಲವಾಗಬೇಕೇ ವಿನಃ ಬೇರೆಯವರ ದೌರ್ಬಲ್ಯವಲ್ಲ ಎಂಬ ಮೌಲ್ಯವನ್ನು ಇವಾನ್ ಫರ್ನಾಂಡಿಸ್ ನ ತಾಯಿ, ಅವನ ಬಾಲ್ಯದಿಂದಲೇ ಅವನಲ್ಲಿ ತುಂಬಿದ್ದಳು. ಇಂತಹ ಮೌಲ್ಯ, ಮಾನವೀಯತೆಗಳನ್ನು ಸರಿಯಾಗಿ ಮುಂದಿನ ಪೀಳಿಗೆಗೆ ದಾಟಿಸುವುದು ನಮ್ಮೆಲ್ಲರ ಕರ್ತವ್ಯವಲ್ಲವೇ?



# 14. ನಿತ್ಯವೂ ಮೂಡಲಿ ಹೊಸಬೆಳಕು

**"ದೀಪದಿಂದ ದೀಪವ ಹಚ್ಚಬೇಕು ಮಾನವ"** ಇದೊಂದು ಜನಪ್ರಿಯ ಚಲನಚಿತ್ರಗೀತೆಯ ಸಾಲು. ಈ ಹಾಡಿನ ಸಾಲುಗಳಲ್ಲಿ ವಿಶೇಷ ಅರ್ಥಗಳಿವೆ. ಬದುಕು ಎಷ್ಟೇ ಆಧುನಿಕವಾದರೂ ಯಾವುದೇ ಕಾರ್ಯಕ್ರಮದ ಶುಭಾರಂಭವನ್ನು ಮರ್ಕ್ಯುರಿ ದೀಪ ಬೆಳಗಿಸಿಯೋ ಅಥವಾ ಸಾವಿರ ಟ್ಯೂಬ್ಲೈಟುಗಳನ್ನು ಏಕಕಾಲಕ್ಕೆ ಹಚ್ಚಿಯೋ ಮಾಡುವುದಿಲ್ಲ. ಬದಲಿಗೆ ದೀಪ ಬೆಳಗಿಸುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುತ್ತದೆ. ಏಕೆಂದರೆ ದೀಪವೆಂಬುದು ಜ್ಞಾನದ ಸಂಕೇತ, ಪ್ರಗತಿಯ ಸಂಕೇತ, ಮಾನವೀಯತೆಯ ಸಂಕೇತ. ಹಿರಿಯ ಕವಿ ಎನ್ ಎಸ್ ಲಕ್ಷ್ಮೀನಾರಾಯಣ ಭಟ್ಟರ ಕವನದ ಸಾಲುಗಳಂತೆ '**ಮಾನವನೆದೆಯಲಿ ಆರದೆ ಉರಿಯಲಿ ದೇವರು ಹಚ್ಚಿದ ದೀಪ.. ರೇಗುವ ಧ್ವನಿಗೂ ರಾಗವು ಒಲಿಯಲಿ ಮೂಡಲಿ ಮಧುರಾಲಾಪ..**' ನಮ್ಮೆದೆಯಲ್ಲಿ ಬೆಳಗುತ್ತಿರುವಂತಹ ಜ್ಞಾನದ ದೀಪವನ್ನು ಒಬ್ಬರೆದೆಯಿಂದ ಇನ್ನೊಬ್ಬರೆದೆಗೆ ದಾಟಿಸುವ ಜವಾಬ್ದಾರಿ ಮಾನವರಾದ ನಮ್ಮೆಲ್ಲರದ್ದು. ಯಾವಾಗ ಜ್ಞಾನ, ಪ್ರೀತಿ, ಪ್ರಗತಿಯ ದೀಪಗಳನ್ನು ಒಬ್ಬರೆದೆಯಿಂದ ಇನ್ನೊಬ್ಬರೆದೆಯಲ್ಲಿ ಬೆಳಗುತ್ತೇವೆಯೋ ಆಗ ಕವಿ ಹೇಳಿದಂತೆ ರೇಗುವ ಧ್ವನಿಗೂ ರಾಗವು ಒಲಿಯುತ್ತದೆ, ಮಾನವೀಯತೆಯ ಮಧುರಾಲಾಪ ಮೂಡುತ್ತದೆ. ನಮ್ಮನ್ನು ನಿತ್ಯದ ಕತ್ತಲಿನಿಂದ ಬೆಳಕಿನೆಡೆಗೆ ತರುವ ಸೂರ್ಯ ಕಿರಣಗಳು ಲಕ್ಷಾಂತರ ವರ್ಷಗಳಷ್ಟು ಹಳೆಯವು. ಆದರೆ ಸೂರ್ಯ ನೀಡುವ ಬೆಳಕು ಪ್ರತಿನಿತ್ಯವೂ ನಮ್ಮ ಬಾಳಲ್ಲಿ ನೋಡುವ ಹೊಸಬೆಳಕು. ಹಾಗೆಯೇ ಉತ್ತಮ ಜೀವನಮೌಲ್ಯಗಳು, ಸಕಾರಾತ್ಮಕ ಚಿಂತನೆಗಳು, ಮಾನವೀಯ ಮಿಡಿತ ತುಡಿತಗಳು ನಮ್ಮಲ್ಲಿ ಹುಟ್ಟಿನಿಂದಲೂ ಇವೆ. ಅವು ಎಂದಿಗೂ ಹಳತಾಗದ ಹೊಸಬೆಳಕು. ಪ್ರತಿನಿತ್ಯ ಸೂರ್ಯೋದಯದ ಬೆಳಕಿನಂತೆ ಅವು ಮೂಡಿಬಂದಾಗ ಮನದ ದುಗುಡ,ದುಃಖದುಮ್ಮಾನಗಳ ಕತ್ತಲೆ ದೂರಾಗುತ್ತದೆ. ನಮಗೆ ಗೊತ್ತಿದ್ದರೂ ಗೊತ್ತಿದೆ ಎಂದು ಗೊತ್ತಿರದ, ನಮ್ಮೊಳಗಿನ ಕತ್ತಲಲ್ಲಿ ಹುದುಗಿ ಕುಳಿತಿರುವ ವಿಕಸನದ ವಿಷಯಗಳಿಗೆ, ಸಾಮರ್ಥ್ಯಗಳಿಗೆ ಬೆಳಕು ಚೆಲ್ಲಿ ಅವನ್ನು

ಹೊರತಂದು ನಮ್ಮ ವ್ಯಕ್ತಿತ್ವವನ್ನು ರೂಪಿಸುವ ಹೊಸಬೆಳಕೇ, ನಮ್ಮನ್ನು ಮುಸುಕಿದ ಮಬ್ಬಿನಿಂದಾಚೆಗೆ ಕೈ ಹಿಡಿದು ನಡೆಸುವ ದಾರಿದೀಪ.

ನಮ್ಮ ಮನದ ಕತ್ತಲನ್ನು ದೂರಾಗಿಸಲು ನಮ್ಮೊಳಗಿರುವ ಅರಿವಿನ ದೀಪವನ್ನು ಸದಾ ಬೆಳಗಿಸಬೇಕು. ಇದಕ್ಕೇನು ವಿಶೇಷ ಪಾಂಡಿತ್ಯ ಬೇಕಾಗಿಲ್ಲ. ಅರಿವೆಂಬ ಜ್ಯೋತಿ, ಯಾವುದೇ ಬೇಧಭಾವಗಳಿರದೇ ಎಲ್ಲರ ಎದೆಯಾಳದಲ್ಲಿ ಇರುವಂಥಾದ್ದು. ಈ ಚೇತನವನ್ನು ಸದಾ ಜಾಗೃತವಾಗಿಟ್ಟುಕೊಂಡರೆ ನಮ್ಮಲ್ಲಿರುವ ಹೊಸಬೆಳಕಿನ ಅರಿವು ನಮಗೆ ಆಗುತ್ತದೆ. ಈ ಅರಿವು ನಮ್ಮಲ್ಲಿ ಮೂಡಿದಾಗ ದೂರದ ತಾರಿಕೆಗಳ ಹೊಳಪನ್ನು ಗ್ರಹಿಸುವ ಶಕ್ತಿಯೂ ನಮಗೆ ಪ್ರಾಪ್ತವಾಗುತ್ತದೆ.



# 15. ಗುರುತಿಸು ಒಳಿತಿರುವುದನು ಕೇಡುಗಳ ನಡುವೆ




"**ಗುರುತಿಸು ಒಳಿತಿರುವುದನು ಕೇಡುಗಳ ನಡುವೆ**". ಇದು ಡಿವಿಜಿಯವರ ಮಂಕುತಿಮ್ಮನಕಗ್ಗದ ಒಂದು ಪ್ರಸಿದ್ಧ ಸಾಲು. ಎಂತಹ ನಕಾರಾತ್ಮಕತೆಯಲ್ಲಿಯೂ ಹುದುಗಿರುವ ಸಕಾರಾತ್ಮಕ ಅಂಶವನ್ನು ಹುಡುಕಬೇಕು. ಇಂದು ನಮ್ಮ ಬದುಕಿನಲ್ಲಿ ಮೊಬೈಲ್ ಎನ್ನುವುದು ಅನಿವಾರ್ಯವಾಗಿಬಿಟ್ಟಿದೆ. ಇದು ಬರಿಯ ಸಂಪರ್ಕಕ್ಕಷ್ಟೇ ಅಲ್ಲ, ನಮ್ಮ ಹಲವಾರು ವ್ಯವಹಾರಗಳಿಗೆ, ಮನರಂಜನೆಗೆ ಎಲ್ಲದಕ್ಕೂ ಅತ್ಯಗತ್ಯವಾಗಿ, ಅದನ್ನು ಬಿಟ್ಟು ಬದುಕಲಾರೆವು ಎನ್ನುವ ವ್ಯಸನವಾಗಿ, ಅದು ನಮ್ಮ ಬದುಕನ್ನು ಆವರಿಸಿಕೊಂಡುಬಿಟ್ಟಿದೆ. ಅದರಲ್ಲೂ ಮೊಬೈಲಿನಲ್ಲಿರುವ ವಾಟ್ಸಪ್, ಫೇಸ್ಬುಕ್ಕಿನಂತಹ ಸಾಮಾಜಿಕ ಜಾಲತಾಣಗಳು, ಇಂದು ಬದುಕಿನ ಅತ್ಯಗತ್ಯಗಳಾಗಿ ಪರಿಣಮಿಸಿವೆ. ದೂರದೂರದಲ್ಲಿರುವ ಬಂಧು-ಮಿತ್ರರನ್ನು, ಸಮಾನಮನಸ್ಕರನ್ನು ಇವು ಒಟ್ಟುಗೂಡಿಸಿವೆ. ನಮ್ಮ ನೋವು-ನಲಿವುಗಳನ್ನು ಹಂಚಿಕೊಳ್ಳಲು, ಅತ್ಯಂತ ಕ್ಷಿಪ್ರವಾಗಿ ಸಂಪರ್ಕ ಸಾಧಿಸಲು ಈ ಸಾಮಾಜಿಕ ಜಾಲತಾಣಗಳು ಸೇತುವೆಯಂತೆ ಕೆಲಸ ಮಾಡುತ್ತಿವೆ.

ಅದರ ಜೊತೆಗೇ ಇವು ಸುಳ್ಳು ಸುದ್ದಿಗಳನ್ನು ಹರಡುವ, ಅದನ್ನೇ ಸತ್ಯವೆಂದು ನಂಬುವ ದೊಡ್ಡ ಸಮೂಹವನ್ನೇ ಸೃಷ್ಟಿ ಮಾಡಿ, ಆಧುನಿಕ ಮೌಢ್ಯವನ್ನು ಬಿತ್ತುವ ಕೆಲಸವನ್ನೂ ಮಾಡುತ್ತಿವೆ. ಇವುಗಳಿಂದಾಗಿ ಹಲವಾರು ಸಂಬಂಧಗಳು ಮುರಿದುಬಿದ್ದಿರುವ, ಆತ್ಮಹತ್ಯೆಯಂತಹ ದುರಂತಗಳೂ ನಡೆದಿರುವ ಹಲವಾರು ಉದಾಹರಣೆಗಳಿವೆ. ಆದರೆ ಇದರ ನಡುವೆಯೂ ಹಲವಾರು ಒಳ್ಳೆಯ ಕೆಲಸಗಳು, ಈ ಸಾಮಾಜಿಕ ಜಾಲತಾಣಗಳಿಂದ ಆಗಿರುವುದನ್ನೂ ನಾವು ಗಮನಿಸಬೇಕು ಹಾಗೂ ಗುರುತಿಸಬೇಕು. ಇತ್ತೀಚಿಗೆ ಮೂಡಿಗೆರೆ ಹತ್ತಿರದ ಕೊಟ್ಟಿಗೆಹಾರದ ನಮ್ಮ ಸ್ನೇಹಿತರೊಬ್ಬರು ಕಳಿಸಿದ ಸಂದೇಶ, ಈ ವಿಚಾರದ ಕುರಿತಾಗಿಯೇ ಇತ್ತು. ಇಲ್ಲಿಗೆ ಸಮೀಪದ ಬಣಕಲ್ ಎಂಬ ಪುಟ್ಟ ಮಲೆನಾಡ ಮಡಿಲಿನ ಹಳ್ಳಿಯ ಪ್ರೌಢಶಾಲೆಯಲ್ಲಿ ಸುಮಾರು 33 ವರ್ಷಗಳ ಹಿಂದೆ ಜೊತೆಯಾಗಿ ಎಸ್ ಎಸ್ ಎಲ್ ಸಿ ಅಭ್ಯಾಸ ಮಾಡಿದ ಸ್ನೇಹಿತರು, ಇತ್ತೀಚೆಗೆ ಒಂದು ವಾಟ್ಸಪ್ ಗುಂಪನ್ನು ಆರಂಭಿಸಿದರು. ಇದಕ್ಕೆ ಮೂಲ ಕಾರಣ ದೂರದ ಅಮೆರಿಕದಲ್ಲಿ ಯಶಸ್ವೀ ಬದುಕು ಕಟ್ಟಿಕೊಂಡಿರುವ ಈ ಬ್ಯಾಚಿನ ಒಬ್ಬ ವಿದ್ಯಾರ್ಥಿ. ರಜೆಯಲ್ಲಿ ಊರಿಗೆ ಬಂದಾಗ ತನ್ನ ಸ್ನೇಹಿತರನ್ನೆಲ್ಲ ಭೇಟಿಯಾದ ಇವರು, ತಮ್ಮ ತರಗತಿಯ ಎಲ್ಲೆಲ್ಲೋ ಹರಿದು ಹಂಚಿಹೋದ ಸ್ನೇಹಿತರನ್ನು ಹಳೆಯ ಸವಿನೆನಪಿನಲ್ಲಿ, ಸ್ಥಳೀಯ ಮಿತ್ರರ ಸಹಕಾರದೊಂದಿಗೆ ಒಂದುಗೂಡಿಸುವ ಪ್ರಯತ್ನ ಮಾಡಿದರು. ತಮ್ಮ ಕೆಲಸಗಳಲ್ಲಿ ಮುಳುಗಿಹೋದವರು, ಮದುವೆ ಸಂಸಾರ ಗಂಡ ಮಕ್ಕಳು ಎಂದು ಕಳೆದುಹೋದವರು, ಎಲ್ಲರನ್ನೂ ಈ ವಾಟ್ಸಪ್ ಗುಂಪು ಒಟ್ಟಿಗೆ ಸೇರಿಸುವಲ್ಲಿ ಯಶಸ್ವಿಯಾಯಿತು. ಇದರಲ್ಲಿ ನಾವೀಗ ಹೇಗಿದ್ದೇವೆ, ಎಲ್ಲಿದ್ದೇವೆ, ನಮ್ಮ ಮಕ್ಕಳು ಮರಿ ಸಂಸಾರ ಇತ್ಯಾದಿ ಉಭಯ ಕುಶಲೋಪರಿಗಳ ಜೊತೆಗೇ, ನಮ್ಮ ಸ್ನೇಹಿತರಲ್ಲಿ ತುಂಬಾ ಕಷ್ಟದಲ್ಲಿರುವ ಸ್ನೇಹಿತರು ಯಾರು ಎನ್ನುವ ಚರ್ಚೆಯೂ ನಡೆಯಿತು. ಆಗ ಅದೇ ಊರಲ್ಲಿ ಸೊಂಟದ ಕೆಳಗಿನ ಸ್ವಾಧೀನ ಕಳೆದುಕೊಂಡು ತೀವ್ರ ದುಸ್ಥಿತಿಯಲ್ಲಿರುವ ತಮ್ಮ ಸಹಪಾಠಿ ಸ್ನೇಹಿತನ ಕುರಿತಾಗಿ ತಿಳಿದ ಈ ಮಿತ್ರರು ತಮ್ಮಲ್ಲಿಯೇ ತಮಗಾದಷ್ಟು ಧನ ಸಂಗ್ರಹಣೆ ಮಾಡಿ, ಸುಮಾರು 120000 ರೂಪಾಯಿಗಳಷ್ಟು ಮೊತ್ತವನ್ನು ಜೋಡಿಸಿ, ಆ ಸ್ನೇಹಿತನ ಕೈಯಲ್ಲಿಟ್ಟು ಸಾರ್ಥಕತೆ ಕಂಡರು. ಈ ಘಟನೆ ಚಿಕ್ಕದಿರಬಹುದು ಹಾಗೂ ಹಲವಾರು ಕಡೆಗಳಲ್ಲಿ ನಡೆದದ್ದೂ ಆಗಿರಬಹುದು. ಆದರೆ ಇಂತಹ ಒಳ್ಳೆಯ ಕೆಲಸಗಳು ಬೆಳಕಿಗೆ ಬಂದರೆ ಖಂಡಿತವಾಗಿ ಬೇರೆಯವರಿಗೆ

ಪ್ರೇರಣೆಯಾಗುತ್ತದೆ. ಜೊತೆಗೆ ಇಂದಿನ ಸಂಪೂರ್ಣ ವ್ಯವಹಾರಿಕ ಜಗತ್ತಿನಲ್ಲಿ ಮೊಬೈಲಿನಂತಹ ಡಿಜಿಟಲ್ ಸಾಧನಕ್ಕೆ ಇರುವ ಮಾನವೀಯ ಸಾಧ್ಯತೆಗಳನ್ನು ಇದು ಎತ್ತಿ ಹಿಡಿಯುತ್ತದೆ.

ಈ ಬಗೆಯ ಮಾನವೀಯ ಸ್ಪಂದನೆಗೆ ಕಾರಣವಾದ ಮೊಬೈಲ್ ಹಾಗೂ ಅದರಲ್ಲಿನ ಸಾಮಾಜಿಕ ಜಾಲತಾಣಗಳು, ಪ್ರತಿಯೊಂದರಲ್ಲೂ ಒಳ್ಳೆಯದೂ ಇರುತ್ತದೆ, ಕೆಟ್ಟದ್ದು ಇರುತ್ತದೆ, ಆದರೆ ಅದನ್ನು ಸರಿಯಾಗಿ ಗುರುತಿಸಿ ಬಳಸಿಕೊಳ್ಳುವುದು ಮಾತ್ರ ನಮ್ಮ ಕೈಯಲ್ಲೇ ಇರುತ್ತದೆ ಎಂಬ ಅಂಶವನ್ನು ಸ್ಪಷ್ಟಪಡಿಸುತ್ತದೆ



# 16. ಅಂತರಂಗದ ಅರಿವೇ ವಿಕಾಸ



ಒಮ್ಮೆ ಪ್ರಖ್ಯಾತ ಸೂಫಿಸಂತ ಮುಲ್ಲಾ ನಸರುದ್ದೀನನನ್ನು ಒಂದು ಧಾರ್ಮಿಕ ಪ್ರವಚನಕ್ಕೆ ಆಹ್ವಾನಿಸಲಾಯಿತು. ನನಗೆ ಪ್ರವಚನ ನೀಡಲು ಬರುವುದಿಲ್ಲ ಎಂದು ಆತ ಹೇಳಿದರೂ ಆಯೋಜಕರು ಆತನನ್ನು ಒತ್ತಾಯ ಮಾಡಿ ಕರೆದೊಯ್ದಿದ್ದರು. ವೇದಿಕೆಯನ್ನೇರಿದ ಮುಲ್ಲಾ ನೆರೆದಿದ್ದ ಸಭಿಕರನ್ನು ಉದ್ದೇಶಿಸಿ "ನಾನು ಇಂದು ಯಾವ ವಿಷಯದ ಮಾತನಾಡುತ್ತೇನೆ ಎಂದು ನಿಮಗೆಲ್ಲಾ ಗೊತ್ತೋ?" ಎಂದು ಪ್ರಶ್ನಿಸಿದ. ಆಗ ಸಭಿಕರು "ಗೊತ್ತಿಲ್ಲ" ಎಂದು ಉತ್ತರಿಸಿದರು. "ಗೊತ್ತಿಲ್ಲದವರಿಗೆ ಹೇಳಿ ಏನು ಪ್ರಯೋಜನ?" ಎಂದು ಮುಲ್ಲಾ ಅಲ್ಲಿಂದ ನಿರ್ಗಮಿಸಿದ. ಕಾರ್ಯಕ್ರಮದ ಆಯೋಜಕರು ಮುಲ್ಲಾನನ್ನು ಬಿಡದೆ ಎರಡನೇ ಬಾರಿ ಪ್ರವಚನಕ್ಕೆ ಕರೆತಂದರು. ಈ ಬಾರಿಯೂ ಮುಲ್ಲಾ ಸಭಿಕರನ್ನು ಉದ್ದೇಶಿಸಿ "ನಾನು ಯಾವ ವಿಷಯದ ಬಗ್ಗೆ ಮಾತನಾಡುತ್ತೇನೆಂದು ನಿಮಗೆಲ್ಲ ಗೊತ್ತೋ?" ಎಂದು ಪ್ರಶ್ನಿಸಿದ. ಈ ಬಾರಿ ಸಭಿಕರು "ಗೊತ್ತು" ಎಂದು ಉತ್ತರಿಸಿದರು. "ಗೊತ್ತಿರುವವರಿಗೆ ಹೇಳಿ ಏನು ಪ್ರಯೋಜನ?" ಎಂದು ಮುಲ್ಲಾ ಮತ್ತೆ ಅಲ್ಲಿಂದ ನಿರ್ಗಮಿಸಿದ! ಕಾರ್ಯಕ್ರಮದ ಆಯೋಜಕರು ಛಲ ಬಿಡದ ತ್ರಿವಿಕ್ರಮನಂತೆ ಮೂರನೇ ಬಾರಿ ಮುಲ್ಲಾನನ್ನು ಕರೆ ತಂದರು. ಈ ಬಾರಿಯೂ ಮುಲ್ಲಾನದು ಅದೇ ಪ್ರಶ್ನೆ "ನಾನು ಯಾವ ವಿಷಯದ ಬಗ್ಗೆ ಮಾತನಾಡುತ್ತೇನೆ ಎಂದು ನಿಮಗೆಲ್ಲಾ ಗೊತ್ತೋ?".. ಜನರೂ ಈ ಬಾರಿ ಹೇಗಾದರೂ ಮಾಡಿ ಮುಲ್ಲಾನ ಬಳಿ

ಮಾತನಾಡಿಸಲೇಬೇಕೆಂದು ನಿರ್ಧರಿಸಿದ್ದರು. ಹೀಗಾಗಿ ಅರ್ಧ ಮಂದಿ "ಗೊತ್ತು" ಎಂದರು, ಇನ್ನರ್ಧ ಮಂದಿ "ಗೊತ್ತಿಲ್ಲ" ಎಂದರು! ಆಗ ಮುಲ್ಲಾ ನಸುನಗುತ್ತಾ "ಗೊತ್ತಿರುವವರು ಗೊತ್ತಿಲ್ಲದವರಿಗೆ ಹೇಳಿ; ಎಂದು ಅಲ್ಲಿಂದ ನಿರ್ಗಮಿಸಿದ!

ನಮ್ಮ ಸ್ಥಿತಿಯೂ ಹೀಗೆಯೇ. ಎಷ್ಟೋ ವಿಷಯಗಳು ನಮಗೆ ಗೊತ್ತಿದ್ದರೂ ಅವು ನಮಗೆ ಗೊತ್ತಿದೆ ಎಂಬುದೇ ನಮಗೆ ಗೊತ್ತಿರುವುದಿಲ್ಲ! ನಮ್ಮ ಅಂತರಂಗದ ಸಂಪತ್ತಾದ ವ್ಯಕ್ತಿತ್ವದ ವಿಸ್ತಾರದ ಅರಿವು ನಮಗೆ ಇರುವುದೇ ಇಲ್ಲ.

ಹಿರಿಯ ಕವಿ ಎಸ್‌ವಿಪಿ ಅವರು **ಬೆಳ್ಳಿಯ ಬಾಗಿಲು, ಚಿನ್ನದ ದೇಗುಲ.. ಒಳಗಡೆ ಬಹು ಮುತ್ತುರತ್ನ.. ಬೀಗದ ಕೈ ತಂದು ಬಾಗಿಲನ್ನು ತೆಗೆಯಲು ನೀನೊಮ್ಮೆ ಮಾಡು ಪ್ರಯತ್ನ..** ಎಂಬುದಾಗಿ ನಮ್ಮಾಳದ ವ್ಯಕ್ತಿತ್ವವನ್ನು ವರ್ಣಿಸುತ್ತಾರೆ. ನಮ್ಮ ಒಳಗಡೆ ಬೆಳ್ಳಿಯ ಬಾಗಿಲನ್ನು ಹೊಂದಿರುವ ಚಿನ್ನದ ದೇಗುಲವಿದೆ. ಅದರೊಳಗೆ ವ್ಯಕ್ತಿತ್ವವೆಂಬ ಬಹುಮೂಲ್ಯ ಮುತ್ತುರತ್ನಗಳ ಅನರ್ಘ್ಯ ಸಂಪತ್ತಿದೆ. ಅವುಗಳನ್ನು ಪಡೆದುಕೊಳ್ಳಲು ನಾವು ನಮ್ಮಲ್ಲಿಯೇ ಇರುವ ಜ್ಞಾನ, ಆತ್ಮವಿಶ್ವಾಸ, ಗುರಿ, ಪ್ರೀತಿ, ಮಾನವೀಯತೆ ಮುಂತಾದ ಬೀಗದ ಕೈಗಳನ್ನು ಬಳಸುವ ಪ್ರಯತ್ನವನ್ನು ನಿರಂತರವಾಗಿ ಮಾಡಬೇಕು.  ರಾಷ್ಟ್ರಕವಿ ಕುವೆಂಪುರವರು,,

**ನೊಣ ಮೀಸೆಯ ಹುಳು ಹೆಜ್ಜೆಯ ಅರಿಯುವ ಬಿಜ್ಜೆಯ ಬಲ್ಲ**

**ತನ್ನಾತ್ಮವ ತಾನರಿಯುವ**

**ಸಾಧನೆಯೊಂದನು ಒಲ್ಲ**

**ಅನ್ವೇಷಣೆ.. ಅನ್ವೇಷಣೆ.. ಸುಖಿಸಲು ಪುರುಸೊತ್ತಿಲ್ಲ**

**ತಿಳಿದು ತಿಳಿದು ತಿಳಿದೂ**

**ಕೊನೆಗೇನೂ ಗೊತ್ತಿಲ್ಲ**

ಎಂಬುದಾಗಿ ಮಾನವನ ಈ ಸ್ಥಿತಿಯನ್ನು ತಮ್ಮ ಕವಿತೆಯೊಂದರಲ್ಲಿ ವಿಡಂಬಿಸುತ್ತಾರೆ. ಎಲ್ಲಾ ಸಂಶೋಧನೆಗಳನ್ನೂ ಮಾಡಿರುವ ಮನುಷ್ಯನಿಗೆ ತನ್ನ ಆತ್ಮಶಕ್ತಿಯನ್ನು ಆವಿಷ್ಕರಿಸಿಕೊಳ್ಳಲು ಪುರುಸೊತ್ತಿಲ್ಲ.ಸುಖ ನೆಮ್ಮದಿಗಳಿಗಾಗಿ ಆತ ನಿರಂತರ ಹುಡುಕಾಟ ಮಾಡುತ್ತಲೇ ಇದ್ದಾನೆ. ಆದರೆ ಅವನ ಸ್ಥಿತಿ ತಿಳಿದು ತಿಳಿದೂ ಏನು ಗೊತ್ತಿಲ್ಲ ಎನ್ನುವಂತೆ ಆಗಿದೆ. ಅದಕ್ಕೇ ಶರಣರು **'ಅರಿವೇ ಗುರು'**

ಎಂದು ಹೇಳಿದ್ದು. ನಮ್ಮ ಒಳ ಆಳದ ಅರಿವೇ ನಾವು ಗುರುತಿಸಿಕೊಳ್ಳಬೇಕಾದ ನಿಜವಾದ ಸಂಪತ್ತು. **ನಿನ್ನೊಳಗೆ ನೀ ಹೊಕ್ಕು ನಿನ್ನನ್ನೇ ನೀ ಕಂಡು ನೀನೇ ನೀನಾಗು ಗೆಳೆಯ** ಎಂಬ ವರಕವಿ ಬೇಂದ್ರೆಯವರ ಸಾಲುಗಳಂತೆ ನಮ್ಮನ್ನು ನಾವು ಕಂಡುಕೊಳ್ಳುವುದೇ ನಮ್ಮ ನಿಜವಾದ ವಿಕಸನ. ಈ ಅಂತರಾಳದ ವಿಕಸನವೇ ಬದುಕಿನ ನಿಜವಾದ ಸಾರ್ಥಕತೆ.



# 17. ಬಾಧಿಸದಿರಲಿ ಮೇಲರಿಮೆಯ ವೈರಸ್ಸು



ದೇಹಕ್ಕೆ ಬಾಧೆ ಕೊಡುವ ವಿಭಿನ್ನ ವೈರಸ್ಸುಗಳಂತೆ, ಮನಸ್ಸಿಗೆ ಮುತ್ತಿಕ್ಕಿ, ನಮ್ಮ ವ್ಯಕ್ತಿತ್ವವನ್ನೇ ಬಾಧಿಸುವ ಹಲವಾರು ವೈರಸ್ಸುಗಳೂ ಇವೆ. ಅವುಗಳಲ್ಲಿ ನಮಗೆಲ್ಲ ಗೊತ್ತು ಎಂಬ ಅಹಂಕಾರವನ್ನು ಮೂಡಿಸಿ, ಅಜ್ಞಾನಕ್ಕೆಡೆ ಮಾಡಿಕೊಡುವ **'ಮೇಲರಿಮೆ'** ಅಥವಾ **Supiority complex** ಎಂಬುದು ಪ್ರಮುಖವಾದುದು. ಈ ವೈರಸ್ಸು ನಮ್ಮ ತಲೆಯೊಳಗೆ ಹೊಕ್ಕರೆ, ಕಲಿಕೆ ನಿಂತ ನೀರಾಗಿ ಬಿಡುತ್ತದೆ. ಇದನ್ನು ದೂರಾಗಿಸಲು, ಯಾವುದೇ ಹೊಸ ವಿಷಯವನ್ನು ಕಲಿಯುವ ಮುನ್ನ ನಮಗೆ ಏನೂ ಗೊತ್ತಿಲ್ಲ ಎನ್ನುವ **"unlearning"** ಬಹಳ ಮುಖ್ಯ ಎನ್ನುವುದು ಬಲ್ಲವರ ಅಭಿಮತ. ಒಮ್ಮೆ ಒಬ್ಬ ಝೆನ್ ಗುರುವಿನ ಬಳಿ, ಈ ಮೇಲರಿಮೆಯ ವೈರಸ್ಸನ್ನು ಬಹಳವಾಗಿ ಹೊಂದಿದ್ದ, ಎರಡೆರಡು ಪದವಿಗಳನ್ನು ಪಡೆದಿದ್ದ ಪ್ರೊಫೆಸರ್ ಒಬ್ಬರು ಜ್ಞಾನವನ್ನು ಪಡೆದುಕೊಳ್ಳಬೇಕು ಎಂದು ಬಂದರು. ಈ ವ್ಯಕ್ತಿಯ ಅಹಂಕಾರವನ್ನು ಗಮನಿಸಿದ ಝೆನ್ ಗುರುಗಳು ಸಂಪ್ರದಾಯದಂತೆ ಅವರಿಗೆ ಚಹಾ ನೀಡಿ ಸತ್ಕರಿಸಿದರು. ಪ್ರೊಫೆಸರ್ ಎದುರಿಗೆ ಒಂದು ಚಹಾ ಕಪ್ ಇರಿಸಿದ ಮಾಸ್ಟರ್, ಆ ಕಪ್ಪಿಗೆ ಪಾತ್ರೆಯಲ್ಲಿದ್ದ ಚಹಾವನ್ನು ಸುರಿಯುತ್ತಾ

ಹೋದರು. ಕಪ್ ಭರ್ತಿಯಾಯ್ತು. ಆದರೆ ಝೆನ್ ಗುರು ಮಾತ್ರ ಪಾತ್ರೆಯಲ್ಲಿದ್ದ ಚಹಾವನ್ನು ಕಪ್ಪಿಗೆ ಸುರಿಯುವುದನ್ನು ನಿಲ್ಲಿಸಲಿಲ್ಲ. ಆಗ ಚಹಾ, ಕಪ್ಪಿನಿಂದ ಹೊರಗೆಲ್ಲಾ ಚೆಲ್ಲಲಾರಂಭಿಸಿತು. ಇದನ್ನು ಗಮನಿಸಿದ ಪ್ರೊಫೆಸರ್ ಸಾಹೇಬರು, ತಾಳ್ಮೆ ಕಳೆದುಕೊಂಡು 'ಇದೇನು ಮಾಡುತ್ತಿದ್ದೀರಿ? ನೀವೇನೋ ದೊಡ್ಡ ಜ್ಞಾನಿಗಳೆಂದು ನಿಮ್ಮ ಬಳಿ ಹೆಚ್ಚಿನ ಜ್ಞಾನ ಪಡೆಯಲು ಬಂದರೆ, ನೀವು ತುಂಬಿರುವ ಕಪ್ಪಿಗೆ ಚಹಾ ಸುರಿಯುತ್ತಿದ್ದೀರಿ. ನೀವೆಂಥ ಜ್ಞಾನಿಗಳು?' ಎಂದು ಪ್ರಶ್ನಿಸಿದರು. ಆಗ ಆ ಝೆನ್ ಗುರುಗಳು ನಗುತ್ತಾ 'ಈಗ ನಿಮ್ಮ ಮನಸ್ಥಿತಿ ಕೂಡ ಈ ಚಹಾ ಕಪ್ಪಿನಂತೆಯೇ ಇದೆ. ಎಲ್ಲವೂ ಗೊತ್ತು ಎಂದು ತಲೆಯಲ್ಲಿ ಮೇಲೆ ತುಂಬಿಕೊಂಡ ನಿಮಗೆ ಯಾವ ಜ್ಞಾನವನ್ನು ನೀಡಿದರೂ ಅದು ನಿಮ್ಮ ಮನಸ್ಸಿನೊಳಗೆ ಇಳಿಯಲಾರದು. ಮೊದಲು ನಿಮ್ಮ ಮನಸ್ಸನ್ನು ಖಾಲಿ ಮಾಡಿಕೊಂಡು ನನಗೇನು ಗೊತ್ತಿಲ್ಲ ಎಂಬ ಭಾವದೊಂದಿಗೆ ಬನ್ನಿ. ಆಗ ಏನಾದರೂ ಜ್ಞಾನ ನಿಮ್ಮ ತಲೆಯೊಳಗೆ ಹೊಕ್ಕೀತು' ಎಂದು ನುಡಿದರು.

ನಮ್ಮ ಮನಸ್ಸು ಎಲ್ಲಾ ಗೊತ್ತಿದೆ ಎಂಬ ಭಾವದಿಂದ ಮುಕ್ತವಾದಾಗ ಮಾತ್ರ ಹೊಸ ವಿಷಯವನ್ನು ಕಲಿಯಲು ಸಾಧ್ಯವಾಗುತ್ತದೆ. ಅದಕ್ಕೇ ಹೇಳುವುದು ಅಹಂಕಾರ, ಅಜ್ಞಾನಜನ್ಯವಾದುದು ಹಾಗೂ ವಿನಯ ಜ್ಞಾನಜನ್ಯವಾದುದು ಎಂದು. ಇಂತಹ ಜ್ಞಾನ, ಆತ್ಮವಿಶ್ವಾಸಕ್ಕೆ ನಾಂದಿ ಹಾಡುತ್ತದೆ. ಹಿರಿಯ ಕವಿ ಪಂಜೆ ಮಂಗೇಶರಾಯರ ಕವಿತೆಯ ಸಾಲಿನಂತೆ **ಏರುವನು ರವಿ ಏರುವನು.. ಬಾನೊಳು ಸಣ್ಣಗೆ ತೋರುವನು.. ಏರಿದವನು ಚಿಕ್ಕವನಿರಬೇಕಲೆ ಎಂಬ ಮಾತನು ಸಾರುವನು** ಅಷ್ಟು ಅಗಾಧಶಕ್ತಿಯ ಕೇಂದ್ರವಾದ ಸೂರ್ಯ, ಎತ್ತರದಿಂದ ಬಲು ಚಿಕ್ಕವನಾಗಿಯೇ ಕಾಣಿಸುತ್ತಾನೆ. ಹಾಗೆಯೇ ನಿಜವಾದ ಜ್ಞಾನಿ ಯಾವುದೇ ಆಡಂಬರಗಳಿಲ್ಲದೇ ಅಹಂಕಾರವಿಲ್ಲದೇ, ಸರಳವಾಗಿರುತ್ತಾನೆ.

# 18. ಪ್ರಶ್ನಿಸುವ ಮನೋಭಾವ ಮನೋ ವಿಕಸನದ ಮೂಲ ಅಗತ್ಯ



ಒಬ್ಬಾತ ಮನೆಯಲ್ಲಿ ತನ್ನ ತಂದೆಯ ಶ್ರಾದ್ಧ ಮಾಡುವಾಗ, ತಾನು ಸಾಕಿದ್ದ ಬೆಕ್ಕು ತೊಂದರೆ ಕೊಡಬಾರದು ಎಂದು ಅದನ್ನು ಕಂಬಕ್ಕೆ ಕಟ್ಟಿ ಶ್ರಾದ್ಧ ಮಾಡಿದನಂತೆ. ಆತ ತೀರಿಹೋದ ಮೇಲೆ ಅವನ ಮಗ ಅಪ್ಪನ ಶ್ರಾದ್ಧ ಮಾಡುವ ಸಂದರ್ಭ ಬಂತು. ಮಗನ ಮನೆಯಲ್ಲಿ ಬೆಕ್ಕಿರಲಿಲ್ಲ. ಅಪ್ಪ ಶ್ರಾದ್ಧ ಮಾಡುವಾಗ ಬೆಕ್ಕನ್ನು ಕಟ್ಟಿ ಹಾಕಿ ಶ್ರಾದ್ಧ ಮಾಡಿದ್ದ ಎಂಬ ಕಾರಣಕ್ಕಾಗಿ ಮಗ ಪೇಟೆಗೆ ಹೋಗಿ ಒಂದು ಬೆಕ್ಕನ್ನು ಖರೀದಿಸಿ ತಂದು ಅದನ್ನು ಕಂಬಕ್ಕೆ ಕಟ್ಟಿ, ಶ್ರಾದ್ಧ ಮಾಡಿದನಂತೆ! ಯಾವುದನ್ನೇ ಆಗಲಿ ನಾವು ಪ್ರಶ್ನಿಸದೇ ಕೇವಲ ಅನುಕರಣೆ ಮಾಡಿದಾಗ ಇಂತಹ ಸ್ಥಿತಿ ನಿರ್ಮಾಣವಾಗುತ್ತದೆ. ಎಲ್ಲಾ ಆಚರಣೆಗಳಿಗೂ ಒಂದು ಸಾಂದರ್ಭಿಕ ಕಾರಣವಿರುತ್ತದೆ. ಅದೇನೆಂದು ಪ್ರಶ್ನಿಸಿ, ಸರಿಯಾಗಿ ಅನುಸರಣೆ ಮಾಡುವುದು ಸೂಕ್ತ. ಪ್ರಶ್ನಿಸದೇ ಅನುಕರಿಸಿದರೆ ಅದು ಮೂಢನಂಬಿಕೆಯಾಗುತ್ತದೆ. ಹೀಗಾಗಿ ಪ್ರಶ್ನೆ ಮಾಡುವುದು ವ್ಯಕ್ತಿ ವಿಕಸನದ ಮೂಲಭೂತ ಅಗತ್ಯಗಳಲ್ಲಿ ಒಂದು. ಮಕ್ಕಳಾಗಿದ್ದಾಗ ಹತ್ತು ಹಲವು ಪ್ರಶ್ನೆಗಳನ್ನು ಕೇಳುವ ಮನಸ್ಸು, ವಯಸ್ಸಾಗುತ್ತಾ ಬಂದಂತೆ ಈ ಪ್ರಕ್ರಿಯೆಯನ್ನು ನಿಲ್ಲಿಸಿ ಬಿಡುತ್ತದೆ. ದೊಡ್ಡವರಾದ ಮೇಲೆ ನಾವು ಕೇಳೋದು ಒಂದೇ ಪ್ರಶ್ನೆ, 'ನಮಗ್ಯಾಕ್ರೀ ಬೇಕು? ಏನಾದ್ರೂ ಹಾಳಾಗಿ ಹೋಗಲಿ, ನಮಗ್ಯಾಕೆ ಬೇಕು?' ಎಂಬುದು!

ಹೀಗಾಗಿ ನಮ್ಮ ಕಣ್ಣೆದುರೇ ದೊಡ್ಡ ತಪ್ಪು ನಡೆಯುತ್ತಿದ್ದರೂ ನಾವು ಪ್ರಶ್ನಿಸುವ ಗೋಜಿಗೇ ಹೋಗುವುದಿಲ್ಲ. ಪ್ರಶ್ನಿಸುವುದೆಂದರೆ ವ್ಯವಸ್ಥೆಯ ವಿರುದ್ಧ ಮಾತನಾಡುವುದೆಂದೂ, ಪ್ರವಾಹಕ್ಕೆದುರು ಈಜಿ ಜಯಸಿದವರುಂಟೇ ಎಂದೆಣಿಸಿ ಸುಮ್ಮನಾಗಿ ಬಿಡುತ್ತೇವೆ. ನಾವಿಲ್ಲಿ ಒಂದು ಮುಖ್ಯವಾದ ವಿಚಾರವನ್ನು ಅರ್ಥಮಾಡಿಕೊಳ್ಳಬೇಕು. ಪ್ರಶ್ನಿಸುವುದು ಒಂದು ವೈಜ್ಞಾನಿಕ ನಡವಳಿಕೆ.ಈ

ನಡುವಳಿಕೆಯಿಂದಲೇ ಎಲ್ಲಾ ಪ್ರಮುಖ ವೈಜ್ಞಾನಿಕ ಸಂಶೋಧನೆಗಳೂ ಆವಿಷ್ಕಾರಗಳು ಘಟಿಸಿದವು ಹಾಗೂ ಘಟಿಸುತ್ತಿದ್ದಾವೆ. ಆರ್ಕಿಮಿಡಿಸ್ ಭೂಮಿ ದುಂಡಗಿದೆ ಎಂದು ಹೇಳಿದಾಗ ಅವನು ವ್ಯವಸ್ಥೆ ವಿರೋಧಿ, ಹುಚ್ಚ ಎಂದು ಹಣೆಪಟ್ಟಿ ಕಟ್ಟಲಾಯಿತು. ಮುಂದೆ ಅವನ ಮಾತು ಸತ್ಯವೆಂದು ಸಾಬೀತಾದಾಗ ಇಡೀ ಜಗತ್ತು ಅವನನ್ನು ದೊಡ್ಡ ವಿಜ್ಞಾನಿ, ತತ್ವಜ್ಞಾನಿ ಎಂದು ಗೌರವಿಸಿತು. ಭೂಮಿ ಚಪ್ಪಟೆಯಾಗಿದೆ ಎಂಬ ಜನರ ಸಾಮಾನ್ಯ ನಂಬಿಕೆಯನ್ನು ಆತ ಪ್ರಶ್ನಿಸಿದ್ದರಿಂದಲೇ ಅತ್ಯಂತ ದೊಡ್ಡ ವೈಜ್ಞಾನಿಕ ಸತ್ಯವನ್ನು ಅನಾವರಣಗೊಂಡಿತು. ಹಾಗೆಯೇ ಭೂಮಿಯ ಗುರುತ್ವಾಕರ್ಷಣ ಶಕ್ತಿಯನ್ನು ಅನ್ವೇಷಿಸಿದ ಸರ್ ಐಸಾಕ್ ನ್ಯೂಟನ್ನನಿಗೆ ಆ ಸತ್ಯ ಗೋಚರವಾಗಿದ್ದು ಸೇಬಿನ ಮರವೊಂದರ ಕೆಳಗೆ ಕುಳಿತಾಗ. ಮರದಿಂದ ಕೆಳಗೆ ಬೀಳುತ್ತಿದ್ದ ಸೇಬಿನ ಹಣ್ಣು ಭೂಮಿಯ ಕಡೆಗೆ ಏಕೆ ಬರುತ್ತಿದೆ? ಮೇಲೇಕೆ ಹಾರುತ್ತಿಲ್ಲ ಎಂಬ ಪ್ರಶ್ನೆ ಆತನಲ್ಲಿ ಉದ್ಭವಿಸಿ, ಅತಿ ದೊಡ್ಡ ವೈಜ್ಞಾನಿಕ ಸಂಶೋಧನೆಯೊಂದಕ್ಕೆ ನಾಂದಿ ಹಾಡಿತು. ಹೀಗೆ ಪ್ರಪಂಚದ ಎಲ್ಲಾ ವೈಜ್ಞಾನಿಕ ಆವಿಷ್ಕಾರಗಳೂ ಪ್ರಶ್ನೆಗಳ ಫಲವೇ. ಪ್ರಪಂಚದ ಬಹುಪಾಲು ವೈಜ್ಞಾನಿಕ ಸಂಶೋಧನೆಗಳು ಪಾಶ್ಚಿಮಾತ್ಯರ ಕೊಡುಗೆ. ಆದರೆ ಆಂತರಿಕ ಹುಡುಕಾಟವಾದ ಆಧ್ಯಾತ್ಮ, ಪ್ರಪಂಚಕ್ಕೆ ಭಾರತೀಯರ ಕೊಡುಗೆ. ಈ ಆಧ್ಯಾತ್ಮದ ಮೂಲವೂ ಪ್ರಶ್ನೆಗಳೇ ಆಗಿವೆ. ನಾನು ಯಾರು ಎಂಬ ಜಿಜ್ಞಾಸೆ ಆಧ್ಯಾತ್ಮದ ತಳಹದಿ. ವ್ಯಕ್ತಿ ತನ್ನೊಳಗೆ ತಾನು ಹೊಕ್ಕು ಬೆಳಕನ್ನು ಬಿಟ್ಟುಕೊಳ್ಳಲು ಆರಂಭಿಸಿದಾಗ ಅವನಲ್ಲಿ ಆಧ್ಯಾತ್ಮಿಕ ಪ್ರಜ್ಞೆ ಮೂಡಲಾರಂಭಿಸುತ್ತದೆ ಹಾಗೂ ಆತನ ಮನೋವಿಕಾಸಕ್ಕೆ ನಾಂದಿ ಹಾಡುತ್ತದೆ. ಈ ಅಂತರಾಳದ ಅರಿವಿನ ಮೂಲ ನಾನ್ಯಾರು? ನಾನೇಕೆ ಇಲ್ಲಿದ್ದೇನೆ? ಈ ಜೀವನದ ನಂತರ ಎತ್ತ ಕಡೆ ನನ್ನ ಪಯಣ? ಎಂಬಿತ್ಯಾದಿ ಸರಣಿ ಪ್ರಶ್ನೆಗಳು. ಇವು ಮನಸ್ಸಿನಲ್ಲಿ ಮೂಡಿಸುತ್ತಾ ಹೋದಾಗ ನಾನು ಎಂಬ ಅಹಂಕಾರಕ್ಕೆ ಕಡಿವಾಣ ಬೀಳುತ್ತದೆ ಹಾಗೂ ನಮ್ಮಲ್ಲಿ ವಿನೀತ ಭಾವವನ್ನು ಮೂಡಿಸುತ್ತದೆ. ಜೀವನವೆಂಬುದೇ ಒಂದು ಪ್ರಶ್ನೆ. ಹೀಗಾಗಿ ಪ್ರಶ್ನೆ ಎಂಬುದು ಋಣಾತ್ಮಕ ವಿಚಾರವಲ್ಲ ನಮ್ಮ ಮನಸ್ಸನ್ನು ಸದಾ ಸೃಜನಶೀಲವಾಗಿರಿಸುವ ನಮ್ಮ ಜ್ಞಾನವನ್ನು ವಿಸ್ತರಿಸುವ ಧನಾತ್ಮಕ ಚಿಂತನೆ. ಪ್ರಶ್ನಿಸುವ ಮನೋಭಾವದವರನ್ನು ತಲೆ ತಿನ್ನುವವರು ಎಂದು ಹೀಗಳೆಯುವುದು ಸಲ್ಲ. ಪ್ರಶ್ನೆಗಳಿಗೆ ನಮ್ಮ ಆಲೋಚನೆಗಳನ್ನು ಸದಾ ಜೀವಂತವಾಗಿಡುವ ಶಕ್ತಿ ಇರುತ್ತದೆ. ಹಾಗೆಂದ ಮಾತ್ರಕ್ಕೆ ಪ್ರಶ್ನೆ ಕೇಳಬೇಕೆಂಬ ಕಾರಣಕ್ಕಾಗಿಯೇ

ತೂಕವಿರದ ಸಂಬಂಧವಿರದ ಪ್ರಶ್ನೆಗಳನ್ನು ಕೇಳುವ ಸ್ವಭಾವವೂ ಸಹ ಸರಿಯಲ್ಲ. ಅರ್ಥವಾಗದನ್ನು ಸೂಕ್ತವಾದ ಪ್ರಶ್ನೆ ಕೇಳಿ ಅರ್ಥ ಮಾಡಿಕೊಳ್ಳುವ ಸ್ವಭಾವ ವ್ಯಕ್ತಿತ್ವ ವಿಕಸನದ ಮೂಲಭೂತ ಅಗತ್ಯಗಳಲ್ಲಿ ಒಂದು.



# 19. ನಾವು ಹೇಗಿದ್ದೇವೆಯೋ ಹಾಗೇ ಕಾಣಿಸುತ್ತದೆ ಜಗತ್ತು



ಇದೊಂದು ಜನಪ್ರಿಯ ಝೆನ್ ಕತೆ. ಒಮ್ಮೆ ಝೆನ್ ಮಾಸ್ಟರ್ ಒಬ್ಬರ ಬಳಿ ಬಹಳ ದೊಡ್ಡ ಪದವಿಗಳನ್ನು ಗಳಿಸಿದ್ದ ಪಂಡಿತರೊಬ್ಬರು ಬಂದು, "ನಾನು ನಿಮ್ಮ ಹತ್ತಿರ ಜ್ಞಾನದ ಕುರಿತಾಗಿ ಚರ್ಚೆ ಮಾಡಬೇಕೆಂದಿದ್ದೇನೆ" ಎಂದು ಹೇಳಿದರು. ಆಗ ಝೆನ್ ಮಾಸ್ಟರ್ 'ಜ್ಞಾನವೆಂಬುದು ಅಂತರಂಗದ ಬೆಳಕು. ಅದು ವಾದ ವಿವಾದದಿಂದ ಪರಿಹಾರ ಆಗುವಂಥದ್ದಲ್ಲ' ಎಂದು ಹೇಳಿದರೂ ತಮ್ಮ ಪಾಂಡಿತ್ಯದ ಬಗ್ಗೆ ಅಪಾರ ಗರ್ವ ಹೊಂದಿದ್ದ ಪಂಡಿತರು ಒಪ್ಪದೇ ಅವರನ್ನು ವಾದಕ್ಕೆಳೆದರು. ಸ್ವಲ್ಪ ಹೊತ್ತಿನ ಚರ್ಚೆಯ ನಂತರ ಪಂಡಿತರು ಅಹಂಕಾರದ ನಗುನಗುತ್ತಾ "ನನಗೆ ನಿಮ್ಮ ಬಗ್ಗೆ ಏನೋ ಅನಿಸುತ್ತಿದೆ. ಅದನ್ನು ಹೇಳಲೇ?" ಎಂದು ಕೇಳಿದರು ಆಗ ಝೆನ್ ಮಾಸ್ಟರ್ "ನನಗೆ ಅದನ್ನು ಕೇಳುವಲ್ಲಿ ಯಾವ ಆಸಕ್ತಿಯೂ ಇಲ್ಲ. ಏಕೆಂದರೆ ನಾನು ಏನಾಗಿದ್ದೇನೋ ಅದೇ ಆಗಿದ್ದೇನೆ" ಎಂದು ಉತ್ತರಿಸಿದರು. ಆದರೆ ಪಂಡಿತ ಮಹಾಶಯರು ಕೇಳಬೇಕಲ್ಲ! "ನನಗೆ ನಿಮ್ಮೊಡನೆ ಇಷ್ಟು ಹೊತ್ತು ಮಾತನಾಡಿದ ಮೇಲೆ ನಿಮ್ಮನ್ನು ನೋಡಿದರೆ ಸಗಣಿ ಮುದ್ದೆ ನೋಡಿದ ಹಾಗೆ ಅನಿಸುತ್ತದೆ"; ಎಂದರು. ಅದಕ್ಕೆ ನಸುನಗೆಯ ಪ್ರತಿಕ್ರಿಯೆ ಕೊಟ್ಟ ಮಾಸ್ಟರ್ ಗೆ "ನನ್ನ ಬಗ್ಗೆ ನಿಮಗೇನು ಅನಿಸುತ್ತದೆ ಹೇಳಿ' ಎಂದು ಒತ್ತಾಯಿಸಿದರು. ಆಗ ಝೆನ್ ಮಾಸ್ಟರ್,

“ನೀವು ನನ್ನ ಕಣ್ಣಿಗೆ ಬುದ್ಧನಂತೆ ಕಾಣಿಸುತ್ತಿದ್ದೀರಿ” ಎಂದು ಉತ್ತರಿಸಿದರು. ಈ ಮಾತನ್ನು ಕೇಳಿದ ಪಂಡಿತರು, ದಿಗ್ವಿಜಯದ ನಗೆ ಬೀರುತ್ತಾ ಅಲ್ಲಿಂದ ತೆರಳಿದರು.

ಮನೆಗೆ ಹೋದೊಡನೆ ತನ್ನ ಪತ್ನಿಯೊಡನೆ ನಡೆದದ್ದನ್ನು ಪಂಡಿತರು ವಿವರಿಸಿದರು. ಅದನ್ನು ಕೇಳಿದ ಪಂಡಿತರ ಪತ್ನಿ ನಗುತ್ತಾ ಹೀಗೆಂದರು, “ನಾನು ಈ ಝೆನ್ ಮಾಸ್ಟರ್ ನ ಪ್ರವಚನ ಕೇಳಲು ಯಾವಾಗಲೂ ಹೋಗುತ್ತಿರುತ್ತೇನೆ ಅವರು ಒಂದು ಮಾತನ್ನು ಸದಾ ಹೇಳುತ್ತಿರುತ್ತಾರೆ, ಅದೇನೆಂದರೆ ನಾವು ಏನಾಗಿದ್ದೇವೆಯೋ ಅದನ್ನು ಇನ್ನೊಬ್ಬರಲ್ಲಿ ಕಾಣುತ್ತೇವೆ.. ಹೀಗಾಗಿ ಝೆನ್ ಮಾಸ್ಟರ್ ಗೆ ನಿಮ್ಮಲ್ಲಿ ಬುದ್ಧ ಕಾಣಿಸಿದ್ದಾನೆ, ಆದರೆ ನಿಮಗೆ ಝೆನ್ ಮಾಸ್ಟರ್ ಸಗಣಿ ಮುದ್ದೆಯಂತೆ ಕಂಡಿದ್ದಾರೆ” ನಾವು ಹೇಗಿರುತ್ತೇವೆಯೋ ಜಗತ್ತು ನಮಗೆ ಹಾಗೇ ಗೋಚರಿಸುತ್ತದೆ. ಎಲ್ಲವನ್ನು ಎಲ್ಲರನ್ನೂ ನಕಾರಾತ್ಮಕವಾಗಿ ನೋಡುವ ವ್ಯಕ್ತಿಗೆ ಜಗತ್ತಿನಲ್ಲಿ ಯಾವುದೂ ಸರಿ ಇಲ್ಲದಂತೆ ಕಾಣುತ್ತದೆ. ಪರಿಸ್ಥಿತಿಯನ್ನು ಧನಾತ್ಮಕವಾಗಿ ನೋಡುವ ವ್ಯಕ್ತಿ ಎಂತಹ ದುಸ್ತರ ಪರಿಸ್ಥಿತಿಯನ್ನೂ ಕೂಡ ಸರಿಯಾಗಿದೆ ಎಂದುಕೊಳ್ಳುತ್ತಾನೆ ಹಾಗೂ ಕೆಡುಕಿನಲ್ಲಿರುವ ಒಳಿತನ್ನು ಗುರುತಿಸುವ ಪ್ರಯತ್ನವನ್ನು ನಿರಂತರವಾಗಿ ಮಾಡುತ್ತಿರುತ್ತಾನೆ. ಕಾಮಾಲೆ ಕಣ್ಣಿನವರಿಗೆ ಜಗತ್ತೇ ಹಳದಿಯಾಗಿ ತೋರುತ್ತದೆ ಎಂಬ ಮಾತಿನಂತೆ, ತನ್ನಲ್ಲಿ ದೋಷವಿರುವ ಮಂದಿ ಇನ್ನೊಬ್ಬರ ದೋಷವನ್ನೇ ಹುಡುಕುತ್ತಿರುತ್ತಾರೆ. ತನ್ನ ಅಂತರಂಗವನ್ನು ತಿದ್ದಿಕೊಳ್ಳುವ ಪ್ರಯತ್ನ ಮಾಡುವುದೇ ನಿಜವಾದ ಅರಿವಿನ ಹಾದಿ. ಈ ಹಾದಿಯಲ್ಲಿ ನಡೆದಾಗ ಮಾತ್ರ ಸರಿಯಾದ ಜ್ಞಾನ ಪ್ರಾಪ್ತಿ.



# 20. ದೂರ ದೃಷ್ಟಿ- ಭವಿಷ್ಯ ರೂಪಿಸುವ ಅಂತರಂಗದ ಒಳನೋಟ



ಎಲ್ಲರಿಗೂ ದೃಷ್ಟಿ ಇರುತ್ತದೆ. ದೃಷ್ಟಿ ಎಂದರೆ ನಮ್ಮ ಕಣ್ಣುಗಳಿಗೆ ಕಾಣುವ ದೃಶ್ಯಗಳನ್ನು ಭೌತಿಕವಾಗಿ ನೋಡುವುದು. ಆದರೆ ದೂರದೃಷ್ಟಿ ಎಂಬುದು ಪರಿಣಾಮಕಾರೀ ವ್ಯಕ್ತಿತ್ವದ ಅಂತಃಶಕ್ತಿ. ಇಂದು ನಾವು ಮಾಡುವ ಕೆಲಸವನ್ನು ಮುಂದಿನ ಪೀಳಿಗೆಯ ಭವಿಷ್ಯದ ಕುರಿತು ಯೋಚಿಸಿ ಮಾಡಿದಾಗ ಅದು ದೂರದೃಷ್ಟಿಯಾಗುತ್ತದೆ. ಅಂತಹ ದೂರದೃಷ್ಟಿತ್ವವುಳ್ಳ ವ್ಯಕ್ತಿಗಳನ್ನು "ವಿಷನರಿ" ಅಥವಾ "ದಾರ್ಶನಿಕರು" ಎಂದು ಕರೆಯುತ್ತಾರೆ. ಪ್ರಖ್ಯಾತ ಸಮಾಜ ಸೇವಕಿ ಹೆಲನ್ ಕೆಲ್ಲರ್ ಹುಟ್ಟು ಕುರುಡಿ. ಒಮ್ಮೆ ಆಕೆಯನ್ನು ಸಂದರ್ಶಕರು "ಹುಟ್ಟಿನಿಂದಲೇ ದೃಷ್ಟಿಹೀನರಾಗಿ ಹುಟ್ಟುವುದಕ್ಕಿಂತ ದುರದೃಷ್ಟಕರವಾದುದು ಯಾವುದಾದರೂ ಇದೆಯೇ?" ಎಂದು ಪ್ರಶ್ನಿಸಿದರಂತೆ. ಆಕೆ ಆಗ ನೀಡಿದ ಉತ್ತರ ಅತ್ಯಂತ ಮಾರ್ಮಿಕವಾಗಿತ್ತು. "ದೂರ ದೃಷ್ಟಿ ಇಲ್ಲದೆ ಹುಟ್ಟುವುದು ದೃಷ್ಟಿ ಹೀನರಾಗಿ ಹುಟ್ಟುವುದಕ್ಕಿಂತ ದುರದೃಷ್ಟಕರ"

ಹೀಗಾಗಿ ಭವಿಷ್ಯದ ಕುರಿತು ಯಾವುದೇ ಚಿಂತನೆ ಇಲ್ಲದ ಬಹುಪಾಲು ಮಂದಿ, ಕಣ್ಣಿದ್ದು ಕುರುಡರೇ ಸರಿ. ನಮ್ಮ ನಾಡು ಕಂಡ ಅತ್ಯಂತ ಶ್ರೇಷ್ಠ ಎಂಜಿನಿಯರ್, ಮುತ್ಸದ್ದಿ, ದಕ್ಷ ಆಡಳಿತಗಾರ, ಮೈಸೂರು ಸಂಸ್ಥಾನದ ದಿವಾನರಾಗಿದ್ದ ಭಾರತ ರತ್ನ ಸರ್ ಎಂ ವಿಶ್ವೇಶ್ವರಯ್ಯನವರು ಅನನ್ಯವಾದ

ವೈಜ್ಞಾನಿಕ ದೂರದೃಷ್ಟಿ ಹೊಂದಿದ್ದ ದಾರ್ಶನಿಕ ವಾಸ್ತುಶಿಲ್ಪಿಗಳಾಗಿದ್ದರು. 1903ರಲ್ಲಿಯೇ ಪುಣೆಯ ಕಡಕವಾಸ್ಲಾ ಸರೋವರಕ್ಕೆ ಸ್ವಯಂಚಾಲಿತ ಸ್ಲೂಯಿಸ್ ಗೇಟುಗಳನ್ನು ರೂಪಿಸಿ, ನೀರು ವ್ಯರ್ಥವಾಗದೇ ಸದ್ಬಳಕೆಯಾಗುವಂತೆ ಮಾಡಿದ್ದು ಅವರ ದೂರದೃಷ್ಟಿಗೆ ದೊಡ್ಡ ಉದಾಹರಣೆ. ಇಂತಹ ಅಭೂತಪೂರ್ವ ಆವಿಷ್ಕಾರಕ್ಕೆ ಪೇಟೆಂಟ್ ಪಡೆದಿದ್ದರೂ ಅದಕ್ಕವರು ಯಾವುದೇ ಹಣವನ್ನು ಪಡೆದಿರಲಿಲ್ಲವಂತೆ. ಕಾರಣ ಸರ್ಕಾರದ ಇಂಜಿನಿಯರ್ ಆಗಿ ನಾನು ನನ್ನ ಕರ್ತವ್ಯವನ್ನು ನಿರ್ವಹಿಸಿದ್ದೇನಷ್ಟೇ ಎಂಬುದು ಅವರ ವಿನಯ ಪೂರ್ವಕ ಅಭಿಪ್ರಾಯವಾಗಿತ್ತು. ಈ ದೂರದೃಷ್ಟಿತ್ವದಿಂದಲೇ ಅವರಿಗೆ ಪ್ರಪಂಚದ ಹಲವಾರು ನಗರಗಳ ಜಲ ನಿರ್ವಹಣೆಯನ್ನು, ತ್ಯಾಜ್ಯ ವಸ್ತು ನಿರ್ವಹಣೆಯನ್ನು ರೂಪಿಸುವ ಜವಾಬ್ದಾರಿ ಒದಗಿ ಬಂತು. 1908ರಲ್ಲಿ ಹೈದರಾಬಾದ್ ನಗರಕ್ಕೆ ಬಂದೊದಗಿದ ಮೂಸಿ ನದಿಯ ಭಾರಿ ಪ್ರವಾಹದ ವಿಪತ್ತಿನ ನಂತರ, ನಿಜಾಮರ ಆಹ್ವಾನದ ಮೇರೆಗೆ ಅದರ ನಿರ್ವಹಣೆಗೆ ಶಾಶ್ವತ ಪರಿಹಾರವನ್ನು ವಿಶ್ವೇಶ್ವರಯ್ಯನವರು ಸೂಚಿಸಿದರು. ಇದೇ ರೀತಿ ಯೆಮನ್ ದೇಶದ ಏಡನ್ ನಗರದ ಜಲ ನಿರ್ವಹಣೆಯಲ್ಲೂ ವಿಶ್ವೇಶ್ವರಯ್ಯನವರದ್ದೇ ಪ್ರಮುಖಪಾತ್ರ. ಬಿಹಾರದ ಗಂಗಾ ನದಿಯ ಅಡ್ಡಲಾಗಿ ನಿರ್ಮಿಸಿರುವ ಬೃಹತ್ ಮೋಕಂ ಸೇತುವೆ ನಿರ್ಮಾಣದಲ್ಲೂ ಅವರೇ ಮುಖ್ಯ ಸಲಹೆಗಾರರು. ನಮ್ಮ ರಾಜ್ಯದ ತುಂಗಭದ್ರಾ ಜಲಾಶಯ, ಕೆ ಆರ್ ಎಸ್ ಜಲಾಶಯ ಹಾಗೂ ಜೋಗದ ಮಹಾತ್ಮಗಾಂಧಿ ಶಕ್ತಿಕೇಂದ್ರ ಮುಂತಾದ ಹಲವಾರು ಪ್ರಮುಖ ಜಲಯೋಜನೆಗಳೂ ಸಹ ಸರ್ ಎಂ.ವಿಯವರ ದೂರದೃಷ್ಟಿಯ ಫಲಿತಾಂಶಗಳೇ ಆಗಿವೆ.

ಇಂತಹ ದಾರ್ಶನಿಕರ ಕುರಿತು ಹಲವಾರು ಕಥೆಗಳು, ನಿದರ್ಶನಗಳು ಸಹಜ. ವ್ಯಕ್ತಿತ್ವ ವಿಕಸನದ ದೃಷ್ಟಿಯಿಂದ ಸರ್ ಎಂ ವಿ.ಯವರ ಪ್ರಾಮಾಣಿಕತೆ, ಕರ್ತವ್ಯನಿಷ್ಠೆ, ದೂರದೃಷ್ಟಿಗಳ ಕುರಿತಾಗಿ ಇರುವ ಹಲವಾರು ಕಥೆಗಳು ತುಂಬಾ ಪ್ರೇರಣಾದಾಯಕವಾಗಿವೆ.

ಜೋಗಕ್ಕೆ ಅವರು ಭೇಟಿಯಿತ್ತಾಗ ಆ ಸುಂದರ ಜಲಪಾತದ ಜಲಧಾರೆಯನ್ನು ನೋಡಿ ಅವರು ಉದ್ಗರಿಸಿದ ಮೂರು ಶಬ್ದಗಳು ನಮ್ಮ ನಾಡಿಗೆ ಬೆಳಕನ್ನು ನೀಡಿದವು ಎನ್ನಲಾಗುತ್ತದೆ. ಈ ಅಪಾರವಾದ ಜಲಧಾರೆಯನ್ನು ಎಲ್ಲರೂ ಸೌಂದರ್ಯದ ದೃಷ್ಟಿಯಿಂದ ನೋಡುತ್ತಿದ್ದರೆ ಸರ್ ಎಂ

ವಿಶ್ವೇಶ್ವರಯ್ಯನವರು **What a waste** ಎಂದು ಉದ್ಗರಿಸಿದರಂತೆ! ಇಂತಹ ಅಪಾರ ಜಲಶಕ್ತಿ ವ್ಯರ್ಥವಾಗಿ ಹೋಗುತ್ತಿದೆಯಲ್ಲ ಎಂದು ಚಿಂತಿಸಿದ ಈ ಮಹಾನ್ ದಾರ್ಶನಿಕ ಅಲ್ಲಿಗೊಂದು ಜಲ ವಿದ್ಯುತ್ ಯೋಜನೆಯನ್ನು ರೂಪಿಸಿದರು ಹಾಗೂ ನಾಡಿಗೆ ಶಾಶ್ವತವಾದ ಬೆಳಕಿನ ಕೊಡುಗೆಯನ್ನು ನೀಡಿದರು. ಅವರ ಮುಂಗಾಣ್ಕೆಯ ಕೊಡುಗೆ ನಮ್ಮ ರಾಜ್ಯದ ಹಲವಾರು ಪ್ರಮುಖ ಸಂಘ ಸಂಸ್ಥೆಗಳನ್ನು ಕಟ್ಟಿ ಬೆಳೆಸುವಲ್ಲೂ ಇದೆ. ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್, ಆರ್ಥಿಕ ಸಬಲತೆಯ ಪ್ರತೀಕವಾದ ಮೈಸೂರು ಬ್ಯಾಂಕ್, ವ್ಯಾವಹಾರಿಕ ಸಂಘಟನೆಯಾದ ಛೇಂಬರ್ ಆಫ್ ಕಾಮರ್ಸ್, ಭದ್ರಾವತಿಯ ಉಕ್ಕಿನಕಾರ್ಖಾನೆ, ಬೆಂಗಳೂರುಪ್ರೆಸ್, ಮೈಸೂರು ವಿಶ್ವವಿದ್ಯಾಲಯ, ಬೆಂಗಳೂರಿನ ಯು.ವಿ. ಇಂಜಿನಿಯರಿಂಗ್ ಕಾಲೇಜು ಹೀಗೆ ಇಂದು ಬೃಹತ್ತಾಗಿ ಬೆಳೆದು ನಿಂತಿರುವ ಹತ್ತು ಹಲವು ನಮ್ಮ ನಾಡಿನ ಪ್ರಮುಖ ಸಂಸ್ಥೆಗಳ ಆರಂಭಕ್ಕೆ ಕಾರಣೀಭೂತರಾಗಿ, ನಾಡಿನ ಪ್ರಗತಿಗೆ ಕಾರಣವಾಗಿದ್ದು ಸರ್ ಎಂ ವಿಶ್ವೇಶ್ವರಯ್ಯನವರ ಅದ್ಭುತ ದೂರದೃಷ್ಟಿತ್ವ ಹಾಗೂ ದಾರ್ಶನಿಕತೆ.



# 21. ಮನಸ್ಸೇ ಸಾಧನೆಯ ಮೂಲ



ಪ್ರಪಂಚದ ಅತ್ಯಂತ ಎತ್ತರದ ಶಿಖರ, ಮೌಂಟ್ ಎವರೆಸ್ಟನ್ನು ಪ್ರಪಂಚದಲ್ಲೇ ಎರಡನೆಯವರಾಗಿ ಏರಿದ ಹೆಗ್ಗಳಿಕೆ ನೇಪಾಳ ದೇಶದ ತೇನ್ ಸಿಂಗ್ ನೋರ್ಗೆ ಅವರದ್ದು. ಈ ಸಾಧನೆ ಮಾಡಿದ ವಿಶ್ವದ ಮೊದಲಿಗ ನ್ಯೂಜಿಲೆಂಡ್ ದೇಶದ ಎಡ್ಮಂಡ್ ಹಿಲರಿಯ ಸಹಾಯಕನಾಗಿದ್ದ ತೇನ್ ಸಿಂಗ್ ಷೆರ್ಪ ಜನಾಂಗಕ್ಕೆ ಸೇರಿದವರು. ಈ ಜನಾಂಗದ ಮಂದಿ ಎಂತಹ ಕಡಿದಾದ ಪರ್ವತವನ್ನೂ ಭಾರೀ ತೂಕ ಹೊತ್ತು ಲೀಲಾಜಾಲವಾಗಿ ಏರುವ ಸಾಮರ್ಥ್ಯ ಹೊಂದಿರುವವರು. ಪರ್ವತಾರೋಹಿಗಳಿಗೆ ಸಹಾಯ ಮಾಡುವುದೇ ಇವರ ಮುಖ್ಯ ಉದ್ಯೋಗ. ತೇನ್ ಸಿಂಗ್ ಈ ಅತ್ಯದ್ಭುತ ಸಾಧನೆಯನ್ನು ಮಾಡಿದ ನಂತರ ಪತ್ರಿಕಾ ಮಾಧ್ಯಮದವರು ಅವರ ಸಂದರ್ಶನ ಮಾಡುವಾಗ 'ಎವರೆಸ್ಟ್ ಶಿಖರದ ತುಟ್ಟತುದಿಯನ್ನು ಏರಿ ನಿಂತ ಸಂದರ್ಭದಲ್ಲಿ ನಿಮಗೆ ಏನು ಅನಿಸಿತು?' ಎಂದು ಪ್ರಶ್ನಿಸಿದರು. ಆಗ ತೇನ್ ಸಿಂಗ್ ನೋರ್ಗೆ 'ನನಗೇನು ಅನ್ನಿಸಲಿಲ್ಲ' ಎಂಬ ಉತ್ತರವನ್ನು ಕೊಟ್ಟರು! ಜೊತೆಗೆ 'ನಾನು 10 ವರ್ಷದ ಬಾಲಕನಾಗಿದ್ದಾಗಲೇ ಎವರೆಸ್ಟ್ ಹತ್ತಿ ಬಿಟ್ಟಿದ್ದೆ' ಎಂಬ ಆಶ್ಚರ್ಯದಾಯಕ ಹೇಳಿಕೆಯನ್ನೂ ನೀಡಿದರು! ಪತ್ರಕರ್ತರು ಈ ಹೇಳಿಕೆಯನ್ನು ವಿವರಿಸುವಂತೆ ಕೇಳಿದಾಗ ತೇನ್ ಸಿಂಗ್ ಹೀಗೆಂದರು, 'ನಾನು ಹತ್ತು ವರ್ಷದ ಬಾಲಕನಾಗಿದ್ದಾಗ ನನ್ನ ತಾಯಿಯ ಜೊತೆಗೆ ಎವರೆಸ್ಟ್ ಶಿಖರದ ಬುಡಕ್ಕೆ ಹಸು ಮೇಯಿಸಲು ಹೋಗುತ್ತಿದ್ದೆ. ಆಗ ನನ್ನ ತಾಯಿ

ಎವರೆಸ್ಟ್ ಶಿಖರವನ್ನು ತೋರಿಸಿ ಮಗು ಇದೇ ಪ್ರಪಂಚದ ಅತ್ಯಂತ ಎತ್ತರದ ಸಾಗರ್ ಮಾತಾ ಶಿಖರ. ಇದನ್ನು ಏರುವ ಮೊದಲಿಗ ಈ ಜಗತ್ತಿನಲ್ಲೇ ನೀನಾಗಬೇಕು ಎನ್ನುತ್ತಿದ್ದರು. ಹೀಗಾಗಿ 10 ವರ್ಷದ ಬಾಲಕನಾಗಿದ್ದಾಗಲೇ ನಾನು ಮಾನಸಿಕವಾಗಿ ಮೌಂಟ್ ಎವರೆಸ್ಟನ್ನು ಹತ್ತಿ ಬಿಟ್ಟಿದ್ದೇನೆ. ಈಗ ಮಾಡಿರುವುದು ಕೇವಲ ದೈಹಿಕಸಾಧನೆ". ಯಾವುದೇ ಸಾಧನೆಯ ಮೂಲ ನಮ್ಮ ಮನಸ್ಸು. ಮಾಡಲೇಬೇಕೆಂದು ಅಂದುಕೊಂಡರೆ ಆ ಸಾಧನೆ ಖಂಡಿತ ಸಾಧ್ಯವಾಗುತ್ತದೆ. "ಅಸಾಧ್ಯ ಎಂಬ ಶಬ್ದವನ್ನು ನೀವು ನಿಘಂಟಿನಲ್ಲಿ ನೋಡಲು ಸಾಧ್ಯ" ಎಂಬುದಾಗಿ ನೆಪೋಲಿಯನ್ ಹೇಳುತ್ತಾರೆ. ಅದಕ್ಕೇ ನಮ್ಮ ಹಿರಿಯರು 'ಮನಸ್ಸಿದ್ದರೆ ಮಾರ್ಗ' ಎಂದು ಹೇಳಿರುವುದು.

ಪ್ರಪಂಚವನ್ನೇ ಗೆಲ್ಲಬೇಕೆಂದು ಚಿಕ್ಕಬಾಲಕನಾಗಿದ್ದಾಗಲೇ ಮಾನಸಿಕವಾಗಿ ನಿರ್ಣಯಿಸಿದ್ದ ಅಲೆಕ್ಸಾಂಡರ್, ಆ ಗುರಿಯೆಡೆಗೆ ಅವಿರತ ಪ್ರಯತ್ನ ಮಾಡಿ ಅರ್ಧಜಗತ್ತನ್ನೇ ಜಯಿಸಿದ. ದೈಹಿಕ ವೈಕಲ್ಯವನ್ನು ಮೀರಿ ನಿಂತು ಎವರೆಸ್ಟ್ ಶಿಖರವನ್ನು ಏರಿದ ಪ್ರಪಂಚದ ಮೊದಲ ವಿಶೇಷ ಚೇತನದ ಮಹಿಳೆ ಎಂಬ ಕೀರ್ತಿಗೆ ಪಾತ್ರರಾದ ಭಾರತೀಯ ಮಹಿಳೆ ಅರುಣಿಮಾ ಸಿನ್ಹಾರದ್ದು ಸಹಾ ಇದೇ ಥರದ ಪ್ರೇರಣಾದಾಯಕ ಕಥೆ. ರಾಷ್ಟ್ರೀಯ ವಾಲಿಬಾಲ್ ಆಟಗಾರ್ತಿಯಾಗಿದ್ದ ಈಕೆ ದುಷ್ಕರ್ಮಿಗಳ ದಾಳಿಗೆ ತುತ್ತಾಗಿ ಚಲಿಸುವ ರೈಲಿನಿಂದ ಕೆಳಗೆ ಬಿದ್ದು ತನ್ನ ಒಂದು ಕಾಲನ್ನೇ ಕಳೆದುಕೊಳ್ಳುತ್ತಾರೆ. ಆದರೆ ನಂತರ ಕೃತಕ ಕಾಲನ್ನು ಜೋಡಿಸಿಕೊಂಡು ಎವರೆಸ್ಟ್ ಹತ್ತಲೇಬೇಕೆಂಬ ಛಲದಿಂದ ನಿರಂತರ ಅಭ್ಯಾಸ ಮಾಡಿ, ಎವರೆಸ್ಟ್ ಏರಿ ದಾಖಲೆ ಸ್ಥಾಪಿಸುತ್ತಾರೆ. ಹೀಗಾಗಿ ಸಾಧನೆಯ ಪ್ರಾರಂಭಿಕ ಹೆಜ್ಜೆ, ಸಾಧಿಸಲೇಬೇಕೆಂಬ ಸಂಕಲ್ಪವನ್ನು ಮನದಲ್ಲಿ ಮಾಡುವುದೇ ಆಗಿದೆ.



# 22. ಜವಾಬ್ದಾರಿಗೆ ಹೆಗಲೊಡ್ಡುವುದೇ ನಿಜವಾದ ನಾಯಕತ್ವ



ಇದು ಎಪಿಜೆ ಅಬ್ದುಲ್ ಕಲಾಮ್ ಅವರು ಒಂದು ಸಂದರ್ಶನದಲ್ಲಿ ವಿವರಿಸಿದ ನೈಜ ಘಟನೆ. 1979ರಲ್ಲಿ ಕಲಾಂರವರು ಇಸ್ರೋದಲ್ಲಿ ವಿಜ್ಞಾನಿಯಾಗಿದ್ದ ಸಂದರ್ಭ. ಆಗ ಇವರ ನೇತೃತ್ವದಲ್ಲಿ ಎಸ್ ಎಲ್ ವಿ-3 ಯನ್ನು ಆಂತರಿಕ್ಷಕ್ಕೆ ಉಡಾವಣೆ ಮಾಡಲಾಗುತ್ತದೆ. ಆದರೆ ತಾಂತ್ರಿಕ ದೋಷದಿಂದ ಈ ಉಪಗ್ರಹ ಉಡಾವಣೆ ಯಶಸ್ವಿಯಾಗದೇ, ಅದು ಬಂಗಾಳಕೊಲ್ಲಿಯಲ್ಲಿ ಪತನಗೊಳ್ಳುತ್ತದೆ. ಸಾವಿರಾರು ಮಂದಿ ತಿಂಗಳುಗಟ್ಟಲೆ ಪಟ್ಟ ಪರಿಶ್ರಮ ನೀರಿನಲ್ಲಿ ಹೋಮ ಮಾಡಿದಂತಾಗುತ್ತದೆ. ಜೊತೆಗೆ ಇದರ ವೈಫಲ್ಯದ ಕುರಿತು ಪತ್ರಿಕಾಗೋಷ್ಠಿಯಲ್ಲಿ ವಿವರಣೆ ನೀಡುವ ಸಂದರ್ಭ ಕೂಡಾ ಬರುತ್ತದೆ. ಆಗ ಮಾಧ್ಯಮದವರು ದೇಶದ ದುಡ್ಡನ್ನು ವೃಥಾ ವ್ಯರ್ಥ ಮಾಡಿ ಬಂಗಾಳಕೊಲ್ಲಿಗೆ ಸುರಿದಿರಿ ಎಂದು ನಮ್ಮನ್ನು ಖಂಡಿತವಾಗಿಯೂ ದೂಷಿಸುತ್ತಾರೆ ಎಂಬ ಅಳುಕಿನಲ್ಲಿರುತ್ತಾರೆ, ಅಬ್ದುಲ್ ಕಲಾಂರವರು. ಆಗ ಇಸ್ರೋದ ಅಧ್ಯಕ್ಷರಾಗಿದ್ದ ಕ್ಯಾಪ್ಟನ್ ಸತೀಶ್ ಧವನ್ ಪತ್ರಿಕಾಗೋಷ್ಠಿಯನ್ನು 'ನಾನು ಎದುರಿಸುತ್ತೇನೆ' ಎಂದು ತಮ್ಮ ತಂಡದವರಿಗೆ ಧೈರ್ಯ ತುಂಬಿ ಮಾಧ್ಯಮದವರ ಮುಂದೆ ಅವರನ್ನು ಕರೆ

ತರುತ್ತಾರೆ ಹಾಗೂ ಅಲ್ಲಿ ಬರುವ ತೀಕ್ಷ್ಣ ಪ್ರಶ್ನೆಗಳಿಗೆ ಸಮರ್ಥವಾಗಿ ಉತ್ತರಿಸುತ್ತಾ 'ನಮ್ಮ ತಂಡ ಅತ್ಯಂತ ಪ್ರಾಮಾಣಿಕವಾಗಿ ಕೆಲಸ ಮಾಡಿದೆ. ಆದರೂ ತಾಂತ್ರಿಕ ದೋಷದಿಂದಾಗಿ ಉಪಗ್ರಹದ ಪತನವಾಗಿದೆ. ಮುಂದಿನ ಬಾರಿ ಖಂಡಿತವಾಗಿಯೂ ನಾವು ಯಶಸ್ವಿಯಾಗುತ್ತೇವೆ' ಎಂದು ಎಲ್ಲರ ಪರವಾಗಿ ಉತ್ತರಿಸುತ್ತಾರೆ ಹಾಗೂ ತಮ್ಮ ವಿಜ್ಞಾನಿಗಳ ಕಾರ್ಯಕ್ಷಮತೆಯ ಕುರಿತು ಸಂಪೂರ್ಣ ವಿಶ್ವಾಸ ವ್ಯಕ್ತಪಡಿಸಿ ಅವರನ್ನು ಸಮರ್ಥಿಸಿಕೊಳ್ಳುತ್ತಾರೆ.

ಅಂತೆಯೇ 1980ರಲ್ಲಿ ಉಪಗ್ರಹ ಉಡಾವಣೆ ಯಶಸ್ವಿಯಾಗಿ ನೆರವೇರುತ್ತದೆ. ದೇಶದೆಲ್ಲೆಡೆ ಸಂಭ್ರಮದ ವಾತಾವರಣ. ಆದರೆ ಈ ಬಾರಿ ಸತೀಶ್ ಧವನ್ ಅವರು, ಅಬ್ದುಲ್ ಕಲಾಂ ಹಾಗೂ ಅವರ ತಂಡದ ಪ್ರಮುಖರನ್ನು ಕರೆದು 'ಈ ಬಾರಿ ಪತ್ರಿಕಾಗೋಷ್ಠಿಯನ್ನು ನೀವೇ ಎದುರಿಸಿ ಹಾಗೂ ನಮ್ಮ ಯಶಸ್ಸಿನ ವಿವರಗಳನ್ನು ಮಾಧ್ಯಮದವರಿಗೆ ನೀಡಿ' ಎನ್ನುತ್ತಾರೆ!

ಇದೇ ಒಬ್ಬ ಶ್ರೇಷ್ಠ ನಾಯಕನ ಗುಣ ಎಂಬುದಾಗಿ ಅಬ್ದುಲ್ ಕಲಾಂ ಬಣ್ಣಿಸುತ್ತಾರೆ. ಪರಿಣಾಮಕಾರೀ ನಾಯಕ ವಿಫಲತೆ ಎದುರಾದಾಗ ಅದನ್ನು ತನ್ನ ತಂಡದ ಸದಸ್ಯರ ಮೇಲೆ ಹೊರಿಸಿ ಪಲಾಯನ ಮಾಡದೇ, ಅದರ ಜವಾಬ್ದಾರಿಯನ್ನು ತಾನೇ ಹೊರುತ್ತಾನೆ. ಹಾಗೆಯೇ ಯಶಸ್ಸು ಸಿಕ್ಕಾಗ ಅದು ತನ್ನಿಂದ ಮಾತ್ರ ಲಭಿಸಿದ್ದು ಎಂಬ ಸ್ವಾರ್ಥ ಭಾವನೆಯಿಂದ ಯೋಚಿಸದೇ ಯಶಸ್ಸಿನ ಶ್ರೇಯವನ್ನು ತನ್ನ ಇಡೀ ತಂಡಕ್ಕೆ ಹಂಚುತ್ತಾನೆ. ನಾಯಕತ್ವವೆಂದರೆ ಅದು ಕೇವಲ ಅಧಿಕಾರ ಹಾಗೂ ಅದರ ಬಲದಿಂದ ತನ್ನ ಕೈಕೆಳಗಿನವರನ್ನು ನಿಯಂತ್ರಣದಲ್ಲಿರಿಸಿಕೊಳ್ಳಲು ಮಾತ್ರ ಸೀಮಿತವಲ್ಲ. ಅಂತಹ ನಾಯಕತ್ವ ಸರ್ವಾಧಿಕಾರೀ ಮನೋಭಾವದ 'ಬಾಸಿಸಂ'ಗೆ ಉದಾಹರಣೆಯಾಗುತ್ತದಷ್ಟೇ. ಸೋಲು ಗೆಲುವುಗಳೆರಡಕ್ಕೂ ಸರಿಸಮಾನವಾಗಿ ಹೆಗಲೊಡ್ಡುವವನೇ ನಿಜವಾದ ನಾಯಕ. ಹೀಗಾಗಿ ನಾಯಕತ್ವ ಎಂಬುದು ಒಂದು ದೊಡ್ಡ ಜವಾಬ್ದಾರಿ. TEAM ಎಂಬ ಶಬ್ದದಲ್ಲಿ 'ನಾನು' ಎಂಬ ಅಕ್ಷರವಿಲ್ಲ. 'ನಾವು' ಎಂದು ಒಟ್ಟಾಗಿ ಯೋಚಿಸಿದಾಗ ಮಾತ್ರ ಒಂದು ತಂಡವಾಗಿ ಯಶಸ್ವಿಯಾಗಲು ಸಾಧ್ಯ. ಸತೀಶ್ ಧವನ್, ಅಬ್ದುಲ್ ಕಲಾಂರಂತಹ ಪರಿಣಾಮಕಾರೀ ನಾಯಕರು ದೇಶಕ್ಕೆ, ಸಂಘಟನೆಗಳಿಗೆ, ಸಂಘ-ಸಂಸ್ಥೆಗಳಿಗೆ ಸದಾ ಅವಶ್ಯಕ.

# 23. ನಮ್ಮನ್ನು ನಾವು ಕಂಡುಕೊಳ್ಳುವುದೇ ನಿಜವಾದ ಸಾಧನೆ

ಒಮ್ಮೆ ಒಬ್ಬ ಝೆನ್ ಗುರುವಿನ ಬಳಿ, ಸಾಕಷ್ಟು ಆಧ್ಯಾತ್ಮಿಕ ಸಾಧನೆಯನ್ನು ಮಾಡಿದ್ದ, ಯುವ ಸಾಧಕನೊಬ್ಬ ಬಂದು, "ಗುರುಗಳೇ ನಾನು ಬುದ್ಧನಾಗಬೇಕು ನನಗೆ ಮಾರ್ಗದರ್ಶನ ನೀಡಿ" ಎಂದು ಕೇಳಿದ. ತಕ್ಷಣ ಆ ಝೆನ್ ಗುರು ಒಳಗೆ ಹೋಗಿ ಒಂದು ದೊಡ್ಡ ಕೋಲನ್ನು ತಂದು ಅವನಿಗೆ ಹೊಡೆಯಲು ಹೊರಟ! ಭಯಭೀತನಾದ ಯುವಸಾಧಕ ಅಲ್ಲಿಂದ ಪಲಾಯನ ಮಾಡಿದ. ನಂತರ ಇನ್ನೊಬ್ಬ ಝೆನ್ ಗುರುವಿನ ಬಳಿ ಹೋಗಿ ಇದೇ ಪ್ರಶ್ನೆಯನ್ನು ಕೇಳಿದ. ಈ ಝೆನ್ ಗುರು ತಕ್ಷಣ  ಒಳ ಹೋಗಿ ಒಂದು ಹರಿತವಾದ ಕತ್ತಿಯನ್ನು ತಂದು ಇವನ ಮೇಲೆ ಪ್ರಹಾರವನ್ನೇ ಮಾಡಲು ಹೊರಟ! ಮತ್ತಷ್ಟು ಭಯಭೀತನಾದ ಯುವಸಾಧಕ ಅಲ್ಲಿಂದಲೂ ಕಾಲ್ಕಿತ್ತ. ಆದರೆ ತಾನು ಬುದ್ಧನಾಗುವುದು ಹೇಗೆ ಎಂಬ ಪ್ರಶ್ನೆ ಅವನನ್ನು ಕೊರೆಯುತ್ತಲೇ ಇತ್ತು. ಮೊದಲು ಭೇಟಿ ಮಾಡಿದ ಗುರುವಿನ ಬಳಿಗೇ ಮತ್ತೆ ಹೋದ ಯುವಸಾಧಕ, "ಗುರುಗಳೇ ನಾನು ಕೇಳಿದ ಪ್ರಶ್ನೆಗೆ ನೀವು ಕೋಲಿನಿಂದ ಹೊಡೆಯಬಂದಿರಿ. ಈ ಪ್ರಶ್ನೆಯನ್ನು ಕೇಳಿದಾಗ ಇನ್ನೊಬ್ಬ ಗುರು ಕತ್ತಿಯನ್ನು ಹಿಡಿದು ನನ್ನನ್ನು ಕಡಿಯಲೆಂದೇ ಬಂದಿದ್ದ!. ಏಕೆ ಹೀಗೆ ಗುರುಗಳೇ?" ಎಂದು ಕೇಳಿದ. ಆಗ ಆ ಝೆನ್ ಗುರು "ಹೌದಾ ಸರಿಯಾಗಿಯೇ ಮಾಡಿದ್ದಾನೆ ಅವನು! ಆದರೆ, ದಡ್ಡ, ಇಷ್ಟು ತೀವ್ರವಾಗಿ ಹೇಳಿದರೂ ನಿನಗಿನ್ನೂ ಅರ್ಥವಾಗಿಲ್ಲವೇ? ನೀನು ಆಗಲೇ ಬುದ್ಧನಾಗಿದ್ದಿ. ನಿನ್ನನ್ನು ನೀನು ಕಂಡುಕೊಳ್ಳುವುದೇ ನಿಜವಾಗಿ ಬುದ್ಧನಾಗುವ ಪರಿ" ಎಂದು ವಿವರಿಸಿದ. ನಮ್ಮೊಳಗೆ ನಾವು ಹೊಕ್ಕು ನಮ್ಮನ್ನು ನಾವು ಸರಿಯಾಗಿ ಕಂಡುಕೊಳ್ಳುವುದೇ ನಿಜವಾದ ಜ್ಞಾನೋದಯ. ಅರಿವು ಎಂಬ ದೀಪ ಬಿಟ್ಟಾಗ, ನಮ್ಮೊಳಗಿರುವ ಬುದ್ಧ ನಮಗೆ ಖಂಡಿತವಾಗಿಯೂ ಗೋಚರಿಸುತ್ತಾನೆ. ಈ ಅರಿವೇ ಶರಣರು ಹೇಳಿದಂತೆ ನಿಜವಾದ ಗುರು. ಅದಕ್ಕೆ ನಮ್ಮ ಹಿರಿಯರು ಹೇಳಿರುವುದು ನಮ್ಮಲ್ಲಿ ನಾವಾಗಬೇಕೆಂದು. ನಮ್ಮ ಅಂತರಂಗವನ್ನು ಸರಿಯಾಗಿ ಅವಲೋಕಿಸಿಕೊಂಡು

ಅದಕ್ಕೆ ಸೂಕ್ತ ನ್ಯಾಯ ಒದಗಿಸುವುದೇ ನಮ್ಮಲ್ಲಿ ನಾವಾಗುವ ಪಥ. ಬಸವಣ್ಣನವರು ತಮ್ಮ ವಚನ ಒಂದರಲ್ಲಿ ಪಂಚಶೀಲಗಳನ್ನು ಬಹಳ ಅದ್ಭುತವಾಗಿ ವಿವರಿಸಿ ಹೇಳುತ್ತಾರೆ. ಅದರಲ್ಲಿ ಅವರು ಉಲ್ಲೇಖಿಸುವ ಮೊದಲ ಶೀಲವೆಂದರೆ **'ಇದ್ದುದ ವಂಚನೆ ಮಾಡದಿರ್ಪುದೇ ಶೀಲ'** ಅಂದರೆ ನಮ್ಮ ಒಳಗೆ ಇರುವ ಅಂತರಂಗದ ಶಕ್ತಿಗೆ ನಾವೆಂದೂ ವಂಚನೆ ಮಾಡಬಾರದು. ಅದನ್ನು ಸರಿಯಾಗಿ ಗುರುತಿಸಿಕೊಂಡು, ಅದಕ್ಕೆ ಸೂಕ್ತವಾದ ನ್ಯಾಯ ಒದಗಿಸುತ್ತಾ ಮನೋವಿಕಾಸ ಮಾಡಿಕೊಳ್ಳುವುದೇ ಬದುಕಿನ ಸಾರ್ಥಕತೆ. ಇದೇ ಮಹಾತ್ಮರ ಸಾಧನೆಯ ಹಾದಿ.



# 24. ಶತ್ರುವಿನಲ್ಲೂ ಸಾಮರ್ಥ್ಯವನ್ನು ಗುರುತಿಸುವುದೇ ನಿಜವಾದ ನಾಯಕತ್ವ

ಅಮೇರಿಕಾದ ಅತ್ಯಂತ ವಿಶಿಷ್ಟ ಅಧ್ಯಕ್ಷರಾಗಿದ್ದ ಅಬ್ರಹಾಂಲಿಂಕನ್, ತಮ್ಮ ಪ್ರಾಮಾಣಿಕತೆಯಿಂದ **ಆನೆಸ್ಟ್ ಆಬ್ (Honest Abe)** ಎಂದೇ ಪ್ರಖ್ಯಾತರಾಗಿದ್ದರು. 1809 ರಲ್ಲಿ ಕೆಂಟುಕಿಯಲ್ಲಿ ಜನಿಸಿದ್ದ ಲಿಂಕನ್, ಕಷ್ಟಕರವಾದ ಬಾಲ್ಯವನ್ನು ಕಳೆದಿದ್ದರು, ವೈಯಕ್ತಿಕ ಜೀವನದಲ್ಲಿ ಹತ್ತು ಹಲವು ಸಮಸ್ಯೆಗಳನ್ನು, ತೀವ್ರ ಅನಾರೋಗ್ಯವನ್ನು ಎದುರಿಸಿದ್ದರು. ಇದನ್ನೆಲ್ಲಾ ಮೀರಿ ನಿಂತು ತಮ್ಮ ಸ್ವಯಂಪ್ರತಿಭೆಯಿಂದ 1861ರಲ್ಲಿ ರಿಪಬ್ಲಿಕನ್ ಪಕ್ಷದ ಮೂಲಕ ಅಮೆರಿಕಾದ ಸರ್ವೋನ್ನತ ಹುದ್ದೆಯನ್ನೇರಿದರು. ಆಗ ಅಮೆರಿಕದಲ್ಲಿ ತೀವ್ರವಾಗಿ ಪ್ರಚಲಿತದಲ್ಲಿದ್ದ ಗುಲಾಮಗಿರಿಯ ವಿರುದ್ಧ ಕಾನೂನುಗಳನ್ನು ರೂಪಿಸಿದರು. ದೇಶದಲ್ಲಿ ಉಲ್ಬಣಗೊಂಡಿದ್ದ ಆಂತರಿಕ ಯುದ್ಧವನ್ನು ಅತ್ಯಂತ ಸಮರ್ಥವಾಗಿ ನಿಭಾಯಿಸಿದರು. 1865ರಲ್ಲಿ ಅಧಿಕಾರದಲ್ಲಿದ್ದಾಗಲೇ ಹಂತಕನ ಗುಂಡಿಗೆ ಬಲಿಯಾದ ಅಬ್ರಹಾಂಲಿಂಕನ್, ತಮ್ಮ ಶತ್ರುವನ್ನೂ ಸನ್ಮಿತ್ರನಾಗಿ ಕಾಣುವ ಗುಣಕ್ಕೆ ಪ್ರಸಿದ್ಧರಾಗಿದ್ದರು.

ಅಬ್ರಹಾಂಲಿಂಕನ್ ಅಧ್ಯಕ್ಷರಾಗಿ ಆಯ್ಕೆಯಾಗುವ ಮೊದಲು ವಕೀಲರಾಗಿದ್ದರು. ಆ ಸಂದರ್ಭದಲ್ಲಿ ದೇಶಕ್ಕೆ ಎದುರಾಗಿದ್ದ ಕಾನೂನಿನ ತೊಡಕೊಂದನ್ನು ಪರಿಹರಿಸಲು ಅಮೆರಿಕಾದ ಸುಪ್ರಸಿದ್ಧ ವಕೀಲರೊಬ್ಬರ ನೇತೃತ್ವದಲ್ಲಿ ನಿಯೋಗವೊಂದನ್ನು ರಚಿಸಲಾಗಿತ್ತು. ಆ ನಿಯೋಗದಲ್ಲಿ ಯುವ ವಕೀಲರಾದ ಅಬ್ರಾಹಂಲಿಂಕನ್ ಸಹ ಇದ್ದರು. ಲಿಂಕನ್ನರು ನಿಯೋಗದ ಅಧ್ಯಕ್ಷರಾದ ಸುಪ್ರಸಿದ್ಧ ವಕೀಲರನ್ನು ಭೇಟಿ ಮಾಡಲು ಹೋದರು. ಸುರದ್ರೂಪಿಯಲ್ಲದ, ಕಾಲಿಗೆ ಚಪ್ಪಲಿ ಧರಿಸಿದ್ದ ಹಾಗೂ ಯಾವುದೇ ಬಗೆಯ ಸಿರಿವಂತಿಕೆಯ ವಸ್ತ್ರಗಳನ್ನು ಧರಿಸಿರದಿದ್ದ ಲಿಂಕನ್ನರನ್ನು ಆ ವಕೀಲರು ಬಹಳ ಕೀಳಾಗಿ ಕಂಡರು. ತಮ್ಮ ಕೋಣೆಯೊಳಕ್ಕೂ ಲಿಂಕನ್ನರನ್ನು ಸೇರಿಸಿಕೊಳ್ಳಲಿಲ್ಲ.

ಅವಮಾನಿತರಾದರೂ ಸಹಿಸಿಕೊಂಡು ಲಿಂಕನ್ ದೂರದಲ್ಲಿಯೇ ಕುಳಿತು ಈ ಪ್ರಖ್ಯಾತ ವಕೀಲರ ವಾದವಿವಾದಗಳನ್ನು ಆಲಿಸಿದರು ಹಾಗೂ ದೇಶ ಆ ಕಾನೂನು ತೊಡಕಿನಿಂದ ಪಾರಾಗಿದ್ದಕ್ಕೆ ಹರ್ಷ ವ್ಯಕ್ತಪಡಿಸಿದರು. ಇದಾದ ಕೆಲವು ವರ್ಷಗಳಲ್ಲಿ ಅಬ್ರಾಹಂಲಿಂಕನ್ ಅಮೇರಿಕಾದ ಅಧ್ಯಕ್ಷರಾಗಿ ಚುನಾಯಿತರಾದರು. ಆ ಸಂದರ್ಭದಲ್ಲೂ ಒಂದು ಮಹತ್ತರವಾದ ಕಾನೂನಿನ ತೊಡಕು ಎದುರಾಯಿತು.

ಆಗ ಅಧ್ಯಕ್ಷ ಲಿಂಕನ್, ತಮ್ಮನ್ನು ಹಿಂದೆ ಅವಮಾನಿಸಿದ್ದ ಸುಪ್ರಸಿದ್ಧ ವಕೀಲರಿಗೆ ಕರೆ ಕಳಿಸಿದರು. ಹಿಂದಾದ ಅವಮಾನಕ್ಕೆ ತನ್ನ ಮೇಲೆ ಸೇಡು ತೀರಿಸಿಕೊಳ್ಳಲು ಅಧ್ಯಕ್ಷರು ಕರೆಸಿರಬಹುದೇನೋ ಎಂಬ ಭಯದಲ್ಲೇ ಆ ಸುಪ್ರಸಿದ್ಧ ವಕೀಲರು ಲಿಂಕನ್ ಅವರನ್ನು ಭೇಟಿಯಾದರು. ಆಗ ಲಿಂಕನ್ "ದೇಶಕ್ಕೆ ಈಗ ಎದುರಾಗಿರುವ ಈ ಕಾನೂನಿನ ತೊಡಕನ್ನು ಬಗೆಹರಿಸಲು ನೀವೇ ಸಮರ್ಥ ವ್ಯಕ್ತಿ. ನಿಮ್ಮನ್ನೇ ಈ ವಕೀಲರ ನಿಯೋಗಕ್ಕೆ ಅಧ್ಯಕ್ಷನನ್ನಾಗಿ ಮಾಡಿದ್ದೇನೆ" ಎಂದಾಗ ಆ ವಕೀಲರಿಗೆ ನಿಜಕ್ಕೂ ಪರಮಾಶ್ಚರ್ಯ! ಇದನ್ನು ಅವರು ಅಧ್ಯಕ್ಷರ ಬಳಿ ಹೇಳಿಕೊಂಡಾಗ ಲಿಂಕನ್ "ನಿಜ ನೀವು ನನ್ನನ್ನು ಅಂದು ತೀವ್ರವಾಗಿ ಅವಮಾನಿಸಿದ್ದಿರಿ, ಆದರೆ ನಿಮ್ಮ ವಕೀಲ ವೃತ್ತಿಯ ಸಾಮರ್ಥ್ಯ ಹಾಗೂ ಜ್ಞಾನ ಅಸಾಧಾರಣವಾದದ್ದು. ನಾನು ಅದನ್ನು ಗಮನಿಸಿದ್ದೇನೆ ಹಾಗೂ ನಿಮ್ಮ ಅದ್ಭುತ ವಾದಗಳನ್ನು ಆಲಿಸಿದ್ದೇನೆ. ಹೀಗಾಗಿ ನಿಮ್ಮ ಆಯ್ಕೆಯನ್ನು ನಾನೇ ಸ್ವತಃ ಮಾಡಿದ್ದೇನೆ. ನೀವು ಯಶಸ್ವಿಯಾಗುವವರೆಂಬ ನಂಬಿಕೆ ನನಗೆ ದೃಢವಾಗಿ ಇದೆ" ಎಂದು ನುಡಿದರು. ಇದೇ ಶತ್ರುವನ್ನೂ ಸನ್ಮಿತ್ರನಾಗಿ ಕಂಡು ಅವನಲ್ಲಿರುವ ಒಳ್ಳೆಯತನ, ಸಾಮರ್ಥ್ಯವನ್ನು ದೇಶದ ಒಳಿತಿಗಾಗಿ ಸೂಕ್ತ ರೀತಿಯಲ್ಲಿ ಬಳಸಿಕೊಳ್ಳುವ ರೀತಿ ಹಾಗೂ ಪರಿಣಾಮಕಾರೀ ನಾಯಕತ್ವದ ಬಹುಮುಖ್ಯ ಲಕ್ಷಣ.



# 25. ಶಿಕ್ಷಣವೆಂಬುದು ಬುದ್ಧಿ ಭಾವಗಳ ನಿರಂತರ ಬೆಳವಣಿಗೆ




ಮಹಾತ್ಮಗಾಂಧೀಜಿಯವರು ದಕ್ಷಿಣಆಫ್ರಿಕಾದ ತಮ್ಮ ಫೀನಿಕ್ಸ್ ಆಶ್ರಮದಲ್ಲಿ ಆಶ್ರಮವಾಸಿಗಳ ಮಕ್ಕಳಿಗಾಗಿ ಶಾಲೆಯೊಂದನ್ನು ತೆರೆದಿದ್ದರು. ಗಾಂಧೀಜಿಯವರ ನಿಲುವಿನಲ್ಲಿ ಶಿಕ್ಷಣವೆಂದರೆ ಬರೀ ಅಂಕಗಳಿಕೆಗಷ್ಟೇ ಸೀಮಿತವಾಗಿರದೇ, ನಮ್ಮ ಬುದ್ಧಿ ಹಾಗೂ ಭಾವ ಎರಡನ್ನೂ ವಿಕಾಸಗೊಳಿಸುವಂಥಾ ಜ್ಞಾನಾರ್ಜನೆಯಾಗಿರಬೇಕು. ಇಂತಹ ನಿಜವಾದ ಶಿಕ್ಷಣವನ್ನು ಮಕ್ಕಳಿಗೆ ನೀಡಬೇಕು ಎಂಬುದು ಅವರ ಉದ್ದೇಶವಾಗಿತ್ತು. ಹೀಗಾಗಿ ಅವರು ಮಕ್ಕಳ ಪ್ರಗತಿಯನ್ನು ವಿಭಿನ್ನ ಮಾನದಂಡದಲ್ಲಿ ಅಳೆಯುತ್ತಿದ್ದರು. ಪರೀಕ್ಷೆಯಲ್ಲಿ ಎಲ್ಲ ವಿದ್ಯಾರ್ಥಿಗಳಿಗೂ ಸಮನಾದ ಪ್ರಶ್ನೆಯನ್ನು ನೀಡಲಾಗುತ್ತಿತ್ತು. ಮೌಲ್ಯಮಾಪನದ ನಂತರ ಗಾಂಧೀಜಿಯವರು ಅತಿಕಡಿಮೆ ಅಂಕಗಳಿಸಿದ ವಿದ್ಯಾರ್ಥಿಗಳನ್ನು ಪ್ರಶಂಶಿಸುತ್ತಿದ್ದರು ಹಾಗೂ ಅತಿಹೆಚ್ಚು ಅಂಕಪಡೆದ ವಿದ್ಯಾರ್ಥಿಗಳಿಗೆ ಬೈದು ಬುದ್ಧಿ ಹೇಳುತ್ತಿದ್ದರು! ಗಾಂಧೀಜಿಯವರ ಈ ನಿಲುವು, ಮಕ್ಕಳು ಹಾಗೂ ಅವರ ಪೋಷಕರನ್ನು ಸಹಜವಾಗಿ ಗೊಂದಲಕ್ಕೆ ದೂಡಿತು. ಅವರು ಗಾಂಧೀಜಿಯವರನ್ನು ಹೀಗೇಕೆ ಮಾಡುತ್ತಿದ್ದೀರಿ ಎಂದು ಪ್ರಶ್ನಿಸಿದಾಗ ಗಾಂಧೀಜಿ, 'ನಾನು ಕಡಿಮೆ ಅಂಕ ಪಡೆದ ವಿದ್ಯಾರ್ಥಿಯನ್ನು ಅವನು ಪಡುತ್ತಿರುವ

ಪರಿಶ್ರಮಕ್ಕಾಗಿ ಪ್ರಶಂಶಿಸುತ್ತಿದ್ದೇನೆ. ಇದರಿಂದಾಗಿ ಅವನ ಪರಿಶ್ರಮ ಇನ್ನಷ್ಟು ಹೆಚ್ಚುತ್ತದೆ. ಹಾಗೆಯೇ ಅತಿ ಹೆಚ್ಚು ಅಂಕಪಡೆದ ವಿದ್ಯಾರ್ಥಿ, ಕಡಿಮೆ ಅಂಕ ಪಡೆದ ವಿದ್ಯಾರ್ಥಿಯೊಂದಿಗೆ ತನ್ನನ್ನು ತಾನು ಹೋಲಿಸಿಕೊಂಡು ತಾನೇ ಬುದ್ಧಿವಂತ ಎಂಬ ಆಲೋಚನೆಯೊಂದಿಗೆ ಹೆಚ್ಚಿನ ಪರಿಶ್ರಮ ಪಡುವುದನ್ನೇ ನಿಲ್ಲಿಸಿ ಬಿಡುತ್ತಾನೆ. ಇದರಿಂದ ಅವನ ಪ್ರಗತಿ ಕುಂಠಿತವಾಗುತ್ತದೆ. ಜ್ಞಾನ ನಿಂತ ನೀರಾಗುತ್ತದೆ. ಹಾಗಾಗಿ ಅವನಿಗೆ ಬೈದು ಬುದ್ಧಿ ಹೇಳುತ್ತೇನೆ' ಎಂದು ಉತ್ತರಿಸಿದರು.

ಇಂದು ಸಂಪೂರ್ಣವಾಗಿ ವ್ಯಾಪಾರೀಕರಣಗೊಂಡಿರುವ ಶಿಕ್ಷಣದ ಸ್ಥಿತಿ ಗತಿಗಳ ಹಿನ್ನೆಲೆಯಲ್ಲಿ ಗಮನಿಸಿದಾಗ ಗಾಂಧೀಜಿಯವರ ಚಿಂತನೆ ಎಷ್ಟು ಅರ್ಥಪೂರ್ಣವಾಗಿದೆ ಎಂದೆನಿಸುವುದಿಲ್ಲವೇ? ಅಂಕಗಳಿಕೆಯೇ ಇಂದು ಜ್ಞಾನಾರ್ಜನೆಯ ಏಕೈಕ ಮಾನದಂಡವಾಗಿಬಿಟ್ಟಿದೆ. ಇದರಿಂದ ಹೆಚ್ಚುಅಂಕ ಪಡೆದವರನ್ನು ಮಾತ್ರ ಜ್ಞಾನಿಗಳು ಎಂದು ಗುರುತಿಸುವಂತಾಗಿದೆ. ಆದರೆ ಅವರ ಜ್ಞಾನ, ಬುದ್ಧಿ ಭಾವಗಳ ವಿಕಾಸಕ್ಕೆ ಕಾರಣವಾಗಿದೆಯೇ? ಜ್ಞಾನಾರ್ಜನೆ ಎಂದರೆ ಎಂದಿಗೂ ನಿಂತ ನೀರಾಗದ ನಿರಂತರವಾದ ಪ್ರಕ್ರಿಯೆ ಎಂಬ ಚಿಂತನೆ ಅವರಲ್ಲಿ ಇದೆಯೇ? ಕೇವಲ ತನಗಷ್ಟೇ ಒಳ್ಳೆಯ ಉದ್ಯೋಗ, ತನ್ಮೂಲಕ ಅತ್ಯುತ್ತಮ ಪಗಾರವನ್ನು ಗಳಿಸಿಕೊಡುವ ಶಿಕ್ಷಣ, ಮಾನಸಿಕವಾಗಿ ನಮ್ಮ ಪ್ರಗತಿಗೆ ಕಾರಣವಾಗುತ್ತಿದೆಯೇ? ಸಮಾಜದ ಬೇರೆಯವರ ನೋವಿಗೆ ಕಷ್ಟಕ್ಕೆ ಸ್ಪಂದಿಸುವ ಸೂಕ್ಷ್ಮತೆಯನ್ನು, ಸಹಾನುಭೂತಿಯನ್ನು ನಮ್ಮ ಮಕ್ಕಳಲ್ಲಿ ತುಂಬುತ್ತಿದೆಯೇ?

ಈ ಬಗೆಯ ಮೌಲ್ಯಶಿಕ್ಷಣಕ್ಕೆ ಖಂಡಿತವಾಗಿಯೂ ಅಂಕಗಳ ಹಂಗಿರುವುದಿಲ್ಲ. ಈ ರೀತಿಯ ಶಿಕ್ಷಣವನ್ನೇ, ನಾವು ನಮ್ಮ ಬದುಕಿನುದ್ದಕ್ಕೂ ಪಡೆದುಕೊಳ್ಳಬೇಕಾದದ್ದು ಹಾಗೂ ಇದು ನಮ್ಮ ಜೀವನ ಮೌಲ್ಯವನ್ನು ನಿರಂತರವಾಗಿ ವಿಕಸನಗೊಳಿಸುವ ಭಾವ-ಬುದ್ಧಿಗಳ ಪರಿಷ್ಕರಣೆ. ಮೌಲ್ಯಯುತವಾದ ಸಮಾಜ ನಿರ್ಮಾಣಕ್ಕೆ ಇಂತಹ ಶೈಕ್ಷಣಿಕ ವ್ಯವಸ್ಥೆಯ ಅಗತ್ಯ ಖಂಡಿತವಾಗಿಯೂ ಇದೆಯಲ್ಲವೇ?

# 26. ಗೊಬ್ಬರಕ್ಕೂ ಸಿಗಲಿ ಗೌರವ




ರಸಋಷಿ ಕುವೆಂಪುರವರು ನಮ್ಮ ಸುತ್ತಲೂ ಇರುವ ಸುಂದರ ಪ್ರಕೃತಿಯ ಕುರಿತು ಅದ್ಭುತ ಕವಿತೆಗಳನ್ನು ರಚಿಸಿದ್ದಾರೆ. ಉದಯ ರವಿಯ ಚೆಲುವು, ಮುತ್ತಿನ ಮಣಿಗಳಂತೆ ಗೋಚರಿಸುವ ಇಬ್ಬನಿಯ ಬೆರಗು, ಎದೆಯಲಿ ನಲುಮೆಯ ಚೆಲುಮೆಯನ್ನು ಚಿಮ್ಮಿಸುವ ಹೂವು,ಮುಂತಾದವು ಕವಿಯ ಕವಿತಾ ವಸ್ತುಗಳಾಗಿರುವಂತೆಯೇ, ಈ ಜಗತ್ತಿನಲ್ಲಿ ಯಾರೂ ಮುಖ್ಯರಲ್ಲ ಯಾರು ಅಮುಖ್ಯರಲ್ಲ ಎಂದು ನಂಬಿರುವ ಕವಿಯಿಂದ ಗೊಬ್ಬರ ಕೂಡ ಕಾವ್ಯವಾಗಿ ಹೊರಹೊಮ್ಮಿರುವುದು ವಿಶೇಷ. ಕುವೆಂಪುರವರ **"ಕೋಗಿಲೆ ಮತ್ತು ಸೋವಿಯತ್ ರಷ್ಯಾ"** ಕವನ ಸಂಕಲನದಲ್ಲಿರುವ **"ಗೊಬ್ಬರ"** ಎನ್ನುವ ದೀರ್ಘ ಕವಿತೆ, ಸೃಜನಶೀಲನಾದ ಹಾಗೂ ಅಷ್ಟೇ ಸಂವೇದನಾಶೀಲನಾದ ವ್ಯಕ್ತಿ ಒಬ್ಬ ಹೇಗೆ ಚಿಂತಿಸಬಹುದು ಎನ್ನುವುದಕ್ಕೆ ಹಿಡಿದ ಕನ್ನಡಿ. "ಅವರ ತಲೆಯಲ್ಲಿ ಮೆದುಳಿಲ್ಲ, ಬರೀ ಗೊಬ್ಬರ" ಎಂಬ ರೀತಿಯಲ್ಲಿ ತೀವ್ರ ತಿರಸ್ಕಾರಕ್ಕೆ ಒಳಗಾಗಿರುವ ಗೊಬ್ಬರದಂತಹ ಜಡ ವಸ್ತು ಸಹ, ಹೊಸದನ್ನು ಹುಡುಕುವ ಮನಸ್ಸಿದ್ದರೆ ಹೇಗೆ ವಿಶೇಷವಾಗಿ

ತೋರಬಲ್ಲದು ಎಂಬ ಧನಾತ್ಮಕ ಚಿಂತನೆಯನ್ನೂ ಈ ವಿಶಿಷ್ಟ ಕವಿತೆ ಎತ್ತಿ ಹಿಡಿಯುತ್ತದೆ.

ನಮಗೆ ಮರದ ತುದಿಯಲ್ಲಿ ಅರಳಿ ನಿಂತು, ತಂಗಾಳಿಗೊಲೆವ ಸುಂದರ ಹೂವು ಕಾಣಿಸುತ್ತದೆ. ಅದರ ಚೆಲುವು, ಪರಿಮಳ ನಮ್ಮ ಕಣ್ಮನ ಸೆಳೆಯುತ್ತದೆ. ಆದರೆ ಈ ಮರವನ್ನು ಹಿಡಿದೆತ್ತಿ ನಿಲ್ಲಿಸಿದ ಮರದ ಒಳ ಆಳದ ಬೇರಿನ, ನಿಸ್ವಾರ್ಥ ಕಾಯಕ ನಮ್ಮ ಕಣ್ಣಿಗೆ ಗೋಚರಿಸುವುದಿಲ್ಲ. ಹೂವಿನ ಸೌಂದರ್ಯ ವಿಶೇಷ ಶಬ್ದಗಳಿಂದ ವರ್ಣಿಸಲ್ಪಡುತ್ತದೆ, ಹಣ್ಣಿನ ಸವಿ, ಪ್ರಶಂಸೆಗೆ ಪಾತ್ರವಾಗುತ್ತದೆ. ಆದರೆ ಈ ಸೌಂದರ್ಯಕ್ಕೆ, ಸವಿಗೆ ಜೀವವನ್ನಿತ್ತ ಗೊಬ್ಬರದ ನಿಸ್ಪೃಹಸೇವೆ ಕಣ್ಣಿಗೆ ಕಾಣಿಸುವುದೇ ಇಲ್ಲ. ಆದರೆ ಸೂಕ್ಷಗ್ರಹಿಕೆಯ, ಜೀವನ ಪ್ರೀತಿಯುಳ್ಳ ಕವಿಗೆ, ಇಲ್ಲಿ "ಗೊಬ್ಬರ" ಕೂಡಾ ಕವಿತಾ ವಸ್ತುವಾಗುತ್ತದೆ.

ಗೊಬ್ಬರ ಎಂಬುದು ಇಡೀ ಕೃಷಿ ಸಂಸ್ಕೃತಿಗೆ ಮೂಲಾಧಾರ. ಕುವೆಂಪುರವರು ಶ್ರಮ ಸಂಸ್ಕೃತಿಯ ಪ್ರತೀಕವಾದ ಗೊಬ್ಬರವನ್ನು ಕವಿತೆಯಾಗಿಸಿ ಅದಕ್ಕೆ ವಿಶಿಷ್ಟ ಗೌರವವನ್ನು ಸಲ್ಲಿಸುತ್ತಾರೆ ಹಾಗೂ ಕಲ್ಪನೆಗಳ ಲೋಕದಲ್ಲಿಯೇ ವಿಹರಿಸುವ ಕಾವ್ಯಕ್ಕೆ ವಾಸ್ತವದ ದಾರಿ ತೋರಿಸುತ್ತಾರೆ. **"ಗೊಬ್ಬರವನಲ್ಲಗಳೆಯುವೆ ಏಕೆ ಮರದ ತುದಿ ನಲ್ಗಂಪುವೆತ್ತು ತಂಗಾಳಿಗೊಲೆವ ಹೂವೆ? ಬೇರುಗಳಿಗಿಲ್ಲದಿರೆ ಗೊಬ್ಬರಂ ಹೇಳೆನಗೆ ವೃಕ್ಷಕೆಲ್ಲಿಯದು ಹೂವಿನ ಹಬ್ಬ? ಗೊಬ್ಬರದ ಜೀವವನೆ ಹೀರಿ ಕೊಬ್ಬಿಹ ಹೂವೆ, ಕಬ್ಬಕ್ಕೆ ನೀ ಮಾತ್ರ ವಸ್ತುವೇಂ? ನಿನ್ನಂತೆ ಗೊಬ್ಬರಂ ಕಬ್ಬಕ್ಕೆ ಸಾಮಗ್ರಿಯಾಗಬಾರದೆ ಹೇಳು?"**

ಗೊಬ್ಬರದ ಸತ್ವವನ್ನು ಹೀರಿ ತನ್ನ ಸೌಂದರ್ಯದಿಂದ ಕೊಬ್ಬುತ್ತಿರುವ ಹೂವನ್ನು ಕವಿ, ಬೇರುಗಳಿಗೆ ಗೊಬ್ಬರವಿಲ್ಲದಿದ್ದರೆ ವೃಕ್ಷಕ್ಕೆ ಎಲ್ಲಿಯ ಹೂವಿನ ಹಬ್ಬ? ಎಂಬುದಾಗಿ ಪ್ರಶ್ನಿಸುತ್ತಾರೆ. ಜೊತೆಗೆ ಇಂದು ನಗುತ್ತಿರುವ ಹೂವು, ನಾಳೆ ಬಾಡಿ ನೆಲಕ್ಕೆ ಬಿದ್ದು ಗೊಬ್ಬರವಾಗಲೇಬೇಕು. ಇದು ಪ್ರಕೃತಿಯ ನಿಯಮ. ಹೂವಿನ ಭೋಗದ ಪರಿಮಳದ ಹಿಂದೆ, ಗೊಬ್ಬರದ ಮಣ್ಣಿನ ವಾಸನೆಯ ಪುಷ್ಟಿ ಇದೆ. ಅಂತೆಯೇ ನಾವು ಬಾಯಿ ಚಪ್ಪರಿಸುತ್ತಾ ಸವಿಯುವ ಫಲದ ಸಿಹಿಯಲ್ಲಿ, ವಾಸನೆ ಎಂದು ಮೂಗು ಮುರಿವ ಗೊಬ್ಬರದ ಪಾಲು ಬಹಳ ದೊಡ್ಡದು. ಇದೇ ರೀತಿ ನಮ್ಮ ಬದುಕನ್ನು ಹಿರಿದಾಗಿಸಿ, ನಮಗೆ ಗೊಬ್ಬರದಂತೆ ಸತ್ವವನ್ನು, ಪುಷ್ಟಿಯನ್ನು ಕೊಟ್ಟು ಮರೆಯಾದವರೆಷ್ಟೋ?

ಆದರೆ ಈ ಜಗತ್ತಿನ ಕಣ್ಣಿಗೆ ಬೀಳುವುದು ಹೊರಗಿನ ಥಳಕು ಮಾತ್ರ. ಉತ್ತಮ ಫಲಕ್ಕೆ ಕಾರಣವಾಗುವ ಗೊಬ್ಬರಕ್ಕೆ ನಿಜವಾದ ಬೆಲೆ ಸಿಕ್ಕಲೇಬೇಕು. ಅದರೆಡೆಗೆ ತಿರಸ್ಕಾರದ ನೋಟ ಸಲ್ಲ. ಅಂತೆಯೇ ನಮ್ಮ ಬದುಕನ್ನು ಹಸನಾಗಿಸಲು ತೆರೆ ಮರೆಯಲ್ಲಿ ನಿಂತು ಶ್ರಮಿಸಿದವರ ನಿಸ್ವಾರ್ಥ ಸೇವೆಗೂ ಸಹಾ ಸೂಕ್ತ ಮನ್ನಣೆ ಸದಾ ದೊರಕಬೇಕು. ಆ ಕೃತಜ್ಞತಾ ಭಾವ ಸದಾ ನಮ್ಮಲ್ಲಿರಬೇಕಲ್ಲವೇ?

# 27. ಹೇಳುವ ಮುನ್ನ ಚೆನ್ನಾಗಿ ಕೇಳಿಸಿಕೊಳ್ಳಿ

ಪರಿಣಾಮಕಾರೀ ಸಂವಹನದ ಕುರಿತು ತರಬೇತಿ ನೀಡುವಾಗ ಸಾಮಾನ್ಯವಾಗಿ ನಾನೊಂದು ಆಟವಾಡಿಸುತ್ತೇನೆ. ಹತ್ತು ಜನರನ್ನು ವೇದಿಕೆಯ ಮೇಲೆ ಕರೆದು ಸ್ವಲ್ಪ ದೂರ ದೂರದಲ್ಲಿ ಸಾಲಾಗಿ ನಿಲ್ಲಿಸಿ, ಮೊದಲ ವ್ಯಕ್ತಿಯ ಕಿವಿಯಲ್ಲಿ ಒಂದು ವಾಕ್ಯವನ್ನು ಹೇಳಲಾಗುತ್ತದೆ. ಉದಾಹರಣೆಗೆ 'ನಾನು ಇಂದು ಮನೆಯಿಂದ, ಸಿದ್ಧನಾಗಿ ಆಟೋದಲ್ಲಿ ಆಫೀಸಿಗೆ ಹೋದೆ' ಎಂಬುದು ಆ ವಾಕ್ಯ ಎಂದಿಟ್ಟುಕೊಳ್ಳಿ. ಇದನ್ನು ಮೊದಲನೇ ವ್ಯಕ್ತಿ ಎರಡನೆಯ ವ್ಯಕ್ತಿಯ ಕಿವಿಯಲ್ಲಿ ಉಸುರಬೇಕು. ಹೀಗೆ ಈ ಸಂವಹನ ಪಿಸು ಮಾತಿನಲ್ಲಿ ಕೊನೆಯ ವ್ಯಕ್ತಿಯನ್ನು ತಲುಪಬೇಕು. ಕೊನೆಯ ವ್ಯಕ್ತಿ ತಾನು ಕೇಳಿಸಿಕೊಂಡಿದ್ದನ್ನು ಗಟ್ಟಿಯಾಗಿ ಎಲ್ಲರಿಗೂ ಕೇಳುವಂತೆ ಹೇಳಬೇಕು. ಹೆಚ್ಚಿನ ಸಂದರ್ಭಗಳಲ್ಲಿ ಈ ಸರಳ ವಾಕ್ಯ ಕೊನೆಯ ವ್ಯಕ್ತಿಯನ್ನು ತಲುಪುವಾಗ ಸಂಪೂರ್ಣವಾಗಿ ವ್ಯತಿರಿಕ್ತ ಅರ್ಥವನ್ನೇ ಪಡೆದುಕೊಂಡಿರುತ್ತದೆ. ಮೇಲಿನ ಉದಾಹರಣೆಯ ವಾಕ್ಯ ಕೊನೆಯ ವ್ಯಕ್ತಿಯ ಬಾಯಲ್ಲಿ 'ನಾನು ಆಫೀಸಿನಿಂದ ಆಟೋದಲ್ಲಿ ಮನೆಗೆ ಹೊರಟೆ' ಎಂದು ತಿರುವು ಮುರುವಾಗಿ ಬಿಟ್ಟಿರುತ್ತದೆ!

ಏಕೆ ಹೀಗೆ? ಇದಕ್ಕೆ ಪ್ರಮುಖ ಕಾರಣ ನಮ್ಮೆಲ್ಲರಲ್ಲೂ ಕಂಡುಬರುವ ಪರಿಣಾಮಕಾರೀ ಸಂವಹನದ ಕೊರತೆಯ ಫಲ. ಪರಿಣಾಮಕಾರೀ ಸಂವಹನದಲ್ಲಿ ಹೇಳುವುದರಷ್ಟೇ ಮುಖ್ಯ, ಕೇಳಿಸಿಕೊಳ್ಳುವುದು. ಕೇಳಿಸಿಕೊಳ್ಳುವುದು ಪರಿಣಾಮಕಾರೀ ಸಂವಹನದ ಅತ್ಯಂತ ಪ್ರಮುಖ ಅಂಗ. ಇದಕ್ಕೆ ಪ್ರಕೃತಿ ನಮ್ಮ ದೇಹದಲ್ಲಿಯೇ ಒಂದು ಸೂತ್ರವನ್ನು ನೀಡಿದೆ. ನಮಗೆಲ್ಲರಿಗೂ ಇರುವುದು ಒಂದು ಬಾಯಿ ಹಾಗೂ ಎರಡು ಕಿವಿಗಳು. ಅಂದರೆ ನಾವು ಎಷ್ಟು ಮಾತಾಡುತ್ತೇವೆಯೋ, ಅದರ ಎರಡು ಪಟ್ಟು ಕೇಳಿಸಿಕೊಳ್ಳಬೇಕು ಎನ್ನುವುದು ಈ ಸೂತ್ರದ ಅರ್ಥ. ಆದರೆ ನಮ್ಮೆಲ್ಲರಿಗೂ ನಾವು ಹೇಳುವುದನ್ನು ಬೇರೆಯವರು ಕೇಳಿಸಿಕೊಳ್ಳಬೇಕೆಂಬ

ಕಾತರವಿರುತ್ತದೆ. ಆದರೆ ನಮಗೆ ಬೇರೆಯವರು ಹೇಳುವುದನ್ನು ಕೇಳಿಸಿಕೊಳ್ಳುವ ತಾಳ್ಮೆಯೇ ಇರುವುದಿಲ್ಲ! ತಾಳ್ಮೆಯಿಂದ ಇನ್ನೊಬ್ಬರ ಮಾತಿಗೆ ಸರಿಯಾಗಿ ಕಿವಿಗೊಟ್ಟಿದ್ದೇ ಆದರೆ ಬಹುಪಾಲು ಸಮಸ್ಯೆಗಳು ಉದ್ಭವಿಸುವುದೇ ಇಲ್ಲ. ಮನೆಯಾಗಿರಬಹುದು, ನಾವು ಕೆಲಸ ಮಾಡುವ ಕಚೇರಿಯಾಗಿರಬಹುದು, ಸಂಘ ಸಂಸ್ಥೆಗಳೇ ಇರಬಹುದು, ಎಲ್ಲ ಕಡೆಯಲ್ಲೂ ನಾವು ಇನ್ನೊಬ್ಬರ ಮಾತನ್ನು ಪರಿಣಾಮಕಾರಿಯಾಗಿ ಕೇಳಿಸಿಕೊಳ್ಳುವ ಸಂವಹನವನ್ನು ಅಗತ್ಯವಾಗಿ ರೂಢಿಸಿಕೊಳ್ಳಲೇಬೇಕು. ಇದರ ಜೊತೆಗೆ ಇನ್ನೊಬ್ಬರು ಹೇಳಿದ್ದನ್ನು ನಾವು ಹೇಗೆ ಅರ್ಥ ಮಾಡಿಕೊಳ್ಳುತ್ತೇವೆ ಎಂಬುದು ಸಹ ಅಷ್ಟೇ ಮುಖ್ಯ. ಸದಾ ಇನ್ನೊಬ್ಬರು ಆಡುವ ಮಾತುಗಳನ್ನು ಚಿತ್ತವಿಟ್ಟು ಆಲಿಸಿ, ಅರ್ಥೈಸಿಕೊಂಡ ನಂತರವೇ ಅದಕ್ಕೆ ಪ್ರತಿಕ್ರಿಯಿಸಬೇಕು. ಅರ್ಧಂಬರ್ಧ ಕೇಳಿಸಿಕೊಂಡರೆ ಅಥವಾ ಅದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದಿದ್ದರೆ, ಅದು ಅವಸರದ ಅಪಾಯಕಾರೀ ಪ್ರತಿಕ್ರಿಯೆಗೆ ಕಾರಣವಾಗಬಹುದು. ಬಹುಪಾಲು ಮಂದಿ ಪರಿಣಾಮಕಾರೀ ಸಂವಹನವೆಂದರೆ ನಾವು ಚೆನ್ನಾಗಿ ಹೇಳುವುದು ಮಾತ್ರ ಎಂದುಕೊಂಡಿದ್ದಾರೆ. ಚೆನ್ನಾಗಿ ಕೇಳಿಸಿಕೊಳ್ಳುವವರು ಇದ್ದಾಗ ಮಾತ್ರ ನಮ್ಮ ಸಂವಹನ ಅರ್ಥಪೂರ್ಣವಾಗಲು, ಪರಿಪೂರ್ಣವಾಗಲು ಸಾಧ್ಯ. ಆದ್ದರಿಂದ ಸರಿಯಾಗಿ ಕೇಳಿಸಿಕೊಳ್ಳುವ ಕಲೆಯನ್ನು ನಾವು ಸದಾ ಕರಗತ ಮಾಡಿಕೊಳ್ಳಬೇಕು.



# 28. ಸೋಲು ಕಲಿಸುವ ಜೀವನ ಪಾಠ




20 ಮಾರ್ಚ್ 2007.. ಭಾರತೀಯ ಕ್ರಿಕೆಟ್ಟಿನ ಕರಾಳ ದಿನವಾಗಿತ್ತು. ಅಂದು ತೆಂಡೂಲ್ಕರ್, ಗಂಗೂಲಿ, ಯುವರಾಜ್, ಸೆಹ್ವಾಗ್ ಮುಂತಾದ ದಿಗ್ಗಜ ಆಟಗಾರರಿದ್ದರೂ ಹೀನಾಯವಾಗಿ ಸೋತ ಭಾರತ ತಂಡದ ನಾಯಕರಾಗಿದ್ದ ರಾಹುಲ್ ದ್ರಾವಿಡ್ ತಲೆತಗ್ಗಿಸಿ ನಿಲ್ಲುವಂತಾಗಿತ್ತು.. ಕೆರೆಬಿಯನ್ ದ್ವೀಪಗಳಲ್ಲಿ ಆಯೋಜಿತವಾಗಿದ್ದ ಒಂದುದಿನದ ಅಂತರಾಷ್ಟ್ರೀಯ ಕ್ರಿಕೆಟ್ ವಿಶ್ವಕಪ್ ಸ್ಪರ್ಧೆಯಲ್ಲಿ ಭಾರತ ಗುಂಪು ಹಂತದಿಂದಲೇ ಹೊರಬಿದ್ದಿತ್ತು. ತಾನು ಸದಾ ಸೋಲಿಸುತ್ತಿದ್ದ ಬಾಂಗ್ಲಾ, ಶ್ರೀಲಂಕಾ ತಂಡಗಳೆದುರು ಸಹಾ ಹೀನಾಯವಾಗಿ ಸೋತು, ಸೂಪರ್ ಎಂಟರ ಹಂತವನ್ನೂ ತಲುಪಲಾಗದ ಭಾರತ ತಂಡ ಹಾಗೂ ಅದರ ನಾಯಕ ರಾಹುಲ್ ದ್ರಾವಿಡ್ ಸಹಜವಾಗಿಯೇ ಅತ್ಯಂತ ಕಠೋರ ಟೀಕೆಯನ್ನು ಎದುರಿಸಬೇಕಾಯಿತು. ಕ್ರಿಕೆಟ್ಟನ್ನು ಒಂದು ಧರ್ಮದಂತೆ ಆರಾಧಿಸುವ ನಮ್ಮ ದೇಶದ ಜನ ಗೆದ್ದಾಗ ಹೊಗಳಿ ಅಟ್ಟಕ್ಕೇರಿಸುತ್ತಾರೆ. ಹಾಗೆಯೇ ತಮ್ಮ ದೇಶದ ತಂಡ ಸೋತಾಗ, ಆಟಗಾರರ ಅತ್ಯಂತ ಕೀಳುಮಟ್ಟದ ವೈಯಕ್ತಿಕ ಟೀಕೆಗೂ ಇಳಿಯುತ್ತಾರೆ. ಈ ಸೋಲಿನ ನಂತರ ದ್ರಾವಿಡ್, ನಿಯಮಿತ ಓವರ್ ಗಳ ಕ್ರಿಕೆಟ್ಟಿನಿಂದಲೇ ನಿವೃತ್ತರಾದರು.

29 ಜುಲೈ 2024.. ಅದೇ ಕೆರೆಬಿಯನ್ ದ್ವೀಪ ಸಮೂಹ ವೆಸ್ಟ್ ಇಂಡೀಸ್ ನ ಬಾರ್ಬೋಡಾಸಿನಲ್ಲಿ ಭಾರತ ಟಿ20 ವಿಶ್ವಕಪ್ ಫೈನಲ್ ಪಂದ್ಯದಲ್ಲಿ ಸೌತ್

ಆಫ್ರಿಕಾದ ಮುಖಾಮುಖಿಯಾಗಿ ನಿಂತಿತ್ತು. ಅಂದು ನಾಯಕರಾಗಿ ತಾನು ಸಾಧಿಸಲಾಗದನ್ನು ಇಂದು ತಾನು ತರಬೇತುದಾರನಾಗಿರುವ ತಂಡ ಸಾಧಿಸುತ್ತದೆ ಎನ್ನುವ ಆಶಾಭಾವನೆಯ ನೋಟದೊಂದಿಗೆ ಕುಳಿತಿದ್ದರು, ದ್ರಾವಿಡ್. ಇದಕ್ಕೂ ಮುಂಚೆ ಹಲವಾರು ಬಾರಿ ಐಸಿಸಿ ಟೂರ್ನಮೆಂಟ್ ಗಳಲ್ಲಿ ಫೈನಲ್ಲಿನವರೆಗೂ ತಲುಪಿದ್ದ ಭಾರತ ಅಂತಿಮ ಗೆರೆ ದಾಟಲಾರದ ಅಳುಕು ಸಹಜವಾಗಿಯೇ ದ್ರಾವಿಡ್ ಅವರಲ್ಲಿತ್ತು. ಅತ್ಯಂತ ರೋಚಕವಾಗಿ ಸಾಗಿದ ಪಂದ್ಯ ಕೊನೆಯ ಓವರಿನಲ್ಲಿ ಫಲಿತಾಂಶ ಕಂಡಿತು. ತಮ್ಮ ಕೊನೆಯ ಟಿ20 ಪಂದ್ಯ ಆಡುತ್ತಿರುವ ರೋಹಿತ್ ರವರ ವಿಶೇಷ ನಾಯಕತ್ವದಿಂದ, ಕೊಹ್ಲಿಯ ತಾಳ್ಮೆಯ ಬ್ಯಾಟಿಂಗಿನಿಂದ, ಡೆತ್ ಓವರ್ ಗಳಲ್ಲಿ ಭುಮ್ರಾ, ಅರ್ಷದೀಪ್, ಪಾಂಡ್ಯ ಮುಂತಾದ ಹೊಸ ಹುಡುಗರ ಚೇತೋಹಾರಿ ಬೌಲಿಂಗಿನಿಂದ, SKY ಎಂದೇ ಖ್ಯಾತರಾಗಿರುವ ಸೂರ್ಯಕುಮಾರ್ ಯಾದವ್ ಬೌಂಡರಿ ಲೈನಿನಲ್ಲಿ ಆಕಾಶ ಮುಟ್ಟುವಂತೆ ಹಾರಿ ಹಿಡಿದ ಅದ್ಭುತ ಕ್ಯಾಚಿನಿಂದ, ಭಾರತ ಅತ್ಯಂತ ರೋಮಾಂಚನಕಾರಿಯಾಗಿ ಗೆಲುವು ಸಾಧಿಸಿತು ಹಾಗೂ 13 ವರ್ಷಗಳ ನಂತರ ವಿಶ್ವಕಪ್ಪನ್ನು ಕೈಯಲ್ಲಿ ಹಿಡಿದು ಬೀಗಿತು. ಕೋಚ್ ಆಗಿ ತನ್ನ ಕಟ್ಟಕಡೆಯ ಪಂದ್ಯದಲ್ಲಿ ತಂಡವನ್ನು ಗೆಲ್ಲಿಸಿಕೊಟ್ಟ ಅದಮ್ಯ ತೃಪ್ತಿ ದ್ರಾವಿಡ್ ಅವರ ಮುಖದಲ್ಲಿತ್ತು. ಟ್ರೋಫಿ ಹಿಡಿದು ಅವರು ಮಕ್ಕಳಂತೆ ಸಂಭ್ರಮಿಸಿದ ರೀತಿಯಂತೂ ಅತ್ಯಂತ ವಿಶಿಷ್ಟವಾಗಿತ್ತು.

ಇಲ್ಲಿ ಕಲಿಯಬೇಕಾದ ಜೀವನದ ಅತಿ ದೊಡ್ಡ ಪಾಠವಿದೆ. ಸೋಲು ಕಲಿಸಿದಷ್ಟು ಪಾಠವನ್ನು ಗೆಲುವು ಕಲಿಸುವುದಿಲ್ಲ. ಒಂದು ಹಂತದಲ್ಲಿ ನಾವು ಸೋತಿರಬಹುದು ಆದರೆ ಬೇರೆ ಸ್ವರೂಪದಲ್ಲಿ ಗೆಲುವನ್ನು ಮತ್ತೆ ಕಾಣಬಹುದು. ಸೋಲು ನಮ್ಮನ್ನು ವಿನಯಶೀಲರನ್ನಾಗಿಸುತ್ತದೆ, ಎಲ್ಲಿ ಎಡವಿದ್ದೇವೆ ಎನ್ನುವುದರ ಆತ್ಮಾವಲೋಕನಕ್ಕೆ ಎಡೆ ಮಾಡಿಕೊಡುತ್ತದೆ. ಹೆಚ್ಚಿನ ಪರಿಶ್ರಮಕ್ಕೆ ನಮ್ಮನ್ನು ನಾವು ಒಡ್ಡಿಕೊಳ್ಳುವಂತೆ ಮಾಡುತ್ತದೆ. ಅದೇ ಗೆಲುವು ಸೃಷ್ಟಿಸುವ ಅಹಂಕಾರ, ಮತ್ತೆ ನಮ್ಮನ್ನು ಸೋಲಿನೆಡೆಗೆ ತಳ್ಳುವ ಎಲ್ಲ ಸಾಧ್ಯತೆ ಇರುತ್ತದೆ. ನಾಯಕನಾಗಿ ತಾನು ಸಾಧಿಸಲಾಗದನ್ನು 17 ವರ್ಷಗಳ ನಂತರ ತರಬೇತುದಾರನಾಗಿ ಸಾಧಿಸಿದ ರಾಹುಲ್ ದ್ರಾವಿಡ್ ನಮ್ಮೆಲ್ಲರಿಗೂ ವಿಶೇಷ ಸ್ಫೂರ್ತಿಯ ಮಾದರಿಯಾಗುತ್ತಾರೆ, ನಿರಂತರವಾದ ಪರಿಶ್ರಮವಿದ್ದರೆ ಸಾಧನೆಗೆ ವಯಸ್ಸು ಮಿತಿಯಲ್ಲ ಎಂಬುದನ್ನು ಸಾರಿ ಹೇಳುತ್ತಾರೆ..

# 29. ಸಾವನ್ನೂ ಸಹಾ ಸಕಾರಾತ್ಮಕವಾಗಿ ಸ್ವೀಕರಿಸಲು ಸಾಧ್ಯ



ಮಾನವನ ಬದುಕಿನಲ್ಲಿ ಹುಟ್ಟಿನಷ್ಟೇ ಸಹಜವಾದದ್ದು ಸಾವು. ಹುಟ್ಟು ಆಕಸ್ಮಿಕ. ಆದರೆ ಸಾವೆಂಬುದು ಪ್ರತಿಯೊಬ್ಬರಿಗೂ ಖಚಿತ. ಅದು ಯಾವಾಗ ಬರುವುದೆಂಬುದು ಮಾತ್ರಾ ಯಾರಿಗೂ ತಿಳಿಯದ ರಹಸ್ಯ. ಬದುಕಿನಲ್ಲಿ ನಾಳೆ ಎಂಬುದಿದೆ ಎಂಬ ಭರವಸೆಯೇ ಪ್ರತಿಯೊಬ್ಬರ ಇಂದಿನ ಬದುಕನ್ನು ಸುಖದಿಂದ ಸಾಗಿಸುವ ಆಶಾಕಿರಣ. ಸಾವೆಂಬುದು ಪ್ರತಿಯೊಬ್ಬರ ಬದುಕಿನ ಅನಿವಾರ್ಯವೆಂಬ ಸತ್ಯದ ಅರಿವಿದ್ದರೂ, ಇಷ್ಟೇ ದಿನಗಳಲ್ಲಿ ಮರಣ ಸಂಭವಿಸುತ್ತದೆ ಎಂಬುದು ಯಾರಿಗಾದರೂ ಮೊದಲೇ ತಿಳಿದರೆ ಅವರ ಪ್ರತಿಕ್ರಿಯೆ ಹೇಗಿರಲು ಸಾಧ್ಯ? ಇಂತಹ ಸಂದರ್ಭದಲ್ಲಿಯೂ ವ್ಯಕ್ತಿ ಧನಾತ್ಮಕವಾಗಿ ಯೋಚಿಸಲು ಸಾಧ್ಯವಿದೆಯೇ? ಇದೆ ಎಂದು ಜಗತ್ತಿಗೆ ತೋರಿಸಿದ ವ್ಯಕ್ತಿಯೇ ರಾಂಡಾಲ್ಫ್ ಫ್ರೆಡ್ರಿಕ್ ಪಾಶ್. 1960ರಲ್ಲಿ ಅಮೆರಿಕಾದ ಬಾಲ್ಟಿಮೋರ್ ನಲ್ಲಿ ಜನಿಸಿದ ಪಾಶ್ ಒಬ್ಬ ಕಂಪ್ಯೂಟರ್ ವಿಜ್ಞಾನಿ ಹಾಗೂ ಯಶಸ್ವಿ ಪ್ರಾಧ್ಯಾಪಕ. ಅಮೇರಿಕಾದ ಡಿಸ್ನಿಲ್ಯಾಂಡಿನಲ್ಲಿ ವರ್ಚುಯಲ್ ಇಂಜಿನಿಯರ್ ಆಗಿ ಕೂಡ ಕೆಲಸ ಮಾಡಿದ್ದ ರ್ಯಾಂಡೀ ಪಾಶ್, ತನ್ನ ಚಿಕ್ಕ ವಯಸ್ಸಿನಲ್ಲಿಯೇ ಪರಿಶ್ರಮ ಹಾಗೂ ಬುದ್ಧಿವಂತಿಕೆಯಿಂದ ಸಿರಿವಂತರಾಗಿದ್ದರು. ಒಳ್ಳೆಯ ಕುಟುಂಬ, ಚಂದದ ಮನೆ

ಮಡದಿ ಮಕ್ಕಳು..ಹೀಗೆ ಬದುಕಿನಲ್ಲಿ ನೆಮ್ಮದಿಯಾಗಿರಲು ಅಗತ್ಯವಿರುವ ಅಂಶಗಳೆಲ್ಲ ಪಾಶ್ ಅವರ ಬದುಕಿನಲ್ಲಿತ್ತು. ಆದರೆ 2008ರಲ್ಲಿ ಅಂದರೆ ಕೇವಲ 48ನೇ ವಯಸ್ಸಿನಲ್ಲಿ ಪಾಶ್ ಅವರು ಅನಿರೀಕ್ಷಿತವಾಗಿ ಟರ್ಮಿನಲ್ ಪ್ಯಾಂಕ್ರಿಯಾಟಿಕ್ ಕ್ಯಾನ್ಸರಿಗೆ ತುತ್ತಾಗುತ್ತಾರೆ. ವೈದ್ಯರು ನೀವಿನ್ನು ಮೂರು ತಿಂಗಳು ಬದುಕಿರುತ್ತೀರಿ ಎಂಬ ಕಠೋರ ಸತ್ಯವನ್ನು ಇವರಿಗೆ ಹೇಳುತ್ತಾರೆ. ಇಂತಹ ಸಂದರ್ಭದಲ್ಲಿ ಎಂತಹ ಧನಾತ್ಮಕ ವ್ಯಕ್ತಿಯಾದರೂ ಎದೆಗುಂದುವುದು ಸಹಜ. ಆರಂಭಿಕ ಆಘಾತದಿಂದ ಹೊರಬಂದ ಪಾಶ್, ಸಾವನ್ನೂ ಸಹ ಹೇಗೆ ಧನಾತ್ಮಕವಾಗಿ ನೋಡಬಹುದು ಎಂಬುದನ್ನು ಜಗತ್ತಿಗೆ ತೋರಿಸಿ ಮಾದರಿಯಾಗುತ್ತಾರೆ. ಈ ವಿಷಯ ತಿಳಿಸಿದ ವೈದ್ಯರು ಸಹ ಧನಾತ್ಮಕ ವ್ಯಕ್ತಿ ಎಂದು ಹೇಳುವ ಪಾಶ್ ಅವರ ಚಿಂತನಾ ವಿಧಾನವೇ ಅತ್ಯಂತ ವಿಶಿಷ್ಟವಾಗಿದೆ. “ನನ್ನ ಖಾಯಿಲೆಯನ್ನು ಗುರುತಿಸಿದ ವೈದ್ಯರು ಸಹಾ ಅತ್ಯಂತ ಧನಾತ್ಮಕ ವ್ಯಕ್ತಿ. ಅವರು ಮೂರು ತಿಂಗಳಲ್ಲಿ ನೀನು ಸಾಯುತ್ತಿ ಎಂದು ಹೇಳಲಿಲ್ಲ ಬದಲಿಗೆ ಮೂರು ತಿಂಗಳುಗಳ ಕಾಲ ನೀನು ಬದುಕಿರುತ್ತಿ ಎಂದರು. ಆಗ ನನಗೆ ಏನಾದರೂ ಮಾಡಲು ಇನ್ನೂ ಮೂರು ತಿಂಗಳು ಅವಕಾಶವಿದೆ ಎಂದೆನ್ನಿಸಿತು” ಎನ್ನುವ ಪಾಶ್ ಈ ಅವಧಿಯಲ್ಲಿ ತಾನು ಕಲಿತಿದ್ದ ಅಮೆರಿಕಾದ ಕಾರ್ನೆಗಿ ಮೆಲ್ಲನ್ ಯುನಿವರ್ಸಿಟಿಯಲ್ಲಿ **“Really achieving your childhood dreams”** ಎನ್ನುವ ವಿಷಯದ ಕುರಿತು ಒಂದು ವಿಶೇಷ ಉಪನ್ಯಾಸವನ್ನು ನೀಡುತ್ತಾರೆ. ಇದು **‘ದಿ ಲಾಸ್ಟ್ ಲೆಕ್ಚರ್’** ಎಂಬ ಹೆಸರಿನಲ್ಲಿ ಅತ್ಯಂತ ಜನಪ್ರಿಯವಾಗುತ್ತದೆ. ಈ ಉಪನ್ಯಾಸದ ವಿಡಿಯೋ ಯೂಟ್ಯೂಬ್ ನಲ್ಲಿ ಅತ್ಯಂತ ಹೆಚ್ಚು ವೀಕ್ಷಿಸಲ್ಪಟ್ಟ ವಿಡಿಯೋ ಎಂಬ ಹೆಗ್ಗಳಿಕೆಗೆ ಪಾತ್ರವಾಗುತ್ತದೆ. ನೊಂದವರಿಗೆ, ಕುಗ್ಗಿ ಹೋದವರಿಗೆ ಇದು ಸಕಾರಾತ್ಮಕತೆಯ ಸೆಲೆಯುಕ್ಕುವಂತೆ ಮಾಡುತ್ತದೆ. ಈ ಉಪನ್ಯಾಸದ ಪುಸ್ತಕ ಅವತರಿಣಿಕೆ, ಪ್ರಪಂಚದ ಎಲ್ಲ ಪ್ರಮುಖ ಭಾಷೆಗಳಲ್ಲೂ ಮುದ್ರಿತವಾಗಿ ಅತ್ಯಂತ ಜನಪ್ರಿಯವಾಗುತ್ತದೆ.

ಈ ಉಪನ್ಯಾಸದಲ್ಲಿ, ಬದುಕಿನಲ್ಲಿ ಪ್ರತಿಯೊಂದು ಸನ್ನಿವೇಶವನ್ನೂ ನಾವು ಹೇಗೆ ಧನಾತ್ಮಕವಾಗಿ ನೋಡಬಹುದು ಎಂಬುದರ ಅದ್ಭುತ ಚಿತ್ರಣ ನೀಡುವ ಪಾಶ್, ಈ ರೀತಿಯ ಆಲೋಚನೆ ಇದ್ದರೆ ಯಾವುದೇ ಕ್ಷಣದಲ್ಲಿ ಸಾವು ಎದುರಾದರೂ ನಾವದನ್ನು ಸಕಾರಾತ್ಮಕವಾಗಿ ಸ್ವೀಕರಿಸಲು ಸಾಧ್ಯ ಎನ್ನುವುದನ್ನು ಮನವರಿಕೆ ಮಾಡಿಕೊಡುತ್ತಾರೆ. ಬದುಕಿನ ಪ್ರತಿಯೊಂದು ಕ್ಷಣವನ್ನು

ಖುಷಿಯಿಂದ ಅನುಭವಿಸುವುದೇ ಇದಕ್ಕಿರುವ ಏಕೈಕ ದಾರಿ ಎಂದು ಹೇಳುವ ಪಾಶ್, ಅವರು ಇದಕ್ಕೆ ಕೊಡುವ ಹತ್ತು ಹಲವಾರು ಉದಾಹರಣೆಗಳಲ್ಲಿ ಒಂದು ಉದಾಹರಣೆ ಇಲ್ಲಿ ಉಲ್ಲೇಖಾರ್ಹ. ಡಿಸ್ನಿಲ್ಯಾಂಡಿನಲ್ಲಿ ಕೆಲಸ ಮಾಡಿದ್ದ ಪಾಶ್ ಅಲ್ಲಿನ ಗೇಟ್ ಕೀಪರ್ ಗಳ ಉದಾಹರಣೆಯನ್ನು ನೀಡುತ್ತಾ "ಡಿಸ್ನಿಲ್ಯಾಂಡಿನ ಗೇಟ್ ಕೀಪರ್ ಬಳಿ ಇಲ್ಲಿನ ಗೇಟ್ ಗಳು ಎಷ್ಟು ಹೊತ್ತಿಗೆ "ಮುಚ್ಚುತ್ತವೆ" ಎಂದು ಕೇಳಿ ನೋಡಿ, ಆಗವರು ಇವು ಸಂಜೆ ಎಂಟು ಗಂಟೆಯವರೆಗೂ "ತೆರೆದಿರುತ್ತವೆ" ಎಂದು ಉತ್ತರಿಸುತ್ತಾರೆ. ಮುಚ್ಚುವುದು ಹಾಗೂ ತೆರೆದಿರುವುದು ಇಲ್ಲಿ ಒಂದೇ ಅರ್ಥವನ್ನು ನೀಡುತ್ತವೆ ಆದರೆ ಅವುಗಳಲ್ಲಿನ ಸಕಾರಾತ್ಮಕತೆಯಲ್ಲಿ ಬಹುದೊಡ್ಡ ವ್ಯತ್ಯಾಸವಿದೆ. ನಮ್ಮ ಬದುಕನ್ನು ನಾವೂ ಹಾಗೆಯೇ ಕೊನೆಯವರೆಗೂ ತೆರೆದಿರುತ್ತದೆ ಎಂಬುದಾಗಿ ಯೋಚಿಸುತ್ತಾ ಬದುಕಬೇಕು" ಎನ್ನುತ್ತಾರೆ. ಎಷ್ಟು ವಿಶೇಷವಾಗಿದೆಯಲ್ಲವೇ ಈ ಚಿಂತನೆ? ಅಂದಹಾಗೆ ಪಾಶ್ ಅವರ ಈ ವಿಶೇಷ ಪುಸ್ತಕ **"ದಿ ಲಾಸ್ಟ್ ಲೆಕ್ಚರ್"** ಅನ್ನು ಕನ್ನಡದಲ್ಲೂ ಲಭ್ಯ. ಇಂಜಿನಿಯರ್ ಆದ ಉಮೇಶ್ ಎಸ್ ರವರು ಇದನ್ನು ಬಹಳ ಉತ್ತಮವಾಗಿ ಕನ್ನಡೀಕರಿಸಿದ್ದಾರೆ. ಸದಾ ಧನಾತ್ಮಕವಾಗಿ ಆಲೋಚಿಸಬೇಕು ಎನ್ನುವ ಎಲ್ಲರೂ ಖಂಡಿತವಾಗಿಯೂ ಓದಬೇಕಾದ ಪುಸ್ತಕ ಇದು.

# 30. ಬೆನ್ನ ಹಿಂದೆ ಬಿದ್ದಿದೆ, ಸ್ಪರ್ಧೆ ಎಂಬ ಹೆಬ್ಬುಲಿ

ರಾಮ ಹಾಗೂ ಶ್ಯಾಮ ಎಂಬ ಇಬ್ಬರು ಗೆಳೆಯರು ದಟ್ಟವಾದ ಕಾಡೊಂದಕ್ಕೆ ಚಾರಣ ಹೋಗಿದ್ದರು. ಆಗ ಅವರನ್ನು ಭಾರೀ ಗಾತ್ರದ ಹುಲಿಯೊಂದು ಅಟ್ಟಿಸಿಕೊಂಡು ಬಂದಿತು. ಇಬ್ಬರೂ ತಮ್ಮ ಜೀವ ಉಳಿಸಿಕೊಳ್ಳಲು ವೇಗವಾಗಿ ಓಡಲಾರಂಭಿಸಿದರು. ಸ್ವಲ್ಪ ದೂರ ಓಡಿದ ನಂತರ, ರಾಮ ಥಟ್ಟೆಂದು ನಿಂತ ಹಾಗೂ ತನ್ನ ಬೆನ್ನಿಗೆ ಸಿಕ್ಕಿಸಿಕೊಂಡಿದ್ದ ಬ್ಯಾಗಿನಿಂದ, ವೇಗವಾಗಿ ಓಡಲು ಬಳಸುವ ಬೂಟನ್ನು ತೆಗೆದು ಅದನ್ನು ಕಟ್ಟಿಕೊಳ್ಳಲಾರಂಭಿಸಿದ. ಇದನ್ನು ಕಂಡ ಶ್ಯಾಮನಿಗೆ ನಿಜಕ್ಕೂ ಅಚ್ಚರಿಯಾಯಿತು ಹಾಗೂ ಇವನಿಗೆಲ್ಲೋ ಖಂಡಿತಾ ತಲೆ ಕೆಟ್ಟಿರಬೇಕು ಎಂದೆನಿಸಿತು. ಆತ ರಾಮನನ್ನು 'ಅಲ್ಲಯ್ಯಾ ರಾಮ,ಈ ಬೂಟು ಹಾಕಿಕೊಂಡ ಮಾತ್ರಕ್ಕೆ ನೀನು ಹುಲಿಗಿಂತ ವೇಗವಾಗಿ ಓಡಬಲ್ಲೆಯಾ?' ಎಂದು ಪ್ರಶ್ನಿಸಿದ. ಆಗ ರಾಮ ಹೇಳಿದ, "ಇಲ್ಲ ಮಿತ್ರ, ಖಂಡಿತ ನಾನು ಹುಲಿಗಿಂತ ವೇಗವಾಗಿ ಓಡಲಾರೆ. ಆದರೆ ಈ ಬೂಟು ಹಾಕಿಕೊಂಡರೆ, ನಿನಗಿಂತ ಎರಡು ಹೆಜ್ಜೆ ವೇಗವಾಗಿ ಓಡಬಲ್ಲೆ. ಆಗ ಮೊದಲು ಸಿಕ್ಕುವ ನಿನ್ನನ್ನು ಹುಲಿ ಹಿಡಿದು ತಿನ್ನುತ್ತದೆ, ನಾನು ಬಚಾವಾಗುತ್ತೇನೆ" ಇಂದಿನ ಈ ತೀವ್ರವಾದ ಸ್ಪರ್ಧಾತ್ಮಕ ಜಗತ್ತಿನಲ್ಲಿ ಸ್ಪರ್ಧೆ ಎಂಬ ಹುಲಿ ಎಲ್ಲರ ಬೆನ್ನ ಹಿಂದೆ ಬಿದ್ದಿದೆ. ನಾವು ಎಷ್ಟರಮಟ್ಟಿಗೆ ಇನ್ನೊಬ್ಬರಿಗಿಂತ ವೇಗವಾಗಿ ಓಡಬಲ್ಲೆವು ಎಂಬುದೇ ಈ ಜಗತ್ತಿನಲ್ಲಿ ಉಳಿವಿನ ಮುಖ್ಯ ಅಗತ್ಯ. **Survival of the fittest** ಅಂದರೆ ಸಮರ್ಥರಿಗೆ ಮಾತ್ರ ಉಳಿವು ಎಂಬುದು ಡಾರ್ವಿನ್ನನ ವಿಕಾಸವಾದದ ನಿಯಮ. ಈ ಜಗತ್ತು ಸಹಾ ಅದೇ ಪ್ರಕಾರವಾಗಿ ವಿಕಾಸವಾಗುತ್ತಾ ಬಂದಿದೆ. ಹೀಗಾಗಿ ಇಂದಿನ ಈ ತೀವ್ರ ಸ್ಪರ್ಧಾತ್ಮಕ ಯುಗದಲ್ಲಿ ಬದುಕುಳಿಯಬೇಕಾದರೆ ನಮ್ಮಲ್ಲಿ ಬರೀ ವಿದ್ಯೆ, ಶಕ್ತಿಗಳಿದ್ದರೆ ಸಾಲದು, ಅವುಗಳನ್ನು ಸೂಕ್ತ ಸಮಯಕ್ಕೆ ಬಳಸುವ ಯುಕ್ತಿ ಹಾಗೂ ವಿಶೇಷ ಕೌಶಲಗಳೂ ಅತ್ಯಗತ್ಯ. ಇಲ್ಲಿ ರಾಮ ತನ್ನ ಕಾಲಿಗೆ ಕಟ್ಟಿಕೊಂಡ, ವೇಗವಾಗಿ ಓಡಲು ಬಳಸುವ ಬೂಟು, ನಾವು ಕಲಿತ ವಿದ್ಯೆಯ ಜೊತೆಗೆ

ಹೆಚ್ಚುವರಿಯಾಗಿ ಅಳವಡಿಸಿಕೊಳ್ಳಬೇಕಾದ ಕೌಶಲವನ್ನು ಪ್ರತಿನಿಧಿಸುತ್ತದೆ. ವಿದ್ಯೆಯೊಂದಿಗೆ ಅದಕ್ಕೆ ಪೂರಕವಾದ ಕೌಶಲವನ್ನು ರೂಢಿಸಿಕೊಂಡಾಗ ಮಾತ್ರ ನಾವು ಈ ಸ್ಪರ್ಧಾತ್ಮಕ ಜಗತ್ತಿನಲ್ಲಿ ಯಶಸ್ವಿಯಾಗಬಹುದು. ಕೌಶಲ ಎಂಬುದು ಅನುಭವ ಹಾಗೂ ಜ್ಞಾನದ ಮಿಶ್ರಣ. ಇದು ಪ್ರತಿಯೊಂದು ಕ್ಷೇತ್ರದಲ್ಲೂ ಯಶಸ್ಸಿನ ಮೂಲಭೂತ ಅಗತ್ಯ. ಇದನ್ನು ವೃದ್ಧಿಪಡಿಸಿಕೊಂಡಾಗ ಮಾತ್ರ ನಾವು ಯಾವುದೇ ಕೆಲಸವನ್ನಾಗಲಿ ಪರಿಣಾಮಕಾರಿಯಾಗಿ ಮಾಡಲು ಸಾಧ್ಯ. ಹಾಗೆಯೇ ಸಮಯಕ್ಕೆ ತಕ್ಕಂತೆ ಬದಲಾಗುವ, ಮನೋಧರ್ಮದಿಂದ ನಮ್ಮನ್ನು ನಾವು ಸದಾ update ಮಾಡಿಕೊಳ್ಳಬೇಕು. ಜಗತ್ತು ಎಷ್ಟೇ ಬದಲಾಗಲಿ, ನಾನು ಮಾತ್ರಾ ಹೀಗೇ ಇರುತ್ತೇನೆ ಎಂದು ಕೈಕಟ್ಟಿ ಕುಳಿತರೆ ಖಂಡಿತವಾಗಿಯೂ ಬೆನ್ನ ಹಿಂದೆ ಬಿದ್ದಿರುವ ಸ್ಪರ್ಧೆ ಎಂಬ ಹುಲಿ ನಮ್ಮನ್ನು ಇಲ್ಲವಾಗಿಸಿ ಬಿಡುತ್ತದೆ.



# 31. ಜ್ಞಾನದ ಸರಿಯಾದ ಬಳಕೆ




ಇದೊಂದು ಪಂಚತಂತ್ರದ ಕಥೆ. ಒಂದೂರಿನಲ್ಲಿ ನಾಲ್ವರು ಸ್ನೇಹಿತರಿದ್ದರು. ಅದರಲ್ಲಿ ಮೂವರು ಸ್ನೇಹಿತರು ಅರವತ್ನಾಲ್ಕು ವಿದ್ಯೆಗಳನ್ನೂ ಅರೆದು ಕುಡಿದ ಮಹಾಪಂಡಿತರಾಗಿದ್ದರು. ನಾಲ್ಕನೆಯವ ಮಾತ್ರ ಈ ಮೂವರಷ್ಟು ವಿದ್ಯಾವಂತನಿರಲಿಲ್ಲ. ಆದರೆ ಅವನಲ್ಲಿ ಸಮಯ ಪ್ರಜ್ಞೆ, ಸಾಮಾನ್ಯ ತಿಳುವಳಿಕೆ ಈ ಬುದ್ಧಿವಂತರಿಗಿಂತ ಜಾಸ್ತಿ ಇತ್ತು. ಈ ಸ್ನೇಹಿತರು ದೂರದ ದೇಶಕ್ಕೆ ಹೋಗಿ ತಾವು ಕಲಿತ ವಿದ್ಯೆಯಿಂದ ತಮ್ಮ ಭವಿಷ್ಯ ರೂಪಿಸಿಕೊಳ್ಳಬೇಕೆಂಬ ತೀರ್ಮಾನಕ್ಕೆ ಬಂದರು. ಹಾಗೆ ಹೋಗುವಾಗ ಮೂವರು ಮಿತ್ರರು, ನಾಲ್ಕನೆಯವ ತಮ್ಮಷ್ಟು ಬುದ್ಧಿವಂತನಿರದ ಕಾರಣ, ಅವನನ್ನು ತಮ್ಮ ಜೊತೆಯಲ್ಲಿ ಕರೆದೊಯ್ಯಲು ಇಷ್ಟಪಡಲಿಲ್ಲ. ಆದರೆ ಕೊನೆಗೆ ಆತ ತಮ್ಮ ಬಾಲ್ಯ ಸ್ನೇಹಿತನಾಗಿದ್ದರಿಂದ ಅವನೂ ಬರಲಿ ಎಂದು ತಮ್ಮೊಂದಿಗೆ ಕರೆದುಕೊಂಡು ದೂರದ ದೇಶಕ್ಕೆ ಹೊರಟರು. ಹಾಗೆ ಹೋಗುವಾಗ ಅವರು ದಟ್ಟವಾದ ಕಾಡೊಂದನ್ನು ದಾಟಿ ಹೋಗಬೇಕಾಗಿತ್ತು. ಆ ಕಾಡಹಾದಿಯಲ್ಲಿ ಅವರಿಗೆ ಒಂದು ಬೃಹತ್ ಪ್ರಾಣಿಯ ಮೂಳೆಗಳು ಗೋಚರಿಸಿದವು. ಮೂವರು ಸ್ನೇಹಿತರು ತಮ್ಮ ಬುದ್ಧಿಶಕ್ತಿ ಹಾಗೂ ಮಂತ್ರಶಕ್ತಿಯ ಬಲವನ್ನು ಇಲ್ಲಿಯೇ ಪರೀಕ್ಷಿಸೋಣ ಇದಕ್ಕೊಂದು ಸರಿಯಾದ ಅವಕಾಶ ಸಿಕ್ಕಿದೆ, ಈ ಪ್ರಾಣಿಯ ಮೂಳೆಗಳನ್ನು ಸರಿಯಾಗಿ ಜೋಡಿಸಿ, ಇದಕ್ಕೆ ತಮ್ಮ ಮಂತ್ರಶಕ್ತಿಯಿಂದ ಮರುಜೀವ ಕೊಡೋಣ ಎಂದು ನಿರ್ಧರಿಸಿದರು. ಆಗ

ನಾಲ್ಕನೇ ಸ್ನೇಹಿತ, “ಮಿತ್ರರೇ, ಖಂಡಿತಾ ಬೇಡ, ಆ ರೀತಿ ಮಾಡುವ ಮುನ್ನ ಸ್ವಲ್ಪ ಯೋಚಿಸಿ” ಎಂದು ಸಲಹೆ ನೀಡಿದ. “ದಡ್ಡ ನಿನಗೆ ಈ ವಿದ್ಯೆ ಗೊತ್ತಿಲ್ಲವೆಂದು ಅಸೂಯೆ ಪಡಬೇಡ, ಸುಮ್ಮನಿರು” ಎಂದು ಅವನನ್ನು ಮೂದಲಿಸಿ ಬೈದು ಸುಮ್ಮನಾಗಿಸಿದ ಮೂವರು ಸ್ನೇಹಿತರು, ಆ ಪ್ರಾಣಿಯ ಮೂಳೆಗಳನ್ನು ಜೋಡಿಸಿ, ತಮ್ಮ ಮಂತ್ರ ತಂತ್ರದ ಬಲದಿಂದ ಅದಕ್ಕೆ ರಕ್ತ ಮಾಂಸ ತುಂಬಿಸಿದರು. ಅದಕ್ಕೆ ಅಂಗಾಂಗಗಳ ಮರುಜೋಡಣೆ ಮಾಡಿ, ಚರ್ಮವನ್ನೂ ತೊಡಿಸಿದರು. ನೋಡಿದರೆ ಅದೊಂದು ಬೃಹತ್ ಸಿಂಹವಾಗಿತ್ತು. ಇನ್ನೂ ನಿರ್ಜೀವವಾಗಿದ್ದ ಈ ಸಿಂಹಕ್ಕೆ ತಮ್ಮ ಮಂತ್ರಶಕ್ತಿಯಿಂದ ಜೀವ ತುಂಬುವುದೊಂದೇ ಬಾಕಿ ಉಳಿದಿತ್ತು. ಮೂವರು ಬುದ್ಧಿವಂತರು ಆ ಕೆಲಸಕ್ಕೂ ಮುಂದಾದಾಗ, ಸಾಮಾನ್ಯ ಪ್ರಜ್ಞೆಯುಳ್ಳ ನಾಲ್ಕನೇ ಸ್ನೇಹಿತ ಕೂಗಿ ಹೇಳಿದ ‘ದಯವಿಟ್ಟು ಅದಕ್ಕೆ ಜೀವ ತುಂಬಬೇಡಿ. ಅದರಿಂದ ನಮ್ಮ ಪ್ರಾಣಕ್ಕೇ ಅಪಾಯ ಬರಬಹುದು’. ಆದರೆ ಈ ಅತೀ ಬುದ್ಧಿವಂತರು ದಡ್ಡ ಸ್ನೇಹಿತನ ಮಾತನ್ನೆಲ್ಲಿ ಆಲಿಸಿಯಾರು? “ಸ್ವಲ್ಪ ಸುಮ್ಮನಿರಯ್ಯ, ನಮ್ಮ ಗುರುಗಳು ಹೇಳಿಕೊಟ್ಟಿರುವ ಪ್ರಾಣ ಪ್ರತಿಷ್ಠಾನದ ವಿದ್ಯೆಯನ್ನು ನಾವಿಲ್ಲಿ ಪರೀಕ್ಷಿಸಲೇಬೇಕು. ನಿನಗದು ಗೊತ್ತಿಲ್ಲವೆಂದು ನಮ್ಮನ್ನು ತಡೆಯಬೇಡ” ಎಂದವನನ್ನು ಗದರಿಸಿದರು.

ಈ ಮೂರ್ಖರ ಮಧ್ಯೆ ಇದ್ದರೆ ತನಗೆ ಅಪಾಯ ಕಟ್ಟಿಟ್ಟ ಬುತ್ತಿ ಎಂದರಿತ ನಾಲ್ಕನೇ ಸ್ನೇಹಿತ ಮಿಂಚಿನ ವೇಗದಲ್ಲಿ ಅಲ್ಲೇ ಹತ್ತಿರದಲ್ಲಿದ್ದ ಎತ್ತರದ ಮರವೊಂದನ್ನು ಏರಿ ಕುಳಿತ. ಈ ಮೂವರು ಬುದ್ಧಿವಂತ ಪಂಡಿತ ಮಿತ್ರರು, ತಮ್ಮ ವಿದ್ಯೆಯಿಂದ, ಮಂತ್ರೋಚ್ಚಾರಣೆ ಮಾಡಿ ಆ ನಿರ್ಜೀವ ಸಿಂಹಕ್ಕೆ ಜೀವ ತುಂಬಿಯೇ ಬಿಟ್ಟರು! ಜೀವಂತಗೊಂಡ ಭೀಕರ ಸಿಂಹ ತೀವ್ರವಾಗಿ ಹಸಿದಿತ್ತು. ತಕ್ಷಣವೇ ಈ ಮೂವರನ್ನು ಹರಿದು ತಿಂದು ಕಾಡಿನೊಳಗೆ ಪರಾರಿಯಾಯ್ತು. ವಿದ್ಯಾವಂತನಲ್ಲದಿದ್ದರೂ ತನ್ನ ಸಮಯಪ್ರಜ್ಞೆ ಹಾಗೂ ಸಾಮಾನ್ಯ ತಿಳುವಳಿಕೆಯಿಂದ ನಾಲ್ಕನೇ ಸ್ನೇಹಿತ ಜೀವ ಉಳಿಸಿಕೊಂಡ.

ನಮ್ಮಲ್ಲಿ ವಿದ್ಯೆ, ಬುದ್ದಿವಂತಿಕೆಗಳಿದ್ದರಷ್ಟೇ ಸಾಲದು, ಅದನ್ನು ಯಾವ ಸಂದರ್ಭದಲ್ಲಿ ಹೇಗೆ ಬಳಸಬೇಕೆಂಬ ಸಾಮಾನ್ಯ ಪರಿಜ್ಞಾನ ಕೂಡಾ ಅತ್ಯಗತ್ಯವಾಗಿ ನಮ್ಮಲ್ಲಿರಬೇಕು. ಜ್ಞಾನದಷ್ಟೇ ಮುಖ್ಯ ಅದರ ಸೂಕ್ತ ಹಾಗೂ ಸಂದರ್ಭೋಚಿತ ಬಳಕೆ ಎಂಬ ಅಂಶವನ್ನು ನಾವೆಂದಿಗೂ ಮರೆಯಬಾರದು.

# 32. ಸ್ತ್ರೀ ಸಮಾನತೆ ಎಂದರೆ...

ಈಕೆಯ ಹೆಸರು ಲಿಮ್ ಲೀ ಬೆಂಗ್. 'ಇದು ನನ್ನ ಚೈನೀಸ್ ಹೆಸರು. ನೀವು ನನ್ನ ಕ್ರಿಶ್ಚಿಯನ್ ಹೆಸರಾದ ಯಾನ್ನಾ ಎಂದು ಕರೀಬಹುದು' ಎಂದು ಹೊಳೆವ ಕಂಗಳಿಂದ ಹೇಳಿದ ಹಾಗೂ ಸದಾ ಚಟುವಟಿಕೆಯ ಚಿಲುಮೆಯಂತಿರುತ್ತಿದ್ದ ಈಕೆ ನಮ್ಮ ಸಿಂಗಾಪುರ್ ಪ್ರವಾಸದ ಟೂರಿಸ್ಟ್ ಗೈಡ್. ತನ್ನ ದೇಶಕ್ಕೆ 1965ರಲ್ಲಿ ಸ್ವಾತಂತ್ರ್ಯ ಸಿಕ್ಕಾಗಿನಿಂದ, ತನ್ನ ದೇಶದ ಅನನ್ಯ ಹಸಿರು ಕಾಳಜಿ, ಇದಕ್ಕೆ ಮೂಲ ಕಾರಣಕರ್ತರಾದ ದೇಶದ ಮೊದಲ ಪ್ರಧಾನಿ ಲಿನ್ ಕ್ಯೂನ್ ಅವರ ಕಾರ್ಯಕ್ಷಮತೆ ಮುಂತಾದರ ಬಗ್ಗೆ ತುಂಬು ಅಭಿಮಾನದಿಂದ 'ಮೈ ಕಂಟ್ರಿ', 'ಮೈ ಪ್ರೈಮ್ ಮಿನಿಸ್ಟರ್' ಎಂದು ಹೇಳಿಕೊಳ್ಳುತ್ತಿದ್ದ, ಈಕೆಯ ವಯಸ್ಸೆಷ್ಟೆಂದು ಕೇಳಿದಾಗ ನನಗೆ ನಿಜಕ್ಕೂ ಅಚ್ಚರಿ ಆಯ್ತು. ನಮ್ಮ ಚಟುವಟಿಕೆಗಳೆಲ್ಲಾ ಮುಗಿದೇಹೋಯಿತು ಎಂದು ನಾವು ತೀರ್ಮಾನಿಸಿ ಬಿಡುವ ನಿವೃತ್ತಿಯ ವಯಸ್ಸಾದ ೬೦ರ ಹರೆಯವನ್ನು ಈಕೆ ದಾಟಿದ್ದಾಳೆ ಎನ್ನುವುದು ನಿಜಕ್ಕೂ ನಂಬಲಸಾಧ್ಯವಾಗಿತ್ತು. ಬೆಳಗಿಂದ ಹಿಡಿದು ತಡರಾತ್ರಿವರೆಗೂ ನಮ್ಮ ಪ್ರವಾಸೀ ಗುಂಪಿನ ಜೊತೆಗಿದ್ದು, ಬೇರೆ ಬೇರೆ ವಿಶೇಷ ಸ್ಥಳಗಳಿಗೆ ನಮ್ಮನ್ನು ಕರೆದೊಯ್ದು, ಅಲ್ಲಿನ ವಿಶಿಷ್ಟತೆಗಳ ಕುರಿತು ವಿವರವಾದ ಮಾಹಿತಿಗಳನ್ನು ನಮಗೆ ನೀಡುತ್ತಿದ್ದ ಈಕೆ, ಸಿಂಗಾಪುರದ ಮುಖ್ಯ ಉದ್ಯೋಗಗಳಲ್ಲಿ ಒಂದಾದ ೬೦೦೦ಕ್ಕೂ ಹೆಚ್ಚಿರುವ ಟೂರಿಸ್ಟ್ ಗೈಡ್ ಗಳಲ್ಲಿ ಒಬ್ಬಳು. ವಿಶೇಷವೆಂದರೆ ಈ ಟೂರಿಸ್ಟ್ ಗೈಡ್ ಗಳಲ್ಲಿ ಶೇಕಡ 50ಕ್ಕೂ ಹೆಚ್ಚು ಮಹಿಳೆಯರೇ. ಯಾವುದೇ ಪ್ರವಾಸೀ ಬಸ್ಸಿನಲ್ಲಿ ನೋಡಿದರೂ ಕೈಯಲ್ಲಿ ಒಂದು ಮೈಕ್ ಹಿಡಿದು ವಿವರಣೆ ನೀಡುತ್ತಿರುವ ಮಹಿಳಾ ಟೂರಿಸ್ಟ್ ಗೈಡ್ ಗಳನ್ನು ನಾವಿಲ್ಲಿ ಕಾಣಬಹುದು. 'ಮಹಿಳೆಯರಿಗೆ ಈ ಕೆಲಸ ಕಷ್ಟಕರವಲ್ಲವೇ?' ಎಂದು ನಾನು ನಮ್ಮ ದೇಶವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಪ್ರಶ್ನಿಸಿದಾಗ ಆಕೆ ಕೊಟ್ಟ ಉತ್ತರ, ನನ್ನ ಕಣ್ತೆರೆಸುವಂತಿತ್ತು.. 'ನಮ್ಮ ದೇಶದಲ್ಲಿ ಹೆಣ್ಣು ಗಂಡು, ಜಾತಿ ಮತ ಧರ್ಮವೆಂಬ ಯಾವುದೇ ಭೇದಭಾವಗಳಿಲ್ಲ. ಇಲ್ಲಿನ ಏಕೈಕ ಮಾನದಂಡ ಪ್ರತಿಭೆ' ನಮ್ಮ ಪ್ರವಾಸಿ ಗುಂಪಿನ ಜೊತೆಗೆ ಬೆಳಗಿನಿಂದ ತಡರಾತ್ರಿಯವರೆಗಿದ್ದು, ಸಮಯಕ್ಕೆ ಸರಿಯಾಗಿ ಬೇರೆ ಬೇರೆ ಬಸ್ ಗಳನ್ನು ಬದಲಾಯಿಸುತ್ತಾ, ನಮಗೆ ಬೇಕಾದ ಊಟ

ತಿಂಡಿಯ ಹಾಗೂ ಪ್ರೇಕ್ಷಣೀಯ ಸ್ಥಳಗಳ ಟಿಕೆಟ್ ವ್ಯವಸ್ಥೆ ಮಾಡಿಸುತ್ತಾ, ಸದಾ ನಗುಮೊಗದೊಂದಿಗೆ ತನ್ನ ಕೆಲಸವನ್ನು ಖುಷಿಖುಷಿಯಾಗಿ ಮಾಡುತ್ತಾ, ಸಮರ್ಪಕವಾಗಿ ತಂಡವನ್ನು ಈಕೆ ಮುನ್ನಡೆಸುತ್ತಿದ್ದ ರೀತಿ ನನಗೆ ನಿಜಕ್ಕೂ ವಿಶೇಷವೆನಿಸಿತು.

ಯಾನ್ ಹೇಳಿದಂತೆ 'ಈ ದೇಶದಲ್ಲಿ ಮಧ್ಯರಾತ್ರಿಯಲ್ಲೂ ಒಂಟಿ ಹೆಣ್ಣು ಎಲ್ಲಿ ಬೇಕಾದರೂ ಸಂಚರಿಸಬಹುದು. ನಗರದ ರಸ್ತೆಗಳಲ್ಲಿ ಎಲ್ಲೂ ಪೊಲೀಸರಿಲ್ಲ. ಆದರೆ ಕಾಣದ ಕಣ್ಣುಗಳು ಎಲ್ಲವನ್ನೂ ವೀಕ್ಷಿಸುತ್ತಿರುತ್ತವೆ. ಮಹಿಳೆಯರ ಮೇಲಿನ ದೌರ್ಜನ್ಯಕ್ಕೆ ಇಲ್ಲಿನ ಕಾನೂನಿನಲ್ಲಿ ಅತ್ಯಂತ ಕಠಿಣ ಶಿಕ್ಷೆ ಇದೆ. ಹಾಗಾಗಿ ಎಲ್ಲಾ ಸಮಯ ಸಂದರ್ಭಗಳಲ್ಲೂ ಮಹಿಳೆ ಅತ್ಯಂತ ಸುರಕ್ಷಿತ ಹಾಗೂ ನಿಜವಾದ ಅರ್ಥದಲ್ಲಿ ಪುರುಷನಿಗೆ ಸಮಾನ. ಸ್ತ್ರೀಯರಿಗೆ ವಿಶೇಷ ಗೌರವ ನೀಡುವುದೇ ನಮ್ಮ ಸಂಸ್ಕೃತಿ ಎಂದು ಬಡಾಯಿ ಕೊಚ್ಚಿಕೊಳ್ಳುವ ನಮ್ಮ ದೇಶದಲ್ಲಿ ಏಕೆ ಇದು ಸಾಧ್ಯವಾಗಿಲ್ಲ? ದಿನ ಬೆಳಗಾದರೆ ಕೇಳಿಬರುವ ದೌರ್ಜನ್ಯಕ್ಕೊಳಗಾದ ಸಂತ್ರಸ್ತೆಯರ ಕೂಗೇಕೆ ನಮ್ಮ ಸಂಸ್ಕೃತಿಯೇ ಶ್ರೇಷ್ಠ ಎಂದು ಸದಾ ಹೇಳಿಕೊಂಡು ಓಡಾಡುವ ನಮ್ಮ ಸಮಾಜದ ಕಿವಿಗೇಕೆ ಬೀಳುತ್ತಿಲ್ಲ? ಯೋಚಿಸಬೇಕಾದ ವಿಚಾರವಲ್ಲವೇ?



# 33. ನಮ್ಮ ತಪ್ಪನ್ನು ನಾವೇ ನಿಖರವಾಗಿ ಗುರುತಿಸಿಕೊಳ್ಳೋಣ.




ಒಮ್ಮೆ ಒಬ್ಬ ವ್ಯಕ್ತಿ ಒಂದು ಹೊಸ ಸಮಸ್ಯೆಯೊಂದಿಗೆ ವೈದ್ಯರ ಬಳಿ ಹೋದ. ಅದೇನೆಂದರೆ ಅವನ ತೋರುಬೆರಳಿನಿಂದ ಅವನ ದೇಹದ ಯಾವುದೇ ಭಾಗವನ್ನು ಮುಟ್ಟಿದರೆ ವಿಪರೀತವಾದ ನೋವಾಗುತ್ತಿತ್ತು. ಇಂತಹ ವಿಚಿತ್ರ ಸಮಸ್ಯೆಯೊಂದಿಗೆ ಬಂದ ರೋಗಿಗೆ ವೈದ್ಯರು ಎಲ್ಲಾ ಬಗೆಯ ತಪಾಸಣೆ ಮಾಡಿದರು. ರಕ್ತ ಪರೀಕ್ಷೆ, ವಿವಿಧ ಬಗೆಯ ಎಕ್ಸ್ ರೇ, ಹಲವು ರೀತಿಯ ಸ್ಕ್ಯಾನಿಂಗ್ ಎಲ್ಲವೂ ಮುಗಿದವು. ಎಲ್ಲಿಯೂ ಸಮಸ್ಯೆ ಇಲ್ಲ. ವೈದ್ಯರು ಸಹ ಇದ್ಯಾವ ಹೊಸಬಗೆಯ ಕಾಯಿಲೆ ಎಂದು ಆಶ್ಚರ್ಯಗೊಂಡರು. ಕೊನೆಗೆ ದೇಹದ ಪ್ರತಿ ಭಾಗವನ್ನೂ ಪರೀಕ್ಷಿಸುತ್ತಾ ಹೋದರು. ಆಗ ಅವನ ತೋರು ಬೆರಳಿನಲ್ಲಿದ್ದ ಹುಣ್ಣೊಂದು ಅವರಿಗೆ ಗೋಚರಿಸಿತು! ಆಗ ಈ ವ್ಯಕ್ತಿಯ ಸಮಸ್ಯೆ ಏನು ಎನ್ನುವುದು ವೈದ್ಯರಿಗೆ ಸ್ಪಷ್ಟವಾಯಿತು. ಹುಣ್ಣಿರುವ ತೋರುಬೆರಳಿನಿಂದ ಆತ ದೇಹದ ಯಾವುದೇ ಭಾಗವನ್ನು ಮುಟ್ಟಿದರೂ ನೋವಾಗುತ್ತಿದೆ! ಅಂದರೆ ಸಮಸ್ಯೆ ಇರುವುದು ಅವನ ತೋರುಬೆರಳಿನಲ್ಲಿ ಮಾತ್ರ, ಇಡೀ ದೇಹದಲ್ಲಲ್ಲ!

ನಮ್ಮ ಬದುಕಿನಲ್ಲೂ ಅಷ್ಟೇ, ನಮ್ಮಲ್ಲಿರುವ ಕೊರತೆಯ ಬಗೆಗೆ ನಾವು ಗಮನಹರಿಸುವುದೇ ಇಲ್ಲ. ನಮ್ಮ ಸಮಸ್ಯೆಗೆ ಬೇರೆ ಯಾರೋ ಕಾರಣ ಎಂಬ ರೀತಿಯಲ್ಲಿಯೇ ಇರುತ್ತದೆ, ನಮ್ಮ ಚಿಂತನೆ! 'ಸದಾ ಬೇರೆಯವರ ತಪ್ಪನ್ನೇ ಗುರುತಿಸುವುದನ್ನು ರೂಢಿ ಮಾಡಿಕೊಂಡವರಿಗೆ ತಮ್ಮ ತಪ್ಪಿನ ಅರಿವೇ ಆಗದು' ಎನ್ನುತ್ತಾರೆ, ಮಹಾತ್ಮ ಗಾಂಧಿ.

ಯಾವಾಗಲೂ ಇನ್ನೊಬ್ಬರ ಸಣ್ಣ ತಪ್ಪು ಸಹ ನಮಗೆ ದೊಡ್ಡದಾಗಿ ಕಾಣಿಸುತ್ತದೆ. ಆದರೆ ನಮ್ಮಲ್ಲಿರುವ ದೊಡ್ಡ ದೋಷ, ನಮ್ಮ ಗಮನಕ್ಕೆ ಬರುವುದೇ ಇಲ್ಲ. ಅದರ ಕುರಿತು ಯಾರಾದರೂ ನಮ್ಮ ಗಮನ ಸೆಳೆದಿದ್ದೇ ಆದರೆ ಅವರ ಮೇಲೇ ವಿಪರೀತ ಕೋಪ ಬಂದುಬಿಡುತ್ತದೆ. 'ಬೈದು ಹೇಳುವವರು ಬದುಕಲಿಕ್ಕೆ ಹೇಳುತ್ತಾರೆ' ಎನ್ನುವ ಗಾದೆ ಮಾತಿದೆ. ಈ ರೀತಿಯ ದೂಷಣೆಯ ಮಾತುಗಳಿಗೂ ಧನಾತ್ಮಕವಾಗಿ ಕಿವಿಗೊಟ್ಟಾಗ ನಮ್ಮ ತಪ್ಪುಗಳ ಅರಿವು ನಮಗೇ ಆಗುತ್ತದೆ. ಬೇರೆಯವರಲ್ಲಿರುವ ಸರಿ ತಪ್ಪುಗಳನ್ನು ಗುರುತಿಸುವಂತೆಯೇ ನಮ್ಮಲ್ಲಿರುವ ಸರಿ ತಪ್ಪುಗಳತ್ತ ನಾವು ಬೆಳಕು ಬಿಟ್ಟುಕೊಂಡಾಗ ಮಾತ್ರ ಸುಧಾರಣೆ ಸಾಧ್ಯ. ಹೊಗಳಿಕೆಯ ಮಾತುಗಳು ಕಿವಿಗೇನೋ ಹಿತಕಾರಿ ಆದರೆ ನಮ್ಮ ಅಂತರಂಗದ ಬೆಳವಣಿಗೆಗೆ ಅಷ್ಟೇನೂ ಸಹಕಾರಿಯಲ್ಲ. ನನ್ನ ಅತ್ಯುತ್ತಮವಿನ್ನೂ ಬರಲಿಕ್ಕಿದೆ ಎಂಬ ಭಾವ ನಮ್ಮಲ್ಲಿ ಸದಾ ಇದ್ದಾಗ ನಾವು ಮಾಡುವ ಯಾವುದೇ ಕೆಲಸದಲ್ಲಿ ಆಗಿರಬಹುದಾದ ದೋಷ ನಮ್ಮ ಗಮನಕ್ಕೆ ಬಂದೇ ಬರುತ್ತದೆ. ಬದುಕೆಂಬುದು ದಿನನಿತ್ಯವೂ ನಾವು ಮಾಡುವ ತಪ್ಪುಗಳಿಂದ ಕಲಿಯಬಹುದಾದ ಹೊಸ ಪಾಠ.
**"ಎಡವದೆಯೇ ಮೈಗಾಯವಡೆಯದೆಯೆ ಮಗುವಾರು ನಡೆಯ ಕಲಿತವರು?**
**ತಡವರಿಸಿ ಮುಗ್ಗರಿಸಿ ಬಿದ್ದು ಮತ್ತೆದ್ದು ಮೈದಡವಿಕೊಳ್ಳುವವರೆಲ್ಲ -ಮಂಕುತಿಮ್ಮ"**
ಎನ್ನುತ್ತಾರೆ ಡಿ.ವಿ.ಜಿ.ಯವರು. ಹೇಗೆ ಮಗು ಚಿಕ್ಕದಿದ್ದಾಗ ಎದ್ದು ಬಿದ್ದು ಮೈಕೈ ಗಾಯ ಮಾಡಿಕೊಂಡು ನಡೆಯನ್ನು ಕಲಿಯುತ್ತದೆಯೋ ಹಾಗೆಯೇ ನಮ್ಮ ಬದುಕಿನಲ್ಲಿ ನಾವು ಸಹಾ ತಪ್ಪು ಮಾಡಿಯೇ ಪಾಠ ಕಲಿಯಬೇಕು. ಆದರೆ ಅತಿ ಮುಖ್ಯವಾಗಿ ಆ ತಪ್ಪು ಎಲ್ಲಿ ಆಗಿದೆ ಎಂದು ನಿಖರವಾಗಿ ಗುರುತಿಸುವ ಮತ್ತೆ ಅದನ್ನು ತಿದ್ದಿಕೊಳ್ಳುವ ಮನಸ್ಥಿತಿ ಸದಾ ನಮ್ಮಲ್ಲಿರಬೇಕು.



# 34. ಭಯ ಬಿಸಾಕಿ

ಒಂದೂರಲ್ಲಿ ದೆವ್ವ ಭೂತ ಪ್ರೇತ ಪಿಶಾಚಿ ಇತ್ಯಾದಿಗಳನ್ನು ನಂಬದ ಒಬ್ಬ ಧೈರ್ಯಶಾಲಿ ಇದ್ದ. ಅವನು ಈ ರೀತಿಯ ಮೂಢನಂಬಿಕೆಗಳಿಂದ ಭಯಪಡುತ್ತಿದ್ದ ಜನರ ಎದುರಿಗೆ ಒಂದು ಸವಾಲೆಸೆದ. "ನಾನು ನಮ್ಮೂರಿನ ಸ್ಮಶಾನಕ್ಕೆ ಅಮಾವಾಸ್ಯೆಯ ದಿನ, ಮಧ್ಯರಾತ್ರಿಯಲ್ಲಿ ಹೋಗಿ ಅಲ್ಲಿರುವ ಆಲದಮರಕ್ಕೆ ಒಂದು ಮೊಳೆ ಹೊಡೆಯುತ್ತೇನೆ" ಎಂಬುದೇ ಅವನೆಸೆದ ಸವಾಲು.

ಆ ದಿನ ಬಂತು. ನಮ್ಮ ಧೈರ್ಯಶಾಲಿ ವ್ಯಕ್ತಿ ಅಮಾವಾಸ್ಯೆಯ ಮಧ್ಯರಾತ್ರಿ ಸ್ಮಶಾನಕ್ಕೆ ಹೊರಟೇಬಿಟ್ಟ. ಧೈರ್ಯದಿಂದಲೇ ಆಲದಮರಕ್ಕೆ ಮೊಳೆಯನ್ನೂ ಹೊಡೆದ. ಆಮೇಲೆ ಆತ ಇನ್ನೇನು ವಾಪಸ್ಸು ಹೊರಡಬೇಕು ಆಗ ಅವನು ಉಟ್ಟಿದ್ದ ಪಂಚೆಯನ್ನು ಯಾರೋ ಬಲವಾಗಿ ಹಿಡಿದು ಎಳೆದಂತಾಯಿತು. ಈಗ ನಮ್ಮ ಧೈರ್ಯಶಾಲಿಯ ಎದೆಗುಂಡಿಗೆ ಧಸಕ್ಕೆಂದಿತು! ಆತ ಯಾವುದೋ ಭೂತ ತನ್ನನ್ನು ಹಿಡಿದೆಳೆಯುತ್ತಿದೆ ಎಂಬ ಭಯದಿಂದ ಹೃದಯಾಘಾತಕ್ಕೊಳಗಾಗಿ ಅಲ್ಲಿಯೇ ಸತ್ತು ಹೋದ! ಮರುದಿನ ಹೋಗಿನೋಡಿದರೆ ಈ ವ್ಯಕ್ತಿ ಮರಕ್ಕೆ ಮೊಳೆಯನ್ನು ಹೊಡೆಯುವ ಗಡಿಬಿಡಿಯಲ್ಲಿ ತಾನು ಉಟ್ಟಿದ್ದ ಪಂಚೆಯ ತುದಿಯನ್ನೂ ಸೇರಿಸಿ ಮೊಳೆ ಹೊಡೆದು ಬಿಟ್ಟಿದ್ದಾನೆ! ಹೀಗಾಗಿ ಅವನು ಹೊರಟಾಗ ಯಾರೋ ಅವನ ಪಂಚೆಯನ್ನು ಹಿಡಿದು ಎಳೆದಂತಾಗಿದೆ! ಪಂಚೆ ಹಿಡಿದೆಳೆದಂತೆ ಆ ವ್ಯಕ್ತಿಗಾದ ಅನುಭವೇನೋ ನಿಜ. ಆದರೆ ಅದು ಯಾವುದೇ ದೆವ್ವ ಭೂತದ ಕೆಲಸವಲ್ಲ ಬದಲಿಗೆ ಅವನೇ ಹೊಡೆದ ಮೊಳೆಯಿಂದಾದದ್ದು!

ಭಯ ಎಂದರೆ ಹೀಗೆಯೆ! ಇಂಗ್ಲಿಷಿನಲ್ಲಿ ಭಯಕ್ಕೆ ಬಳಸುವ **FEAR** ಎನ್ನುವ ಶಬ್ದವನ್ನು **'False Evidence Appearing as Real'** ಎಂಬುದಾಗಿ ವಿಸ್ತರಿಸಬಹುದು! ಎಷ್ಟೋ ಬಾರಿ ನಮ್ಮ ಧೈರ್ಯಸ್ಥ ವ್ಯಕ್ತಿಗೆ ಆದಂತೆ, ಅನುಭವಕ್ಕೆ ಬಂದಿದ್ದು ಸಹಾ ಸುಳ್ಳಾಗಿರಬಹುದು. ಅದನ್ನು ತಣ್ಣನೆಯ ಮನಸ್ಥಿತಿಯಿಂದ ವಿಮರ್ಶಿಸಿದಾಗ ಮಾತ್ರ ಅದು ಭಯವಾಗಿ ಪರಿವರ್ತನೆಗೊಳ್ಳುವುದಿಲ್ಲ.

ಕೆಲವೊಮ್ಮೆ ಕತ್ತಲಲ್ಲಿ ಹರಿದಾಡಿದ ಹಗ್ಗ, ಹಾವೆಂದು ಭಾಸವಾಗಿ ಭಯ ಮೂಡಿಸುವುದಿಲ್ಲವೇ? ನಮ್ಮ ವ್ಯಕ್ತಿತ್ವಕ್ಕೆ ಕಾಟ ಕೊಡುವ ವೈರಸ್ಸುಗಳಲ್ಲಿ 'F O F' ಅಂದರೆ **Fear Of Failure** ಕೂಡಾ ಒಂದು. ಯಾವುದೇ ಕೆಲಸವನ್ನು ಕೈಗೆತ್ತಿಕೊಳ್ಳುವ ಮೊದಲು ಅದರಲ್ಲಿ ನಾನು ಸೋತುಬಿಟ್ಟರೆ ಎನ್ನುವ ಭಯವೇ ನಮ್ಮನ್ನು ಆ ಕೆಲಸ ಮಾಡದಂತೆ ತಡೆ ಹಿಡಿದುಬಿಡುತ್ತದೆ. ಹೀಗಾಗಿ ಈ **'FEAR'** ಎನ್ನುವ ಶಬ್ದವನ್ನು ಧನಾತ್ಮಕವಾಗಿ ಹಾಗೂ ಋಣಾತ್ಮಕವಾಗಿ ಎರಡು ರೀತಿಯಲ್ಲೂ ವಿಸ್ತರಿಸಬಹುದು. ನಕಾರಾತ್ಮಕವಾಗಿ ಯೋಚಿಸಿದಾಗ **FEAR** ಎನ್ನುವುದು **'Forget Everything And Run'** ಎಂಬುದಾಗಿ ಗೋಚರಿಸುತ್ತದೆ ಹಾಗೂ ಧನಾತ್ಮಕವಾಗಿ ಚಿಂತಿಸಿದಾಗ **'Face Everything And Rise'** ಎಂಬುದಾಗಿ ಹೊಳೆದು, ಯಾವುದೇ ಸನ್ನಿವೇಶ ಎದುರಾಗಲಿ ಅದನ್ನು ಧೈರ್ಯವಾಗಿ ಎದುರಿಸಿ ನೋಡೋಣ ಎನ್ನುವ ಮನಸ್ಥಿತಿಯನ್ನು ನಮ್ಮಲ್ಲಿ ರೂಪಿಸುತ್ತದೆ.



# 35. ಸಂದರ್ಭಕ್ಕೆ ಅನುಗುಣವಾಗಿ ಸದಾ ಬದಲಾಗಿ



ಇದು ಟೋಪಿ ಮಾರುವವನು ಹಾಗೂ ಕೋತಿಗಳ ಕಥೆ. ಟೋಪಿ ಮಾರಾಟಗಾರನೊಬ್ಬ ಒಂದೂರಿನಿಂದ ಇನ್ನೊಂದೂರಿಗೆ ಟೋಪಿ ಮಾರಲು ತನ್ನ ಬುಟ್ಟಿಯೊಂದಿಗೆ ಹೊರಟಿದ್ದ. ಒಂದು ಮಾವಿನತೋಪಿನಲ್ಲಿ ಕುಳಿತು ಊಟ ಮಾಡಿದ. ಹಾಗೇ ಮರದ ನೆರಳಲ್ಲಿ ಮಲಗಿ ನಿದ್ರೆ ಹೋದ. ಎದ್ದು ನೋಡುತ್ತಾನೆ, ಅವನ ಬುಟ್ಟಿಯಲ್ಲಿ ಒಂದು ಟೋಪಿಯೂ ಇಲ್ಲ. ತಲೆ ಎತ್ತಿ ನೋಡಿದರೆ ಮರದ ಮೇಲೆ ಕೋತಿಗಳೆಲ್ಲ ಇವನ ಟೋಪಿಯನ್ನು ಹಾಕಿಕೊಂಡು ಕುಳಿತಿದ್ದಾವೆ! ತಾನು ಮಾರುವ ವಸ್ತುವನ್ನೇ ಎಗರಿಸಿರುವ ಈ ಕಪಿಗಳಿಂದ ಟೋಪಿಯನ್ನು ಮರಳಿ ಪಡೆಯಲು ಟೋಪಿ ಮಾರಾಟಗಾರ ಹರಸಾಹಸ ಮಾಡಿದ.

ಅವುಗಳನ್ನು ಗದರಿಸಿ ನೋಡಿದ, ಆದರೆ ಅವು ಈತನನ್ನೇ ತಿರುಗಿ ಗದರಿಸಿದವು! ಕಡ್ಲೆಬೀಜದ ಆಮಿಷ ಒಡ್ಡಿದ. ಕೋತಿಗಳು ಕಡ್ಲೆಬೀಜವನ್ನು ತಿಂದು ಖಾಲಿ ಮಾಡಿದವೇ ವಿನಃ ಇವನ ಟೋಪಿಯನ್ನು ಮರಳಿಸಲಿಲ್ಲ! ಕೊನೆಗೆ ಹತಾಶನಾದ ಟೋಪಿ ಮಾರುವವ ತನ್ನ ತಲೆಯಲ್ಲಿದ್ದ ಟೋಪಿಯನ್ನು ಬೇಜಾರಿನಿಂದ ಕೆಳಕ್ಕೆಸೆದ. ಇದನ್ನೇ ಅನುಕರಿಸಿದ ಕೋತಿಗಳು ತಮ್ಮ ತಲೆಯ

ಮೇಲಿನ ಟೋಪಿಯನ್ನು ಕೆಳಕ್ಕೆ ಹಾಕಿದವು. ಬೇಗಬೇಗನೆ ಅವುಗಳನ್ನು ಸಂಗ್ರಹಿಸಿಕೊಂಡು ಟೋಪಿ ಮಾರುವವ ಅಲ್ಲಿಂದ ಹೊರಟ.

ಇದು ಕಥೆಯ ಪೂರ್ವಾರ್ಧ ಮಾತ್ರ! ಈ ಕಥೆಯ ಮುಂದುವರಿದ ಭಾಗದಲ್ಲಿ ಈ ಟೋಪಿ ಮಾರುವವನ ಮೊಮ್ಮಗ ಸಹಾ ಅದೇ ವೃತ್ತಿ ಮಾಡುತ್ತಿದ್ದ. ತನ್ನ ಅಜ್ಜ ಸಂಚರಿಸುತ್ತಿದ್ದ ಮಾರ್ಗದಲ್ಲೇ ಇವನು ಹೊರಟಿದ್ದ. ಅದೇ ಮಾವಿನ ತೋಪಿನ ಬಳಿ ಈತನೂ ಸಹಾ ಊಟಕ್ಕೆ ಕುಳಿತ. ನಂತರ ಅಲ್ಲಿಯೇ ಮಲಗಿ ನಿದ್ರೆ ಹೋದ. ಕಥೆ ಮರುಕಳಿಸಿತು. ಎಚ್ಚರವಾಗಿ ನೋಡುತ್ತಾನೆ, ಈ ಬಾರಿಯೂ ಇವನ ಬುಟ್ಟಿಯಲ್ಲಿ ಒಂದು ಟೋಪಿಯು ಇಲ್ಲ. ಹಳೆಯ ಕಥೆಯಂತೆ ಎಲ್ಲ ಮಂಗಗಳು ಟೋಪಿ ಧರಿಸಿ ಮರವೇರಿ ಕುಳಿತಿದ್ದಾವೆ! ಆದರೆ ಮೊಮ್ಮಗ ಗಾಭರಿಗೊಳ್ಳಲಿಲ್ಲ, ಬದಲಿಗೆ ತಣ್ಣಗೆ, ಒಂದು ಕವಳ ಹಾಕಿದ. ನಂತರ ತನ್ನ ತಲೆಯ ಮೇಲಿದ್ದ ಟೋಪಿಯನ್ನು ಅಜ್ಜ ಮಾಡಿದಂತೆ ತಾನೂ ಸಹ ನೆಲಕ್ಕೆ ಒಗೆದ! ಆದರೆ ಈ ಬಾರಿ ಯಾವ ಕೋತಿಯೂ ಸಹ ತನ್ನ ತಲೆಯ ಮೇಲಿದ್ದ ಟೋಪಿಯನ್ನು ಕೆಳಕ್ಕೆಸೆಯಲಿಲ್ಲ! ಬದಲಿಗೆ ಕೋತಿಗಳ ನಾಯಕ ಮರದಿಂದ ಕೆಳಗಿಳಿದು ಬಂದು ಹೇಳಿತು, 'ಅಣ್ಣಾ ನಿನ್ನಜ್ಜ ನಿನಗೆ ಹೇಳಿರುವ ಕಥೆಯನ್ನೇ ನಮ್ಮಜ್ಜನೂ ನಮಗೆ ಹೇಳಿದ್ದಾನೆ ಹೀಗಾಗಿ ನಾವ್ಯಾರೂ ನಿನಗೆ ಟೋಪಿ ಕೊಡುವುದಿಲ್ಲ, ನೀನಿಲ್ಲಿಂದ ಹೋಗಬಹುದು' ಎಂದು!

ಬದಲಾಗುತ್ತಿರುವ ಜಗತ್ತಿನಲ್ಲಿ ನಾವೂ ಅನಿವಾರ್ಯವಾಗಿ ಬದಲಾಗಲೇಬೇಕು! ಹಿಂದೆಂದೋ ನಡೆದ ಕಥೆಯ ಆಧಾರದ ಮೇಲೆ ಜಗತ್ತು ಹಾಗೆ ಇರುತ್ತದೆ ಎಂದು ಅಂದುಕೊಳ್ಳುವುದು ಎಂದಿಗೂ ಸಲ್ಲ. ನಮ್ಮಂತೆಯೇ ಬೇರೆಯವರು ಸಹಾ ಸನ್ನಿವೇಶಕ್ಕೆ ಅನುಗುಣವಾಗಿ ಬದಲಾಗುತ್ತಿರುತ್ತಾರೆ ಎನ್ನುವ ಅರಿವು ನಮಗೆ ಸದಾ ಇರಬೇಕು ಹಾಗೂ ಅದಕ್ಕೆ ತಕ್ಕಂತೆ update ಆಗಿ ಪ್ರತಿಕ್ರಿಯಿಸುವುದನ್ನು ನಾವು ಕಲಿಯಬೇಕು.

# 36. ಯದ್ಭಾವಂ ತದ್ಭವತಿ

ಒಮ್ಮೆ ಒಂದು ಬಹುಉತ್ಪನ್ನಗಳ ಬಹುರಾಷ್ಟ್ರೀಯ ಕಂಪನಿಯಲ್ಲಿ ಪ್ರತಿಷ್ಠಿತ ಕಾಲೇಜೊಂದರಿಂದ ಎಂಬಿಎ ಪದವಿ ಪಡೆದು ಕೆಲಸಕ್ಕೆ ಸೇರಿದ್ದ ಇಬ್ಬರು ಯುವ ಮಾರಾಟ ಅಧಿಕಾರಿಗಳನ್ನು, ತಮ್ಮ ಕಂಪನಿಯ ಪಾದರಕ್ಷೆಗಳ ಮಾರಾಟಕ್ಕೆ ಇರುವ ಅವಕಾಶದ ಕುರಿತು ಮಾರುಕಟ್ಟೆ ಸಮೀಕ್ಷೆ ಮಾಡಲು ಆಫ್ರಿಕಾದ ದಟ್ಟ ಕಾಡಿನಿಂದ ಸುತ್ತುವರಿದಿರುವ ಪ್ರದೇಶ ಒಂದಕ್ಕೆ ಕಳಿಸಲಾಯಿತು. ಈ ಇಬ್ಬರು ಯುವ ಅಧಿಕಾರಿಗಳು ತಮಗೆ ಸೂಚಿಸಿದ್ದ ಜಾಗಕ್ಕೆ ಹೋಗಿ ನೋಡಿದರೆ, ಅಲ್ಲಿರುವುದು ಬಹುಪಾಲು ಆದಿವಾಸಿಗಳು. ಅವರಿಗೆ ನಾಗರೀಕತೆಯ ಪರಿಚಯ ಎಳ್ಳಷ್ಟೂ ಇಲ್ಲ! ಅವರು ಪಾದರಕ್ಷೆ ಧರಿಸುವುದಿರಲಿ ಮೈಮೇಲೆ ಸರಿಯಾಗಿ ಉಡುಪುಗಳನ್ನೂ ಧರಿಸುವುದನ್ನೂ ಅರಿತವರಲ್ಲ! ಇಲ್ಲಿನ ಸ್ಥಿತಿಯನ್ನು ಕಂಡು ಕಂಗಾಲಾದ ಮೊದಲನೆಯ ಮಾರಾಟ ಅಧಿಕಾರಿ, ಇಲ್ಲಿ ಪಾದರಕ್ಷೆಗಳನ್ನು ಮಾರಾಟ ಮಾಡುವುದು ಅಸಾಧ್ಯವೆಂಬ ತೀರ್ಮಾನಕ್ಕೆ ಬಂದು ತಕ್ಷಣ ಅಲ್ಲಿಂದ ವಾಪಸ್ ಹೊರಟ. ಆದರೆ ಎರಡನೆಯ ಮಾರಾಟ ಅಧಿಕಾರಿ "ಇಲ್ಲಿಗೆ ತಕ್ಷಣ ಎರಡು ಟ್ರಕ್ ಲೋಡ್ ಪಾದರಕ್ಷೆಗಳನ್ನು ಕಳಿಸಿಕೊಡಿ ಹಾಗೂ ಅದರ ಜೊತೆಗೆ ಹೊಸ ವಿನ್ಯಾಸದ ಉಡುಪುಗಳನ್ನೂ ಸಹ ಕಳಿಸಿ. ಏಕೆಂದರೆ ಇಲ್ಲಿನ ಜನಕ್ಕೆ ಬಟ್ಟೆ, ಪಾದರಕ್ಷೆಗಳನ್ನು ಹಾಕುವುದನ್ನು ಕಲಿಸಿದ್ದೇ ಆದರೆ ಅದ್ಭುತವಾದ ಮಾರುಕಟ್ಟೆ ನಮಗಿಲ್ಲಿ ಲಭ್ಯವಿದೆ" ಎಂಬ ಸಂದೇಶವನ್ನು ತಕ್ಷಣ ತನ್ನ ಸಂಸ್ಥೆಯ ಕೇಂದ್ರ ಕಚೇರಿಗೆ ರವಾನಿಸಿದ.

ಮೊದಲನೆಯ ಮಾರಾಟ ಅಧಿಕಾರಿ ಪಾದರಕ್ಷೆಯಿರಲಿ ಬಟ್ಟೆಯನ್ನೇ ನೋಡಿರದ ಜನರಿಗೆ ಹೇಗೆ ಪಾದರಕ್ಷೆ ಮಾರಲು ಸಾಧ್ಯ ಎಂದು ಋಣಾತ್ಮಕವಾಗಿ ಯೋಚಿಸಿದರೆ, ಎರಡನೆಯಾತ ಇಲ್ಲಿಗೆ ಯಾವ ಕಂಪನಿಯವರು ಪ್ರವೇಶಿಸಿರದ ಕಾರಣ, ಇಲ್ಲಿನ ಜನರಿಗೆ ಪಾದರಕ್ಷೆಯ ಅಗತ್ಯದ ಕುರಿತು ಅರಿವೇ ಇಲ್ಲ, ಆ ಅರಿವನ್ನು ಮೂಡಿಸಿದ್ದೇ ಆದರೆ ಒಳ್ಳೆಯ ವ್ಯಾಪಾರ ಸಾಧ್ಯ ಹಾಗೂ ಅದರ ಜೊತೆಗೆ ಹೊಸ ವಿನ್ಯಾಸದ ಬಟ್ಟೆಗಳನ್ನೂ ಅವರಿಗೆ ಪರಿಚಯಿಸಿದರೆ ತಮ್ಮ ಕಂಪನಿಯ

ಮಾರುಕಟ್ಟೆಯನ್ನು ಇನ್ನಷ್ಟು ವಿಸ್ತರಿಸಿಬಹುದು ಎನ್ನುವ ಧನಾತ್ಮಕ ಚಿಂತನೆಯನ್ನು ಮಾಡಿದ.

ಒಂದೇ ರೀತಿಯ ಸನ್ನಿವೇಶವನ್ನು ಎರಡು ವಿಭಿನ್ನ ದೃಷ್ಟಿಕೋನಗಳಿಂದ ನೋಡಿದ ಪರಿಯಿದು. ಎಷ್ಟೋ ಸಂದರ್ಭದಲ್ಲಿ ನಾವಿರುವ ಜಾಗ ನಮ್ಮ ಪ್ರತಿಭೆಗೆ ಸೂಕ್ತವಾಗಿಲ್ಲ, ಇಲ್ಲಿನ ವಾತಾವರಣ ನಮಗೆ ಪೂರಕವಾಗಿಲ್ಲ, ನಾವು ಬೇರೆಡೆ ಇದ್ದರೆ ಇನ್ನೇನನ್ನೋ ಸಾಧಿಸುತ್ತಿದ್ದೆವು ಎಂದೆಲ್ಲಾ ಅಂದುಕೊಂಡು ಕೊರಗುತ್ತಿರುತ್ತೇವೆ. ಆದರೆ ನಾವಿರುವ ಜಾಗದಲ್ಲಿಯೇ, ನಮಗಿರುವ ಅವಕಾಶಗಳ ಮಿತಿಯಲ್ಲಿಯೇ ಸಕಾರಾತ್ಮಕವಾಗಿ ಚಿಂತಿಸುವುದೇ ಸಾಧಕರ ಮಾರ್ಗ.

# 37. ನಾನು ಎಂಬ ಭಾವ ನಾಶವಾಗಲಿ

ಇದು ಎಲ್ಲರಿಗೂ ಗೊತ್ತಿರುವ ಕನಕದಾಸರ ಜನಪ್ರಿಯ ಕಥೆ. ಒಮ್ಮೆ ವೇದಾಂತಿಗಳ ಸಭೆಯಲ್ಲಿ ಕನಕದಾಸರ ಗುರುಗಳಾದ ವ್ಯಾಸತೀರ್ಥರು, 'ಸ್ವರ್ಗಕ್ಕೆ ಯಾರು ಹೋಗಬಹುದು?' ಎಂದು ಪ್ರಶ್ನಿಸಿದರು. ಆಗ ಕನಕರು, 'ನಾನು ಹೋದರೆ ಹೋದೇನು' ಎಂದು ಉತ್ತರಿಸಿದರು. ಮೊದಲೇ ಕನಕದಾಸರ ಮೇಲೆ ಅಸೂಯೆಯಿದ್ದ ಕೆಲವು ವೇದಾಂತಿಗಳು ಕನಕ ಉದ್ಧಟತನದಿಂದ ಉತ್ತರಿಸುತ್ತಿದ್ದಾನೆ ಎಂದು ವ್ಯಾಸತೀರ್ಥರ ಬಳಿ ದೂರನ್ನಿತ್ತಾಗ, ಕನಕದಾಸರನ್ನು ಚೆನ್ನಾಗಿ ಬಲ್ಲ ಗುರುಗಳು ಅದಕ್ಕೇನೋ ಅರ್ಥವಿರಬೇಕೆಂದು ಅವರ ಬಳಿ ಹೀಗೇಕೆ ಹೇಳಿದೆ? ಎಂದು ಕೇಳಿದರು. ಆಗ ಕನಕದಾಸರು, 'ನಾನು' ಎಂಬ ಅಹಂಕಾರದ ಭಾವ ನಮ್ಮಿಂದ ದೂರವಾದರೆ ಯಾರು ಬೇಕಾದರೂ ಮುಕ್ತಿಯನ್ನು ಹೊಂದಿ ಸ್ವರ್ಗಕ್ಕೆ ಹೋಗಬಹುದು ಎಂಬ ಅತ್ಯಂತ ಅರ್ಥಪೂರ್ಣವಾದ ವಿವರಣೆಯನ್ನು ನೀಡಿದರು. ಕನಕದಾಸರ ಈ ಮಾತು ಸಾರ್ವಕಾಲಿಕ. ಇಂದು ಎಲ್ಲೆಡೆಯಲ್ಲೂ 'ಎಲ್ಲವನ್ನೂ ನಾನೇ ಮಾಡಿದೆ', ಎಲ್ಲವೂ ನನ್ನಿಂದಲೇ' ಎಂಬಿತ್ಯಾದಿಯಾದ ಸ್ವಪ್ರಶಂಸೆಯ ಸೊಲ್ಲೇ ಹೆಚ್ಚಾಗಿ ಕೇಳಿ ಬರುತ್ತಿದೆ. ಕನ್ನಡದ ಹಿರಿಯ ಕವಿ ಎಸ್ ವಿ ಪರಮೇಶ್ವರ ಭಟ್ಟರು ತಮ್ಮ ಜನಪ್ರಿಯ ಭಾವಗೀತೆಯೊಂದರಲ್ಲಿ, "**ನೀನೆಂಬ ಜ್ಯೋತಿಯಲಿ ನಾನೆಂಬ ಪತಂಗ. ಸೋತ ಉಲಿ ಏಳಲಿ ದೀಪ ಹಚ್ಚ.. ನನ್ನಂತರಂಗದಲ್ಲಿ ನಂದದೆ ನಿಂದಿಪ ನಂದಾದೀಪವಾಗಿರಲಿ ದೀಪ ಹಚ್ಚ**.." ಎಂಬುದಾಗಿ ಹೇಳುತ್ತಾರೆ. "ನಾನು" ಎಂಬ ಅಹಂಕಾರದ ಪತಂಗ, "ನೀನು" ಎಂಬ ಜ್ಞಾನದ ಜ್ಯೋತಿಯಲ್ಲಿ ಸುಟ್ಟು ಹೋಗಲಿ, ಅದರ ಸೋಲಿನ ಸೊಲ್ಲು ಕೇಳಿಸಲಿ. ಆ ಜ್ಞಾನದ ಜ್ಯೋತಿ, ನನ್ನನ್ನು ಸದಾ ನಿಂದಿಸುತ್ತಾ ಸರಿದಾರಿಗೆ ತರುವ ನಂದಾದೀಪವಾಗಿ ನನ್ನೆದೆಯಲ್ಲಿ ಸದಾ ಬೆಳಗಲಿ ಎನ್ನುವ ಈ ಪ್ರಾರ್ಥನೆ ಎಷ್ಟು ಅರ್ಥಪೂರ್ಣವಾಗಿದೆಯಲ್ಲವೇ? ಯಾವುದೇ ಯಶಸ್ಸಿರಬಹುದು ಅದು ಎಂದಿಗೂ ಏಕ ವ್ಯಕ್ತಿ ಪ್ರದರ್ಶನವಾಗಲು ಸಾಧ್ಯವಿಲ್ಲ.

ತಂಡವಾಗಿ ಪ್ರಯತ್ನ ಪಟ್ಟಾಗ ಮಾತ್ರ ಯಶಸ್ಸು ಸಾಧ್ಯ. ವೈಯಕ್ತಿಕ ಆಟಗಳಾದ ಟೆನ್ನಿಸ್, ಚೆಸ್ ಮುಂತಾದವುಗಳಲ್ಲಿ ಕೂಡ ಯಶಸ್ವೀ ಕ್ರೀಡಾಪಟುವಿನ ಹಿಂದೆ ಅವನಿಗೆ ಸಹಕರಿಸುವ ತಂಡ ತೆರೆಮರೆಯಲ್ಲಿ ಅವಿರತವಾಗಿ ಕೆಲಸ ಮಾಡುತ್ತಲೇ ಇರುತ್ತದೆ. ಅದಕ್ಕೇ ಹೇಳುವುದು **TEAM** ಎನ್ನುವ ಶಬ್ದದಲ್ಲಿ **"I"** ಎನ್ನುವ ಅಕ್ಷರವಿಲ್ಲ ಎಂದು. ಗೆಲುವಿಗೆ ನಾನೊಬ್ಬನೇ ಕಾರಣಕರ್ತ, ಸೋಲಿಗೆ ಮಾತ್ರ ಬೇರೆಯವರು ಹೊಣೆಗಾರರು ಎಂಬ ಭಾವ ಎಂದಿಗೂ ಸಲ್ಲ. ಸೋಲಿಗೆ ಇನ್ನೊಬ್ಬರು ಕಾರಣ ಎಂದು ನಾವು ಬೆರಳು ಮಾಡುವಾಗ ಮಿಕ್ಕ ಮೂರು ಬೆರಳುಗಳು ನಮ್ಮ ಕಡೆಯೇ ಮುಖ ಮಾಡಿರುತ್ತವೆ, ಹಾಗಾಗಿ ಆ ಸೋಲಿನಲ್ಲಿ ನನ್ನ ಪಾತ್ರ ದೊಡ್ಡದಿದೆ ಎಂಬುದನ್ನು ನಾನು ಸದಾ ಅರ್ಥ ಮಾಡಿಕೊಳ್ಳಬೇಕು, ಎಂದು ನಮ್ಮ ತಂದೆ ಯಾವಾಗಲೂ ಹೇಳುತ್ತಿರುತ್ತಿದ್ದರು. ಅಜ್ಞಾನಜನ್ಯವಾದ ಅಹಂಕಾರಕ್ಕೆ ಎಡೆ ಮಾಡಿಕೊಡುವ "ನಾನು" ಎಂಬ ಭಾವವನ್ನು ಸಾಧ್ಯವಾದಷ್ಟು ತೊರೆದು, ಜ್ಞಾನಜನ್ಯವಾದ ಆತ್ಮವಿಶ್ವಾಸವನ್ನು ಹೊಂದಲು "ನಾವು" ಎಂಬ ಭಾವನೆ ಅತಿ ಮುಖ್ಯ.

# 38. ದೇಶದ ಕುರಿತಾದ ನಿಜವಾದ ಕಾಳಜಿ

ವಿಸ್ತೀರ್ಣದಲ್ಲಿ ಸುಮಾರು ನಮ್ಮ ದೇಶದ ಮಹಾರಾಷ್ಟ್ರ ರಾಜ್ಯದಷ್ಟು ಮಾತ್ರ ದೊಡ್ಡವಿರುವ ಪುಟಾಣಿ ದ್ವೀಪದೇಶ ಜಪಾನ್, ಸಂಪನ್ಮೂಲಗಳ ಸದ್ಬಳಕೆ, ಪ್ರಜೆಗಳ ಪ್ರಾಮಾಣಿಕ ದೇಶಪ್ರೇಮ, ಕಾಯಕ ಪ್ರಜ್ಞೆಗಳ ಮೂಲಕ ವಿಶೇಷ ಪ್ರಗತಿ ಸಾಧಿಸಿ, ಅಭಿವೃದ್ಧಿಯ ವಿಚಾರದಲ್ಲಿ ಹಲವು ದೇಶಗಳಿಗಿಂತ ಬಹಳ ಮುಂದಿದೆ. ಇದಕ್ಕೆ ಮುಖ್ಯ ಕಾರಣ, ಅಲ್ಲಿನ ನಾಗರೀಕರಿಗೆ ತಮ್ಮ ದೇಶದ ಕುರಿತಾಗಿ ಇರುವ ನಿಸ್ವಾರ್ಥ ಕಾಳಜಿ ಹಾಗೂ ಕಳಕಳಿ. 1945ರಲ್ಲಿ ನಡೆದ ಎರಡನೇ ವಿಶ್ವಯುದ್ಧದ ಸಂದರ್ಭದಲ್ಲಿ ನಡೆದ ಅತ್ಯಂತ ಭೀಕರ ಬಾಂಬ್ ದಾಳಿಯಿಂದ ಸಂಪೂರ್ಣ ನಾಶವಾಗಿದ್ದ ಹಿರೋಶಿಮಾ-ನಾಗಸಾಕಿ ನಗರಗಳನ್ನು ಕೆಲವೇ ವರ್ಷಗಳಲ್ಲಿ ಮರುನಿರ್ಮಾಣ ಮಾಡಿ, ಮಾದರಿಯಾದವರು ಜಪಾನೀಯರು. ಈ ಜಪಾನೀಯರಿಗೆ ತಮ್ಮ ದೇಶದ ಬಗೆಗಿರುವ ವಿಶಿಷ್ಟ ಕಾಳಜಿಯ ಕುರಿತು ಹಲವಾರು ಕಥೆಗಳಿವೆ.

ಒಮ್ಮೆ ಜಪಾನ್ ದೇಶದ ಚಪ್ಪಲಿ ಕಾರ್ಖಾನೆಯೊಂದರ ಕಾರ್ಮಿಕರು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಮುಷ್ಕರವೊಂದನ್ನು ನಡೆಸಲು ಆಲೋಚಿಸಿದರು. ಸಾಮಾನ್ಯವಾಗಿ ನಮ್ಮಲ್ಲಿ ಮುಷ್ಕರವೆಂದರೆ ಕಾರ್ಖಾನೆಯ ಲಾಕ್ ಡೌನ್, ಎಲ್ಲವನ್ನೂ ಬಲಾತ್ಕಾರವಾಗಿ ಬಂದ್ ಮಾಡಿಸುವುದು ಸಾರ್ವಜನಿಕ ಆಸ್ತಿಪಾಸ್ತಿಗಳ ನಾಶ, ಟೈರಿಗೆ ಬೆಂಕಿ ಹಚ್ಚಿ ರಸ್ತೆ ತಡೆ ಮಾಡುವುದು, ದುಷ್ಕರ್ಮಿಗಳಿಂದ ದೊಂಬಿ ಕಲ್ಲು ತೂರಾಟ ಇತ್ಯಾದಿಗಳು ಸರ್ವೇ ಸಾಮಾನ್ಯ. ಆದರೆ ತಾವು ಮಾಡುವ ಕಾಯಕ, ದೇಶದ ಪ್ರಗತಿಗೆ ಅತ್ಯಂತ ಅವಶ್ಯಕ ಹಾಗೂ ತಮ್ಮ ಮುಷ್ಕರದಿಂದ ದೇಶದ ಪ್ರಗತಿ ಕುಂಠಿತವಾಗಬಾರದೆಂದು ದೃಢವಾಗಿ ನಂಬಿದ್ದ ಜಪಾನಿನ ಈ ಚಪ್ಪಲಿ ಕಾರ್ಖಾನೆಯ ಕಾರ್ಮಿಕರು ಮುಷ್ಕರವನ್ನು ಹೇಗೆ ಮಾಡಿದರು ಗೊತ್ತೇ?

ತಮ್ಮ ಕೆಲಸಕ್ಕೆ ಎಂದೂ ರಜೆ ಹಾಕದೇ, ಕಾರ್ಖಾನೆಯ ಉತ್ಪಾದನೆಗೆ ಕೊಂಚವೂ ತಡೆಯಾಗದಂತೆ ತಮ್ಮ ಬೇಡಿಕೆಗಳನ್ನು ಇವರು ಈಡೇರಿಸಿಕೊಂಡ ವಿಧಾನ ಅತ್ಯಂತ ವಿಶಿಷ್ಟವಾಗಿದೆ. ಮುಷ್ಕರನಿರತ ಈ ಕಾರ್ಖಾನೆಯ ಕಾರ್ಮಿಕರು, ಬರೀ ಎಡಗಾಲಿನ ಚಪ್ಪಲಿಯನ್ನು ಮಾತ್ರ ಉತ್ಪಾದನೆ ಮಾಡತೊಡಗಿದರು. ತಮ್ಮ ಬೇಡಿಕೆ ಈಡೇರುವ ತನಕ ಬಲಗಾಲಿನ ಚಪ್ಪಲಿಗಳನ್ನು ಉತ್ಪಾದಿಸುವುದಿಲ್ಲ ಎಂಬುದು ಅವರ ದೃಢ ನಿಲುವಾಗಿತ್ತು. ಕೇವಲ ಎಡಗಾಲಿನ ಚಪ್ಪಲಿಯನ್ನು ಮಾತ್ರಾ ಮಾರುಕಟ್ಟೆಗೆ ಬಿಡುಗಡೆ ಮಾಡುವುದು ಅಸಾಧ್ಯವೆಂದರಿತ ಕಾರ್ಖಾನೆಯ ಮಾಲೀಕರಿಗೆ, ಕಾರ್ಮಿಕರ ನ್ಯಾಯಸಮ್ಮತವಾದ ಬೇಡಿಕೆಗಳನ್ನು ಈಡೇರಿಸದೆ ಬೇರೆ ದಾರಿಯಿರಲಿಲ್ಲ! ಹೀಗೆ ಒಂದು ನಿಮಿಷದ ಕೆಲಸವನ್ನೂ ವ್ಯರ್ಥ ಮಾಡದೇ ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ಯಾವುದೇ ಹಾನಿಯುಂಟು ಮಾಡದೇ, ತಮ್ಮ ಕಾಯಕದ ಮೂಲಕವೇ ಪ್ರತಿಭಟನೆ ಮಾಡಿ ಬೇಡಿಕೆಗಳನ್ನು ಈಡೇರಿಸಿಕೊಂಡ ಜಪಾನೀಯರ ಈ ವಿಧಾನ ಮಾದರಿಯಲ್ಲವೇ? ದೇಶದ ಕುರಿತಾದ ನಿಜವಾದ ಕಳಕಳಿಗೆ ಇದು ಬಹಳ ದೊಡ್ಡ ಉದಾಹರಣೆ. ತಮ್ಮ ಕಾಯಕ ಯಾವುದೇ ಇರಲಿ, ಅದನ್ನು ಅತ್ಯಂತ ನಿಷ್ಠೆಯಿಂದ ಮಾಡಬೇಕೆಂದು ಪ್ರತಿಯೊಬ್ಬ ಪ್ರಜೆಯೂ ಆಲೋಚಿಸಿದಾಗ ಮಾತ್ರ, ಯಾವುದೇ ದೇಶ ಜಪಾನ್ ಮಾದರಿಯಲ್ಲಿ ಬೆಳವಣಿಗೆ ಹೊಂದಲು ಸಾಧ್ಯ.

# 39. ಹಾರುವ ಸಿಖ್ ನ ಪ್ರೇರಣೆಯ ಕಥೆ




ನಮ್ಮ ದೇಶದ ಕ್ರೀಡಾಲೋಕದ ದಂತಕಥೆ, ಸುಪ್ರಸಿದ್ಧ ಓಟಗಾರ ಮಿಲ್ಖಾ ಸಿಂಗ್ ರವರ ಜೀವನದ ಕಥೆ ನಿಜಕ್ಕೂ ರೋಚಕವಾದುದು. ಈಗಿನ ಪಾಕಿಸ್ತಾನದ ಪಂಜಾಬಿನಲ್ಲಿರುವ ಗೋವಿಂದಪುರ ಎಂಬಲ್ಲಿ ಹುಟ್ಟಿದ ಮಿಲ್ಖಾ ಸಿಂಗ್, ದೇಶ ವಿಭಜನೆಯ ಸಂದರ್ಭದಲ್ಲಿ ನಡೆದ ಘನಘೋರ ಹತ್ಯಾಕಾಂಡಕ್ಕೆ ಸಾಕ್ಷಿಯಾಗುತ್ತಾರೆ. ಇವರ ಕಣ್ಣೆದುರಲ್ಲೇ ಇವರ ಇಡೀ ಕುಟುಂಬದ ಹತ್ಯೆಯಾಗುತ್ತದೆ. ಆಕಸ್ಮಿಕವಾಗಿ ಬದುಕುಳಿದ ಮಿಲ್ಖಾ ಸಿಂಗ್ ತನ್ನ ಅಕ್ಕನ ಜೊತೆಗೆ ನಿರಾಶ್ರಿತರಾಗಿ ಭಾರತಕ್ಕೆ ಓಡಿ ಬರುತ್ತಾರೆ ಹಾಗೂ ಅತ್ಯಂತ ಕಷ್ಟಕರವಾದ ಬಾಲ್ಯವನ್ನು ಕಳೆಯುತ್ತಾರೆ. ನಂತರ ಅತ್ಯಂತ ಕಡಿಮೆ ಸಂಬಳಕ್ಕೆ ಸೇನೆಯಲ್ಲಿ ಜವಾನನಾಗಿ ಸೇರಿಕೊಳ್ಳುತ್ತಾರೆ. ಇವರಿದ್ದ ರೆಜಿಮೆಂಟಿನ ಯೋಧರಿಗಾಗಿ ಒಂದು ಗುಡ್ಡಗಾಡು ಓಟದ ಸ್ಪರ್ಧೆ ಆಯೋಜಿತವಾಗಿರುತ್ತದೆ. ಅದರಲ್ಲಿ ವಿಜೇತರಾಗುವವರಿಗೆ ಸಂಬಳದ ಜೊತೆಗೆ ಪ್ರತಿನಿತ್ಯ ಒಂದು ಲೋಟ ಹಾಲು ಹಾಗೂ ಒಂದು ಮೊಟ್ಟೆ ಉಚಿತ ಎಂಬ ಘೋಷಣೆ, ಕ್ಷೀರಪ್ರಿಯರಾದ ಮಿಲ್ಖಾರ ಮನ ಸೆಳೆಯುತ್ತದೆ.

ಈ ಆಕರ್ಷಕ ಬಹುಮಾನವನ್ನು ಗೆಲ್ಲಲೇಬೇಕೆಂದು ಅತ್ಯಂತ ತನ್ಮಯತೆಯಿಂದ ಓಡಿದ, ಮಿಲ್ಖಾ ಸಿಂಗ್ ರವರ ಅದ್ಭುತ ಪ್ರತಿಭೆಯನ್ನು ಸೇನೆಯ

ಕ್ರೀಡಾ ಕೋಚ್ ಗುರುತಿಸಿ, ಇವರಿಗೆ ವಿಶೇಷವಾದ ತರಬೇತಿಗಳನ್ನು ನೀಡುತ್ತಾರೆ. ರಾಷ್ಟ್ರೀಯ ಅಥ್ಲೆಟಿಕ್ಸ್ ಟ್ರಯಲ್ಸ್ ಸಂದರ್ಭದಲ್ಲಿ ಸಂಪೂರ್ಣ ಸನ್ನದ್ಧರಾಗಿದ್ದ ಮಿಲ್ಖಾ ಸಿಂಗ್ ಮೇಲೆ, ಹೊಟ್ಟೆಕಿಚ್ಚಿನ ವೈರಸ್ಸು ತುಂಬಿದ್ದ ಕೆಲವು ಸಹೋದ್ಯೋಗಿಗಳು, ಏಕಾಏಕಿ ದೈಹಿಕ ದಾಳಿ ಮಾಡುತ್ತಾರೆ ಹಾಗೂ ತಮ್ಮ ಸ್ಪೈಕ್ ಶೂಗಳಿಂದ ಹೊಡೆದು ಇವರ ಪಾದಗಳಿಗೆ ತೀವ್ರ ಸ್ವರೂಪದ ಗಾಯ ಮಾಡುತ್ತಾರೆ. ಆದರೆ ಆಯ್ಕೆಯ ದಿನದಂದು ಮಿಲ್ಖಾ ತಾನು ಓಡಲೇಬೇಕೆಂದು ಕ್ರೀಡಾಂಗಣಕ್ಕೆ ಬರುತ್ತಾರೆ.

ಮಿಲ್ಖಾರ ಕೋಚ್ ಎಷ್ಟೇ ಬೇಡವೆಂದರೂ ಕೇಳದೆ ಬ್ಯಾಂಡೇಜ್ ಹಾಕಿದ್ದ ಬರಿಗಾಲಲ್ಲಿಯೇ ಓಡಿ ರಾಷ್ಟ್ರೀಯ ದಾಖಲೆ ಸ್ಥಾಪಿಸುತ್ತಾರೆ. ನಂತರ 400 ಹಾಗೂ 200 ಮೀಟರ್ ಓಟದ ಸ್ಪರ್ಧೆಗಳಲ್ಲಿ ದೇಶವನ್ನು ಒಲಂಪಿಕ್ಸ್, ಏಷ್ಯಾಡ್, ಕಾಮನ್ವೆಲ್ತ್ ಮುಂತಾದ ಪ್ರತಿಷ್ಠಿತ ಕ್ರೀಡಾಕೂಟಗಳಲ್ಲಿ ಪ್ರತಿನಿಧಿಸಿ, ಹಲವಾರು ಪದಕಗಳನ್ನು ದೇಶಕ್ಕೆ ತಂದುಕೊಡುತ್ತಾರೆ. ಆಗ ಪ್ರಧಾನಮಂತ್ರಿಗಳಾಗಿದ್ದ ಪಂಡಿತ್ ನೆಹರೂರವರು ನೆರೆಯ ಪಾಕಿಸ್ತಾನದ ಜೊತೆಗೆ ಕ್ರೀಡಾ ಬಾಂಧವ್ಯವನ್ನು ವೃದ್ಧಿಸುವ ಸಲುವಾಗಿ ಅಲ್ಲಿಗೆ ಒಂದು ಕ್ರೀಡಾ ನಿಯೋಗವನ್ನು ಸ್ಪರ್ಧೆಗಾಗಿ ಕಳಿಸುವ ಆಲೋಚನೆ ಮಾಡುತ್ತಾರೆ ಹಾಗೂ ಆ ನಿಯೋಗದ ನೇತೃತ್ವವನ್ನು ಮಿಲ್ಖಾಸಿಂಗ್ ರವರೇ ವಹಿಸಬೇಕು ಎಂದು ಆಶಿಸುತ್ತಾರೆ. ಆದರೆ ತನ್ನ ಇಡೀ ಕುಟುಂಬದ ಹತ್ಯೆ ತನ್ನ ಕಣ್ಣೆದುರಿಗೇ ಆದ ಸ್ಥಳಕ್ಕೆ ನಾನು ಹೋಗಲಾರೆ ಎಂದು ನಿರಾಕರಿಸುತ್ತಾರೆ ಮಿಲ್ಖಾ ಸಿಂಗ್. ಆಗ ನೆಹರೂರವರು "ನೀನೊಬ್ಬ ಯೋಧ ನೀನು ದೇಶದ ಈ ಅವಶ್ಯಕತೆಗೆ ಇಲ್ಲ ಎನ್ನಬಾರದು" ಎಂದು ನುಡಿದಾಗ ತಂಡದ ನೇತೃತ್ವ ವಹಿಸಿ ಪಾಕಿಸ್ತಾನಕ್ಕೆ ಹೋದ ಮಿಲ್ಖಾ ಸಿಂಗ್, ಅಲ್ಲಿ ಏಷ್ಯಾದ ತೂಫಾನ್ ಎಂದೇ ಪ್ರಖ್ಯಾತರಾಗಿದ್ದ ಪಾಕಿಸ್ತಾನದ ವೇಗದ ಓಟಗಾರ ಅಬ್ದುಲ್ ಖಾಲಿಕ್ ಅವರನ್ನು ಬಹಳ ದೊಡ್ಡ ಅಂತರದಿಂದ ಸೋಲಿಸಿ ಪಾಕಿಸ್ತಾನದ ಅಧ್ಯಕ್ಷರಿಂದ ಚಿನ್ನದ ಪದಕದ ಜೊತೆಗೆ **"ಹಾರುವ ಸಿಖ್"** ಎಂಬ ಬಿರುದನ್ನೂ ಪಡೆಯುತ್ತಾರೆ.

ಮಿಲ್ಖಾ ಸಿಂಗ್ ತಮ್ಮ ಆತ್ಮಚರಿತ್ರೆ **'ದಿ ರೇಸ್ ಆಫ್ ಮೈ ಲೈಫ್'** ನಲ್ಲಿ ನಿಮ್ಮದು ಯಾವುದೇ ಕ್ಷೇತ್ರವಿರಲಿ ಅದರಲ್ಲಿ ಯಶಸ್ಸು ಗಳಿಸಲು ಮೂರು ಅಂಶಗಳು ನಿಮಗೆ ಅತಿ ಮುಖ್ಯ ಎಂಬುದಾಗಿ ಹೇಳುತ್ತಾರೆ ಅವುಗಳೆಂದರೆ ಕಠಿಣ ಪರಿಶ್ರಮ, ದೃಢ ಇಚ್ಛಾಶಕ್ತಿ ಹಾಗೂ ಸಮರ್ಪಣಾ ಮನೋಭಾವ..

# 40. ನಿಜವಾದ ನೈತಿಕ ಮೌಲ್ಯವೆಂದರೆ..

2012ರಲ್ಲಿ ತೆರೆಕಂಡ ವಿಧು ವಿನೋದ್ ಚೋಪ್ರಾ ನಿರ್ಮಾಣದ ಜನಪ್ರಿಯ ಹಿಂದೀ ಚಲನಚಿತ್ರ, **"ಫೆರಾರೀ ಕಿ ಸವಾರಿ",** ತನ್ನ ಪ್ರತಿಭಾವಂತ ಮಗ ಸಚಿನ್ ತೆಂಡೂಲ್ಕರ್ ಥರ ಕ್ರಿಕೆಟರ್ ಆಗಬೇಕು ಎನ್ನುವ ಆಸೆಯನ್ನು ಪೂರೈಸುವತ್ತ ಕಷ್ಟಪಡುವ ಪ್ರಾಮಾಣಿಕ ತಂದೆಯೊಬ್ಬನ ವಿಭಿನ್ನ ಕಥಾನಕವುಳ್ಳದ್ದು. ಈ ಚಿತ್ರದಲ್ಲಿ ಸಚಿನ್ ತೆಂಡೂಲ್ಕರ್ ರವರ ಫೆರಾರೀ ಕಾರೂ ಸಹಾ ಒಂದು ಪ್ರಮುಖ ಪಾತ್ರ. ರಾಜೇಶ್ ಮಾಪುಸ್ಕರ್ ನಿರ್ದೇಶನದ ಈ ವಿಶೇಷ ಹಾಸ್ಯಮಯ ಚಿತ್ರದಲ್ಲಿ, ಒಂದು ಅದ್ಭುತವಾದ ದೃಶ್ಯವಿದೆ. ಆರ್ ಟಿ ಒ ಕಛೇರಿಯಲ್ಲಿ ಗುಮಾಸ್ತನಾದರೂ ಅತ್ಯಂತ ಪ್ರಾಮಾಣಿಕನಾದ ಈ ಚಿತ್ರದ ನಾಯಕ ತನ್ನ ಮಗನ ಜೊತೆ ಸ್ಕೂಟರಿನಲ್ಲಿ ಹೋಗುವಾಗ ಟ್ರಾಫಿಕ್ ಸಿಗ್ನಲ್ ಉಲ್ಲಂಘಿಸಿಬಿಡುತ್ತಾನೆ. ತಕ್ಷಣ ಈತ ನಂತರದ ಚೌಕಿಯಲ್ಲಿರುವ ಹವಾಲ್ದಾರನ ಬಳಿ ಹೋಗಿ, "ನಾನು ಸಿಗ್ನಲ್ ಜಂಪ್ ಮಾಡಿದ್ದೇನೆ. ಹಾಗಾಗಿ ದಂಡ ಕಟ್ಟಿಸಿಕೊಳ್ಳಿ" ಎಂದು ಕೇಳಿಕೊಳ್ಳುತ್ತಾನೆ. ಆಶ್ಚರ್ಯಚಕಿತನಾದ ಹವಾಲ್ದಾರ, "ನೀನು ಸಿಗ್ನಲ್ ಜಂಪ್ ಮಾಡಿದ್ದನ್ನು ಯಾರಾದರೂ ಪೋಲೀಸರು ನೋಡಿದ್ದಾರಾ?" ಎಂದು ಕೇಳುತ್ತಾನೆ. ಆಗ ಚಿತ್ರದ ನಾಯಕ "ಅಲ್ಲಿ ಪೋಲೀಸರು ಯಾರೂ ಇರಲಿಲ್ಲ" ಎಂದು ಉತ್ತರಿಸಿದಾಗ ದಂಗಾದ ಹವಾಲ್ದಾರ "ಯಾರೂ ಇರಲಿಲ್ಲ ಅಂದಮೇಲೆ ಯಾರೂ ನೋಡಿಲ್ಲ ಅಂತಾಯ್ತು, ಸುಮ್ಮನೇ ಹೋಗೋದಲ್ವಾ, ಮತ್ತೇನು ನಿನ್ನ ಸಮಸ್ಯೆ?" ಎಂದು ಕೇಳುತ್ತಾನೆ., "ಹೌದು..ಪೋಲೀಸರೇನೂ ನೋಡಿಲ್ಲ ಸರ್, ಆದರೆ ನನ್ನ ಮಗ ನೋಡಿದ್ದಾನೆ, ತಪ್ಪು ಮಾಡಿದ್ದೀನಿ ಅಂತ ನನಗೆ ಗೊತ್ತು, ತಪ್ಪು ಮಾಡಿಯೂ ದಂಡ ಕಟ್ಟದೇ ಇರೋದು ಇನ್ನೂ ದೊಡ್ಡ ತಪ್ಪಲ್ವಾ ಸರ್? ಇದನ್ನು ನೋಡಿದ ನನ್ನ ಮಗ ಏನೆಂದು ಕೊಳ್ಳುತ್ತಾನೆ? ಸದಾ ನಿಯಮಗಳನ್ನು ಪಾಲಿಸಬೇಕೆಂದು ಹೇಳುವ ನಾನೇ ನಿಯಮ ಉಲ್ಲಂಘಿಸಿದರೆ ಅವನಿಗೆ ಯಾವ ಸಂದೇಶ ರವಾನಿಸಿದಂತಾಗುತ್ತದೆ?" ಎಂದು ಕೇಳುತ್ತಾನೆ, ಚಿತ್ರದ ನಾಯಕ.

ನಾವು ತಪ್ಪು ಮಾಡಿದಾಗ ಅದು ಬೇರೆಯವರ ಕಣ್ಣಿಗೆ ಬೀಳದಿದ್ದರೆ ಅದು ತಪ್ಪಲ್ಲ ಎಂದು ಭಾವಿಸುವುದು ಸರಿಯಲ್ಲ. ಯಾರೂ ಇರದಿದ್ದರೂ ನಮ್ಮ ಅಂತಃಸಾಕ್ಷಿಗೆ ತಪ್ಪೆಂದು ಅನಿಸಿದರೆ ಅದು ತಪ್ಪೇ. ಅದನ್ನು ಸಾರ್ವಜನಿಕವಾಗಿ ಒಪ್ಪಿಕೊಳ್ಳುವ ಗುಣ ನಮ್ಮಲ್ಲಿದ್ದರೆ ಅದು ನಿಜಕ್ಕೂ ಉತ್ಕೃಷ್ಟವಾದ ಮಾನಸಿಕ ಸ್ಥಿತಿ. ಮಹಾತ್ಮಾಗಾಂಧೀಜಿಯವರಿಗೆ ಇಂತಹ ಉನ್ನತ ಮಟ್ಟದ ಮನಸ್ಥಿತಿ ಇತ್ತು.

ಇದೇರೀತಿ ಉತ್ತಮ ಗುಣಮಟ್ಟ ಎಂದರೇನು ಎಂಬುದಾಗಿ ಆಟೋಮೊಬೈಲ್ ಕ್ಷೇತ್ರದ ಪಿತಾಮಹ, ಗ್ರಹಾಂಫೋರ್ಡ್ ನೀಡಿದ ವಿವರಣೆ, ಮೇಲಿನ ವಿಚಾರಕ್ಕೆ ಪೂರಕವಾಗಿ ನಿಲ್ಲುತ್ತದೆ. **"Quality means doing it right when no one is looking"** ಅಂದರೆ  ಒಳ್ಳೆಯ ಗುಣಮಟ್ಟದ ಕೆಲಸವೆಂದರೆ ಯಾರೂ ನಮ್ಮನ್ನು ಗಮನಿಸದೇ ಇದ್ದಾಗಲೂ ಸರಿಯಾದ ರೀತಿಯಲ್ಲಿ ಕೆಲಸ ಮಾಡುವುದು. ಹೆಚ್ಚಿನ ಸಂದರ್ಭಗಳಲ್ಲಿ ಬೇರೆಯವರು ನಮ್ಮ ಕೆಲಸ ನೋಡಿ ಮೆಚ್ಚಬೇಕು, ಅದರಿಂದ ನಮಗೆ ಮನ್ನಣೆ, ಪ್ರಶಸ್ತಿಗಳು ಸಿಗಬೇಕು, ಇದಕ್ಕಾಗಿ ಮಾತ್ರ ನಾವು ನಮ್ಮ ಕೆಲಸವನ್ನು ಸರಿಯಾಗಿ ಮಾಡಬೇಕು ಎಂದು ಯೋಚಿಸುತ್ತೇವೆ. ಆದರೆ ಯಾರೂ ನಮ್ಮ ಕೆಲಸವನ್ನು ನೋಡುತ್ತಿಲ್ಲವೆಂದಾದರೆ, ಹೇಗೆ ಮಾಡಿದರೂ ನಡೆಯುತ್ತದೆ, ನೋಡುವವರು ಯಾರು? ಕೇಳುವವರು ಯಾರು? ಎಂದು ಆಲೋಚಿಸುವವರೇ ಅಧಿಕ. ನಿಜವಾದ ಪ್ರಾಮಾಣಿಕತೆಯೆಂದರೆ, ಯಾರೂ ನಮ್ಮನ್ನು ಗಮನಿಸದೇ ಇದ್ದರೂ ನಮ್ಮೊಳಗಿನ ಅಂತಃಸಾಕ್ಷಿಗೆ ನಾವು ಮಾಡುತ್ತಿರುವುದು ತಪ್ಪೋ ಸರಿಯೋ ಎನ್ನುವುದು ಗೊತ್ತಿರುತ್ತದೆ ಎನ್ನುವ ಪರಿವೆ ಇರಿಸಿಕೊಂಡು ನಮ್ಮ ಕಾಯಕ ಮಾಡುವುದು. ಇದೇ ವ್ಯಕ್ತಿತ್ವ ವಿಕಸನದ ಪಥದಲ್ಲಿ ನಾವು ತುಳಿಯಬೇಕಾದ ಸರಿಯಾದ ಪಥ ಹಾಗೂ ಬೆಳೆಸಿಕೊಳ್ಳಬೇಕಾದ ನಿಜವಾದ ನೈತಿಕ ಮೌಲ್ಯ.

# 41. ನಾವೇ ಬದಲಾವಣೆಯ ಬಿಂದುವಾಗೋಣ



ಕಡಲತೀರದ ಭಾರ್ಗವ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಶಿವರಾಮ ಕಾರಂತರು ಶಿಸ್ತು ಹಾಗೂ ನುಡಿದಂತೆ ನಡೆಯುವ ವ್ಯಕ್ತಿತ್ವದ ಪ್ರತೀಕವಾಗಿದ್ದರು. ಆಡು ಮುಟ್ಟದ ಸೊಪ್ಪಿಲ್ಲ ಎಂಬಂತೆ ಕಾರಂತರು ಕೃಷಿ ಮಾಡದ ಸಾಹಿತ್ಯ ಪ್ರಕಾರವೇ ಇಲ್ಲ. ಅವರ ಜೊತೆಗಿನ ಕ್ಷಣಕಾಲದ ಒಡನಾಟ ಕೂಡ ವಿದ್ಯುತ್ ಸಂಚಲನ ಮೂಡಿಸುವಂಥಾದ್ದು. ಇದಕ್ಕಾಗಿಯೇ ವಿದೇಶಗಳಲ್ಲಿ ವಿದ್ವಾಂಸರು 'ಹೌ ಈಸ್ ಯುವರ್ ಕರೆಂಟ್?' ಎಂಬುದಾಗಿ ಕಾರಂತರ ಕುರಿತು ವಿಚಾರಿಸುತ್ತಿದ್ದರು ಎಂಬ ಪ್ರತೀತಿಯೂ ಇದೆ. ಇದರ ಸುಂದರ ಅನುಭವ ನನಗೆ ನನ್ನ ಬಾಲ್ಯದಲ್ಲಾಗಿತ್ತು.

ನಾನು ಬಹುಶಃ ಏಳನೇ ತರಗತಿಯಲ್ಲಿದ್ದಾಗ ಕಾರಂತರ **'ಮರಳಿ ಮಣ್ಣಿಗೆ'** ಕಾದಂಬರಿಯನ್ನು ಓದಿ ಪ್ರಭಾವಿತನಾದೆ. ಆಗ ಕಾರಂತರಿಗೊಂದು ಪೋಸ್ಟ್ ಕಾರ್ಡಿನಲ್ಲಿ ಪತ್ರ ಬರೆದೆ. 'ನಿಮ್ಮ ಕಾದಂಬರಿ ಓದಿದೆ. ಬಹಳ ಚೆನ್ನಾಗಿದೆ' ಎಂಬುದಾಗಿ ನಾನು ನನ್ನ ಬಾಲ ಭಾಷೆಯಲ್ಲಿ ಬರೆದಿದ್ದ ಪುಟ್ಟ ಪತ್ರಕ್ಕೆ ಕೆಲವೇ ದಿನಗಳಲ್ಲಿ ಕಾರಂತರಿಂದ ಮರಳಿ ಉತ್ತರ ಬಂತು. ಎಲ್ಲಿಯ ಜ್ಞಾನಪೀಠ ಪುರಸ್ಕೃತ

ದಿಗ್ಗಜ ಸಾಹಿತಿ ಹಾಗೂ ಎಲ್ಲಿಯ ಏಳನೇ ತರಗತಿಯ ಬಾಲಕ? ಕಾರಂತರ ವಿಶೇಷವೆಂದರೆ ಇದೇ. ಅವರು ತಮಗೆ ಪ್ರತಿದಿನ ಸಾವಿರ ಪತ್ರ ಬಂದಿದ್ದರೂ, ಅದು ಯಾರದ್ದೇ ಆಗಿದ್ದರೂ, ಅಷ್ಟೂ ಪತ್ರಗಳಿಗೆ ತಮ್ಮದೇ ಆದ ಕೈಬರಹದಲ್ಲಿ ಉತ್ತರ ಬರೆದು ಕಳಿಸುತ್ತಿದ್ದರಂತೆ. ಇದು ಅವರ ಶಿಸ್ತು. ಈ ಶಿಸ್ತೇ ಅವರನ್ನು ಸಾಹಿತ್ಯ, ಸಾಂಸ್ಕೃತಿಕ ಲೋಕದ ಮೇರು ಶಿಖರವನ್ನಾಗಿಸಿದ್ದು. ಕಾರಂತರು ತಮ್ಮ ಪತ್ರದಲ್ಲಿ 'ನಾನು ಇಂಥ ದಿನ ಶೃಂಗೇರಿ ಸಮೀಪದ ಅಡ್ಡಗದ್ದೆಗೆ ಪರಿಸರ ಸಂರಕ್ಷಣೆ ಕುರಿತಾಗಿ ಒಂದು ಉಪನ್ಯಾಸ ನೀಡಲು ಬರುತ್ತಿದ್ದೇನೆ. ನೀನು ಬೇಕಾದರೆ ಅಲ್ಲಿ ನನ್ನನ್ನು ಭೇಟಿಯಾಗಬಹುದು' ಎಂಬುದಾಗಿ ಬರೆದಿದ್ದರು.

ಎಂತಹ ಸುವರ್ಣಾವಕಾಶ! ಆ ದಿನ ಅಲ್ಲಿಗೆ ತೆರಳಿದ ನಾನು ಪರಿಸರ ಕಾಳಜಿಯ ಕುರಿತು ಕಾರಂತರ ಅದ್ಭುತ ವಾಗ್ಝರಿಯನ್ನು ಆಲಿಸಿ, ಮೂಕ ವಿಸ್ಮಿತನಾದೆ. ನಂತರ ನಡೆದ ಸಂವಾದದ ಕಾರ್ಯಕ್ರಮದಲ್ಲಿ ಎಂದಿನಂತೆ ಮೊದಲ ಪ್ರಶ್ನೆ ಕೇಳಲು ನಾನು ಎದ್ದು ನಿಂತೆ. 'ಪರಿಸರ ಸಂರಕ್ಷಿಸುವಂತೆ, ಜನರ ಮನಸ್ಸನ್ನು ತಿದ್ದಬೇಕಾದರೆ ನಾವೇನು ಮಾಡಬೇಕು?' ಎಂಬುದಾಗಿತ್ತು, ನನ್ನ ಪ್ರಶ್ನೆ.

ಆಗ ಬಂತು ಕಾರಂತರಿಂದ ಚಾಟಿ ಏಟಿನಂಥ ಉತ್ತರ. 'ಜನರನ್ನು ತಿದ್ದಲು ನೀನು ಯಾರು? ಮೊದಲು ನಿನ್ನನ್ನು ನೀನು ತಿದ್ದಿಕೋ. ನಿನ್ನ ಮನೆಯ ಹಿತ್ತಿಲಲ್ಲಿ ಮೊದಲು ಗಿಡ ನೆಡು'. ಇನ್ನೊಬ್ಬರನ್ನು ನಾವು ಬದಲಾಯಿಸುತ್ತೇವೆ ಎಂಬ ಭ್ರಮೆಯ ಬದಲು ನಾವು ಬದಲಾದರೆ ಜಗತ್ತು ಬದಲಾಗುತ್ತದೆ ಎಂಬುದನ್ನು ನಾವು ಕಂಡುಕೊಳ್ಳಬೇಕು. ಅದಕ್ಕಾಗಿ ನಾವು ನುಡಿದಂತೆ ನಡೆಯಬೇಕು ಎನ್ನುವ ಅದ್ಭುತ ಸಂದೇಶ ಕಾರಂತರ ಈ ಮಾತಿನಲ್ಲಿತ್ತು. ಗಾಂಧೀಜಿಯವರು ಹೇಳಿದಂತೆ, **"You be the change to change the world".** ಈ ಜಗತ್ತು ಬದಲಾಗಬೇಕಾದರೆ ನಾವೇ ಬದಲಾವಣೆಯ ಬಿಂದುವಾಗಬೇಕು.

# 42. ಸಣ್ಣ ಸಣ್ಣ ಕ್ಷಣಗಳಲ್ಲಡಗಿವೆ, ಬದುಕಿನ ಅಮೃತ ಬಿಂದುಗಳು

ಒಮ್ಮೆ ಯೋಚಿಸಿ ನೋಡಿ, ಬಹಳಷ್ಟು ಸಂದರ್ಭಗಳಲ್ಲಿ ನಾವು ನಾಳೆಗಳ ಕುರಿತು ಚಿಂತಿಸುತ್ತಾ ಇಂದಿನ ಸುಂದರ ಕ್ಷಣಗಳಲ್ಲಿ ಜೀವಿಸುವುದೇ ಇಲ್ಲ. ಫೇಸ್ಬುಕ್ ನಲ್ಲಿ ಓದಿದ ಒಂದು ಸಂದೇಶದಂತೆ ನಾವು ಗಳಿಸಿದ ಹಣದಲ್ಲಿ ಶೇ.70ರಷ್ಟು ನಮ್ಮ ನಂತರ ನಮ್ಮ ಬ್ಯಾಂಕ್ ಖಾತೆಯಲ್ಲಿ ಹಾಗೆಯೇ ಉಳಿದಿರುತ್ತದೆ. ನಾವು ವಾಸಿಸುವ ದೊಡ್ಡ ಮನೆಯಲ್ಲಿ ಶೇ.70ರಷ್ಟನ್ನು ನಾವು ಉಪಯೋಗಿಸುವುದೇ ಇಲ್ಲ. ನಮ್ಮ ಕಪಾಟಿನಲ್ಲಿರುವ ಬಟ್ಟೆಗಳಲ್ಲಿ ಶೇ.70ರಷ್ಟನ್ನು ನಾವು ಧರಿಸುವುದೇ ಇಲ್ಲ. ನಮ್ಮ ದುಬಾರಿ ಫೋನಿನಲ್ಲಿರುವ ಶೇ.70ರಷ್ಟು ಸೌಲಭ್ಯಗಳನ್ನು ನಾವು ಬಳಸುವುದಿಲ್ಲ. ಇಲ್ಲೆಲ್ಲಾ ಶೇ.30 ಮಾತ್ರ ನಮ್ಮ ಅಗತ್ಯ. ಆದರೆ ನಮ್ಮ ಜೀವನದ ವ್ಯಂಗ್ಯವೆಂದರೆ ನಮ್ಮ ಬದುಕಿನ ಬಹುಭಾಗವನ್ನು ಆ ಶೇ.70 ಭಾಗದ ಗಳಿಕೆಗಾಗಿಯೇ ಮೀಸಲಿಡುತ್ತೇವೆ.

ಹಣಗಳಿಕೆಯಲ್ಲಿಯೇ ಬದುಕಿನ ಖುಷಿ ಅಡಗಿದೆ ಎಂಬ ಭಾವನೆ ಬಹುಪಾಲು ಮಂದಿಯಲ್ಲಿದೆ. ಆದರೆ ಬದುಕಿನ ನೆಮ್ಮದಿಯ ಕ್ಷಣಗಳು, ನಮ್ಮ ಅಂತರಂಗದ ಖಜಾನೆಯಲ್ಲಿಯೇ ಹೇರಳವಾಗಿ ಲಭ್ಯವಿವೆ. ಅವನ್ನು ಹೆಕ್ಕಿಕೊಳ್ಳಲು ಅನುಭವಿಸಲು ಒಳನೋಟ ಬೇಕಷ್ಟೇ. ನಿತ್ಯವೂ ಸಂಜೆ ನಿಮ್ಮ ಮನೆಯ ತಾರಸಿಯ ಮೇಲೆ ನಿಂತು ಆಗಸದತ್ತ ಒಮ್ಮೆ ಕಣ್ಣು ಹಾಯಿಸಿ. ಕೆಂಪನೆಯ ರಂಗು ಮೂಡಿಸುತ್ತಾ ಅಸ್ತಮಿಸುತ್ತಿರುವ ಸೂರ್ಯ, ಚದುರಿದ ಮೋಡಗಳು, ನೀಲಿ ನಭದಲ್ಲಿ ಸೃಷ್ಟಿಸಿರುವ ರಂಗು ರಂಗಿನ ಚಿತ್ತಾರ, ಕೊಡುವ ಖುಷಿಗೆ ನೀವು ಒಂದು ಪೈಸೆ ಕೂಡ ಖರ್ಚು ಮಾಡಬೇಕಾಗಿಲ್ಲ. ಕಚೇರಿಯಿಂದ ಮನೆಗೆ ಮರಳಿದಾಗ ನಿಮ್ಮ ಬರುವಿಕೆಗಾಗಿ ಕಾಯುತ್ತಿರುವ ನಿಮ್ಮ ಪುಟ್ಟ ಕಂದಮ್ಮ ಬೀರುವ ಅದ್ಭುತ ನಗುವಿಗೆ ಬೆಲೆಕಟ್ಟಲು ಸಾಧ್ಯವೇ? ದೂರದಲ್ಲಿರುವ ನಿಮ್ಮ ಅಮ್ಮನಿಗೆ ಒಮ್ಮೆ ಫೋನ್ ಮಾಡಿ "ಸುಮ್ಮನೆ ಫೋನ್ ಮಾಡ್ದೆ ಅಮ್ಮ.. ನಿನ್ನತ್ರ ಮಾತಾಡಬೇಕು

ಅಂತ ಅನ್ನಿಸ್ತು" ಎಂದು ಹೇಳಿದಾಗ ಆ ಹಿರಿಯ ಜೀವಕ್ಕಾಗುವ ಖುಷಿ ನಿಮ್ಮ ಬ್ಯಾಂಕ್ ಬ್ಯಾಲೆನ್ಸಿನ ಅಂಕೆಗಳಿಗಿಂತ ಎಷ್ಟೋ ಮಿಗಿಲಾದದ್ದು. ನಿಮ್ಮ ಮಡದಿಯ ರುಚಿಯಾದ ಅಡುಗೆಗೆ ನೀವು "ಇವತ್ತಿನ ಅಡುಗೆ ತುಂಬಾ ಚೆನ್ನಾಗಿದೆ ಕಣೇ" ಎಂದಾಗ ಆಕೆಯ ಕಣ್ಣಲ್ಲಿ ಮಿಂಚುವ ಖುಷಿಗೆ ನೀವು ದುಬಾರಿ ಬಿಲ್ ತೆರಬೇಕಾಗಿಲ್ಲ. ನಾವು ಕಂಡಿರದ ನಾಳೆಗಳ ಕುರಿತು ಕೊರಗುವುದರ ಬದಲು, ಇಂದಿನ ಸಣ್ಣ ಸಣ್ಣ ಕ್ಷಣಗಳಲ್ಲಿ ಬದುಕುತ್ತಾ ಅವುಗಳಲ್ಲಿನ ಅಮೃತ ಬಿಂದುಗಳನ್ನು ಸವಿದರೆ ಬದುಕಿನ ನಿಜವಾದ ಸಾರದ ಅರಿವು ನಮಗಾಗುತ್ತದೆ.



# 43. ಅತಿರೇಕದ ಪ್ರತಿಕ್ರಿಯೆ ಅಪಾಯಕಾರಿ

ಬಹುದೊಡ್ಡ ಸಂಸ್ಥೆಯ ಮುಖ್ಯಸ್ಥನೊಬ್ಬ ಕೋಪದಲ್ಲಿ ದೂರ್ವಾಸಮುನಿ ಎಂದೇ ಹೆಸರಾಗಿದ್ದ. ಜೊತೆಗೆ ತಾನೊಬ್ಬನೇ ಸರಿಯಾಗಿ ಕೆಲಸ ಮಾಡುವವನು, ತನ್ನ ಕೈಕೆಳಗಿನವರೆಲ್ಲರೂ ಸೋಮಾರಿಗಳು, ಏನೂ ಕೆಲಸ ಮಾಡದೆ ಸುಮ್ಮನೆ ಸಂಬಳ ತೆಗೆದುಕೊಳ್ಳುತ್ತಾರೆ ಎಂಬ ಭಾವ ಅವನಲ್ಲಿ. ಹೀಗಾಗಿ ಯಾವುದೇ ಸನ್ನಿವೇಶವಿರಲಿ ಅದಕ್ಕೆ ಅವನು ಅತಿಯಾಗಿ ಪ್ರತಿಕ್ರಿಯಿಸುತ್ತಿದ್ದ. ವೃಥಾ ತನ್ನ ಸಹೋದ್ಯೋಗಿಗಳ ಮೇಲೆ ಕಂಡಾಪಟ್ಟೆ ರೇಗುತ್ತಿದ್ದ. ಇಂಗ್ಲೀಷಿನಲ್ಲಿ ಇದಕ್ಕೆ **over reacting to the situation** ಎನ್ನುತ್ತಾರೆ. ಕಚೇರಿಯ ಸಮಯದಲ್ಲಿ ಕಾರಿಡಾರಿನಲ್ಲಿ ಯಾರಾದರೂ ಓಡಾಡುತ್ತಿದ್ದರಂತೂ ಇವನಿಗೆ ಕೆಂಡದಂಥಾ ಕೋಪ. ಆಗಾಗ ಏಕಾಏಕಿ ತನ್ನ ಚೇಂಬರಿನಿಂದ ಹೊರಗೆ ಬಂದು ಆ ರೀತಿಯ ವ್ಯಕ್ತಿಗಳು ಸಿಕ್ಕಿದರೆ ಅವರಿಗೆ ಶಿಕ್ಷೆ ಕೊಡುವುದು ಅವನ ಅಭ್ಯಾಸ.

ಒಮ್ಮೆ ಹೀಗಾಯಿತು.. ಈ ದೂರ್ವಾಸಮುನಿ ತನ್ನ ಚೇಂಬರಿನಿಂದ ಹೊರಗೆ ಬಂದ. ಅಲ್ಲಿ ನೋಡಿದ್ರೆ ಒಬ್ಬ ವ್ಯಕ್ತಿ ಕಾರಿಡಾರಿನಲ್ಲಿ ನಡೆದು ಬರುತ್ತಿದ್ದಾನೆ. ಇವನಿಗೆ ಇನ್ನಿಲ್ಲದ ಕೋಪ ಬಂದಿತು. ತಕ್ಷಣ ಅವನನ್ನು ಹತ್ತಿರಕ್ಕೆ ಕರೆದು 'ಏಯ್ ನಾನು ಹೇಳಿರಲಿಲ್ಲವೇ ಕಚೇರಿ ಸಮಯದಲ್ಲಿ ಸುಮ್ಮನೆ ಹೊರಗೆ ಅಡ್ಡಾಡಬಾರದೆಂದು? ಸೋಂಬೇರಿ.. ಹೇಳು ನಿನ್ನ ಸಂಬಳವೆಷ್ಟು?' ಎಂದು ಗುಡುಗಿದ.

ಆ ವ್ಯಕ್ತಿ '10,000 ಸಾರ್' ಎಂದ ತಕ್ಷಣ, ನಮ್ಮ ದೂರ್ವಾಸ 'ನಿನ್ನನ್ನು ಈ ಕ್ಷಣದಿಂದಲೇ ಕೆಲಸದಿಂದ ತೆಗೆದುಹಾಕುತ್ತಿದ್ದೇನೆ. ನಮ್ಮ ಕಂಪನಿಯ ನಿಯಮದಂತೆ ನಿನಗೆ ಮೂರು ತಿಂಗಳ ಸಂಬಳ ಕೊಡ್ತಾ ಇದ್ದೇನೆ. ತಗೋ ಈ 30,000. ತಕ್ಷಣ ಇಲ್ಲಿಂದ ಹೊರಡು' ಎಂದು ಆದೇಶಿಸಿ, ಮೂವತ್ತು ಸಾವಿರ ರೂಪಾಯಿಗಳನ್ನು ಅವನ ಕೈಲ್ಲಿತ್ತ.

ಆ ವ್ಯಕ್ತಿ ಮುಗುಳ್ನಗುತ್ತಲೇ ಅದನ್ನು ಸ್ವೀಕರಿಸಿ ಅಲ್ಲಿಂದ ಹೊರಟ. ತಕ್ಷಣ ನಮ್ಮ ದೂರ್ವಾಸ ತನ್ನ ಸೆಕ್ರೆಟರಿಯ ಬಳಿ 'ಈ ವ್ಯಕ್ತಿ ಯಾವ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ?' ಎಂದು ಪ್ರಶ್ನಿಸಿದ. ಆಗ ಸೆಕ್ರೆಟರಿ "ಯಾವ ವಿಭಾಗದಲ್ಲೂ ಇಲ್ಲ ಸಾರ್.. ಅಂದ ಹಾಗೆ ಅವನು ನಮ್ಮ ಕಂಪನಿಯ ಕೆಲಸಗಾರನೇ ಅಲ್ಲ. ಅವನೊಬ್ಬ ಕೊರಿಯರ್ ಬಾಯ್. ಅದನ್ನು ನಿಮಗೆ ಹೇಳೋಣವೆಂದು ನಾನು ಬಾಯಿ ತೆರೆಯುವುದರೊಳಗೆ ನೀವು ನಿಮ್ಮ ಕೆಲಸ ಮುಗಿಸಿ ಬಿಟ್ಟಿದ್ದಿರಿ" ಎಂದಾಗ ಕಚೇರಿ ಮುಖ್ಯಸ್ಥ ಪೆಚ್ಚಾದ. ಈ ಥರದ ವ್ಯಕ್ತಿಗಳನ್ನು ನಾವು ನಮ್ಮ ಬದುಕಿನಲ್ಲಿ ನೋಡುತ್ತಿರುತ್ತೇವೆ. ಸಂದರ್ಭ ಏನೆಂದು ಅರ್ಥ ಮಾಡಿಕೊಳ್ಳದೆ ತಾಳ್ಮೆ ಕಳೆದುಕೊಂಡು ಅತಿರೇಕದಿಂದ ವರ್ತಿಸಿದರೆ ಇಂತಹ ಸನ್ನಿವೇಶ ಕಟ್ಟಿಟ್ಟ ಬುತ್ತಿ. ಅದಕ್ಕೇ "ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು" ಎನ್ನುವ ಗಾದೆ ಮಾತಿರುವುದು. ಕೆಲವೊಮ್ಮೆ ನಾವು ಕೇಳಿದ್ದು ನೋಡಿದ್ದು ಎಲ್ಲವೂ ಕೂಡ ಸುಳ್ಳಾಗಿರಬಹುದು. ನಿಧಾನಿಸಿ ಯೋಚಿಸಿದಾಗ ಮಾತ್ರ ನಿಜ ಏನೆಂಬುದು ಅರ್ಥವಾಗುತ್ತದೆ. ಹಾಗಾಗಿ ಯಾವುದೇ ಸನ್ನಿವೇಶಕ್ಕೆ ಅತಿರೇಕದ ಪ್ರತಿಕ್ರಿಯೆ ಇಂದಿಗೂ ಒಳ್ಳೆಯದಲ್ಲ.

# 44. ಭಯವೆಂಬ ದೆವ್ವವನ್ನು ಮನದಿಂದ ಹೊಡೆದೋಡಿಸಿ



ಇದೊಂದು ಮುಲ್ಲಾ ನಸುರುದ್ದೀನನ ಪ್ರಸಿದ್ಧ ಹಾಸ್ಯಕತೆ. ಒಮ್ಮೆ ತೀವ್ರ ದುಃಖಿತನಾಗಿದ್ದ ವ್ಯಕ್ತಿಯೊಬ್ಬ ಮುಲ್ಲಾನ ಬಳಿ ಬಂದ. ಅವನ ಸಮಸ್ಯೆ ತೀರಾ ವಿಚಿತ್ರವಾಗಿತ್ತು. ಅದೇನೆಂದರೆ ಅವನಿಗೆ ತನ್ನ ಮಂಚದ ಕೆಳಗೆ ದೆವ್ವವೊಂದು ಅಡಗಿ ಕುಳಿತಿದೆ ಎನ್ನುವ ಭಯ ಆವರಿಸಿಬಿಟ್ಟಿತ್ತು.

ಅದನ್ನು ಕೇಳಿದ ಮುಲ್ಲಾ 'ನೀನು ಫಕೀರನ ಬಳಿ ಹೋಗು. ಅವನು ತನ್ನ ನವಿಲುಗರಿ ಅಲ್ಲಾಡಿಸಿ ಹಾಗೂ ಧೂಪದ ಹೊಗೆ ಹಾಕಿ ನಿನ್ನ ಮಂಚದ ಕೆಳಗಿರುವ ದೆವ್ವವನ್ನು ಓಡಿಸುತ್ತಾನೆ' ಎಂದು ಸಲಹೆ ನೀಡಿದ. ಆಗ ಆ ವ್ಯಕ್ತಿ 'ನಾನು ಫಕೀರರ ಬಳಿ ಹೋಗಿದ್ದೆ ಸ್ವಾಮಿ. ಆದರೆ ಅವರು ತುಂಬಾ ದುಬಾರಿ. ಈ ಕೆಲಸಕ್ಕೆ ನೂರು ದಿನಾರು ಸಂಭಾವನೆ ಕೇಳುತ್ತಿದ್ದಾರೆ, ನಾನು ಬಡವ ಅಷ್ಟೊಂದು ಕೊಡಲಾರೆ' ಎಂದು ತನ್ನ ಅಳಲನ್ನು ತೋಡಿಕೊಂಡ. ಆಗ ಮುಲ್ಲಾ 'ನಾನೇನು ಉಚಿತವಾಗಿ ಸಲಹೆ ನೀಡುವುದಿಲ್ಲ. ಆದರೆ ನೀನು ಬಡವನಾಗಿದ್ದರಿಂದ ಮೊದಲು ನನಗೆ ಬರೀ ಹತ್ತು ದಿನಾರ್ ಕೊಡು. ಆಗ ನಾನು ನನ್ನ ಸಲಹೆ ನೀಡುತ್ತೇನೆ' ಎಂದ. ಆ ವ್ಯಕ್ತಿ ತಕ್ಷಣವೇ ತನ್ನ ಜೇಬಿನಿಂದ ಹತ್ತು ದಿನಾರ್ ತೆಗೆದು ಮುಲ್ಲಾನಿಗೆ ನೀಡಿದ. ಅದನ್ನು ಜೇಬಿಗಿಳಿಸಿದ ಮುಲ್ಲಾ, ಆ ವ್ಯಕ್ತಿಯನ್ನು ಬಳಿಗೆ ಕರೆದು 'ಒಂದು ಕೆಲಸ ಮಾಡು,

ನಿನ್ನ ಮಂಚದ ನಾಲ್ಕು ಕಾಲುಗಳನ್ನು ಕತ್ತರಿಸಿ ಬಿಡು. ಆಗ ದೆವ್ವಕ್ಕೆ ಅಡಗಿಕೊಳ್ಳಲು ಜಾಗವೇ ಸಿಗುವುದಿಲ್ಲ. ಆಗ ನೀನು ಅದರ ಕಾಟದಿಂದ ಖಂಡಿತ ಪಾರಾಗುತ್ತೀ' ಎಂದು ಹೇಳಿದ.

ನಗು ತರಿಸುವ ಈ ಹಾಸ್ಯ ಚಟಾಕಿಯಲ್ಲಿ ಒಂದು ಒಳ್ಳೆಯ ಸಂದೇಶವಿದೆ. ಎಲ್ಲರಿಗೂ ಈ ಭಯವೆಂಬ ದೆವ್ವ ಒಂದಲ್ಲ ಒಂದು ರೀತಿಯಲ್ಲಿ ಕಾಟ ಕೊಡುತ್ತದೆ. ಈ ದೆವ್ವಕ್ಕೆ ಮದ್ದೆಂದರೆ ಎಂದರೆ ಭಯದ ನಿರ್ಮೂಲನೆ. ನಮ್ಮ ಮನಸ್ಸಿನಲ್ಲಿ ಭಯಕ್ಕೆ ಜಾಗ ನೀಡದಿದ್ದರೆ ನಮಗೆ ಭಯಪಡುವ ಸನ್ನಿವೇಶವೇ ಎದುರಾಗುವುದಿಲ್ಲ. ಯಾವುದೇ ಕೆಲಸವನ್ನು ಮಾಡುವ ಮೊದಲು ನಮ್ಮಿಂದ ಅದು ಸಾಧ್ಯವಾಗದಿದ್ದರೆ ಅಥವಾ ನಾವು ಆ ಪ್ರಯತ್ನದಲ್ಲಿ ಸೋತುಬಿಟ್ಟರೆ ಎಂಬಿತ್ಯಾದಿ ಭಯಗಳೇ ನಮ್ಮ ಕೆಲಸಕ್ಕೆ ಅಡ್ಡಗಾಲು ಹಾಕುತ್ತವೆ. ಆಗೋದು ಆಗಲಿ ಮಾಡುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿಯೇ ಬಿಡೋಣ ಎಂದು ಆಲೋಚಿಸಿದಾಗ ಪೂರ್ವಗ್ರಹಪೀಡಿತ ಭಯಗಳು ನಮ್ಮಿಂದ ಸಹಜವಾಗಿ ದೂರಾಗುತ್ತವೆ.

ಎಷ್ಟೋಸಾರಿ ಮುಲ್ಲಾನ ಬಳಿಬಂದ ವ್ಯಕ್ತಿಯನ್ನು ಕಾಡಿದ ಮಂಚದ ಕೆಳಗಿನ ಇಲ್ಲದ ದೆವ್ವಗಳು ನಮ್ಮನ್ನು ಕೂಡಾ ಕಾಡುತ್ತಿರುತ್ತವೆ. ಇಂತಹ ಭಯದ ದೆವ್ವಗಳನ್ನು ಮನದಿಂದ ಮೊದಲು ಹೊಡೆದೋಡಿಸುವುದೇ ಯಶಸ್ಸಿನ ಮೊದಲ ಹೆಜ್ಜೆ.

# 45. ವಯಸ್ಸೆಂಬುದು ಬರಿಯ ಸಂಖ್ಯೆಯಷ್ಟೇ..



ನಿಮ್ಮ ವಯಸ್ಸೆಷ್ಟೆಂದು ಇಂಗ್ಲಿಷಿನಲ್ಲಿ ಕೇಳುವುದಕ್ಕೆ "How old are you?" ಎಂದು ಪ್ರಶ್ನಿಸುತ್ತಾರೆ. ನಮ್ಮ ಕರ್ನಾಟಕದ ಶ್ರೇಷ್ಠ ಶಿಕ್ಷಣ ತಜ್ಞ ಎಚ್. ನರಸಿಂಹಯ್ಯನವರನ್ನು ಈ ರೀತಿ ಪ್ರಶ್ನಿಸಿದಾಗ "I am 75 years young" ಎಂದು ಉತ್ತರಿಸುತ್ತಿದ್ದರಂತೆ. ಅದೇ ರೀತಿ ಕನ್ನಡದ ಜ್ಞಾನಪೀಠ ಪ್ರಶಸ್ತಿ ವಿಜೇತ ಸಾಹಿತಿ ಶಿವರಾಮ ಕಾರಂತರು, ತಮ್ಮ ೯೦ನೆಯ ವಯಸ್ಸಿನಲ್ಲೂ ಗೆಜ್ಜೆ ಕಟ್ಟಿ ಯಕ್ಷಗಾನ ಮಾಡುತ್ತಿದ್ದರು. ಆದರೆ ಇಂದಿನ ಬಹುಪಾಲು ಯುವಕರು 35 ವರ್ಷಕ್ಕೇ Old ಆಗಿ ಬಿಟ್ಟಿರುತ್ತಾರೆ!

ವಯಸ್ಸೆಂಬುದು ಕೇವಲ ಸಂಖ್ಯೆ ಮಾತ್ರ. ಅದು ದೇಹಕ್ಕೆ ಆಗುತ್ತದೆಯೇ ವಿನಃ ಮನಸ್ಸಿಗಲ್ಲ. ಎಷ್ಟೇ ವಯಸ್ಸಾದರೂ ನಮ್ಮಲ್ಲಿ ಜೀವನೋತ್ಸಾಹವಿದ್ದರೆ ಸದಾ ಯುವಕರಾಗಿರಲು ಸಾಧ್ಯ. ಇದನ್ನು ಮಾಡಿ ತೋರಿಸಿದ ಹಲವು ಸಾಧಕರ ಉದಾಹರಣೆಗಳು ನಮ್ಮ ನಡುವೆ ಇವೆ.

ಇತ್ತೀಚೆಗಷ್ಟೇ ನಿವೃತ್ತರಾದ ನಮ್ಮ ನಾಡಿನ ಹೆಮ್ಮೆಯ ಟೆನ್ನಿಸ್ ಪಟು, ರೋಹನ್ ಬೋಪಣ್ಣ ಇದಕ್ಕೆ ಒಳ್ಳೆಯ ಉದಾಹರಣೆ. ತಮ್ಮ 43ನೇ ವಯಸ್ಸಿನಲ್ಲಿ ಆಸ್ಟ್ರೇಲಿಯನ್ ಓಪನ್ ಟೆನಿಸ್ ಡಬಲ್ಸ್ ಚಾಂಪಿಯನ್ ಶಿಪ್ ಗೆದ್ದ ಹೆಮ್ಮೆಯ ಕನ್ನಡಿಗ ರೋಹನ್ ಬೋಪಣ್ಣ, ಗ್ರ್ಯಾಂಡ್ ಸ್ಲಾಮ್ ಪ್ರಶಸ್ತಿ ಗೆದ್ದ ಅತ್ಯಂತ ಹಿರಿಯ ಆಟಗಾರ ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ. ಪಾಕಿಸ್ತಾನದ ಅಸೀಂ ಅಲ್ ಖುರೇಷಿ ಜೊತೆಗೆ ರೋಹನ್ ಬೋಪಣ್ಣ 2013 ಹಾಗೂ 2023ರಲ್ಲಿ ಅಮೆರಿಕನ್ ಓಪನ್ ಟೆನ್ನಿಸ್ಸಿನ ಪುರುಷರ ಡಬಲ್ಸ್ ಫೈನಲ್ಸ್ ತಲುಪಿದ್ದರು. ಈ ಜೋಡಿ 'ಇಂಡೋ-ಪಾಕ್ ಎಕ್ಸ್ ಪ್ರೆಸ್' ಎಂದೇ ಪ್ರಸಿದ್ಧವಾಗಿ, ವಿಷಮ ಸಂಬಂಧಹೊಂದಿರುವ ಈ ಎರಡು ದೇಶಗಳ ಕ್ರೀಡಾಬಾಂಧವ್ಯವನ್ನು ಬೆಸೆಯುವ ಕೆಲಸವನ್ನು ಕೂಡ ಮಾಡಿತ್ತು. ಐದು ತಿಂಗಳು ಒಂದು ಪಂದ್ಯವನ್ನೂ ಗೆಲ್ಲದೇ ನನಗೆ ವಯಸ್ಸಾಗಿದೆ ಇನ್ನು ಆಟ ಸಾಕು ಎಂದು ನಿವೃತ್ತಿಯ ಆಲೋಚನೆ ಮಾಡಿದ್ದ ಬೋಪಣ್ಣ, ತನ್ನ ವೃತ್ತಿ ಜೀವನದಲ್ಲಿ ಒಂದಾದರೂ ಗ್ರ್ಯಾಂಡ್ ಸ್ಲಾಮ್ ಗೆಲ್ಲಲೇ ಬೇಕು ಎನ್ನುವ ತನ್ನ ಕನಸನ್ನು ಈಡೇರಿಸಿಕೊಳ್ಳಲೇಬೇಕು ಎನ್ನುವ ಛಲದಿಂದ ನಿವೃತ್ತಿಯ ವಿಚಾರ ಬಿಟ್ಟು, ತನ್ನ ವಯಸ್ಸಿಗೇ ಸವಾಲು ಹಾಕಿಕೊಂಡು ನಿರಂತರ ಅಭ್ಯಾಸದಲ್ಲಿ ತೊಡಗಿದರು.

ಬಹಳ ಹೆಚ್ಚಿನ ದೈಹಿಕ ಶ್ರಮ ಬೇಡುವ ಟೆನ್ನಿಸ್ಸಿನಂತಹ ಕ್ರೀಡೆಯಲ್ಲಿ ವಯಸ್ಸು 35 ದಾಟಿದ ನಂತರ ಸಕ್ರಿಯವಾಗಿ ಆಟವಾಡುವುದು ಸುಲಭದ ಕೆಲಸವಲ್ಲ. 'ನಾನು ನನ್ನ ಆಟದ 43ನೇ ಹಂತದಲ್ಲಿದ್ದೇನೆ, 43ನೇ ವಯಸ್ಸಿನಲ್ಲಲ್ಲ' ಎಂದು ಹೇಳುವ ಮೂಲಕ ರೋಹನ್ ಬೋಪಣ್ಣ, ನಮ್ಮನ್ನು ನಾವು ನಂಬುವ ಆತ್ಮವಿಶ್ವಾಸವೇ ಯಶಸ್ಸೆಂಬ ರೈಲಿನ ಎಂಜಿನ್ ಎಂಬುದನ್ನು ಸಾಬೀತುಪಡಿಸಿದ್ದಾರೆ.

# 46. ನಿರಂತರ ಅಭ್ಯಾಸವೇ ಪರಿಪೂರ್ಣತೆಯ ಏಕೈಕ ಮಾರ್ಗ



ನನ್ನ ತಂದೆ ದಿವಂಗತ ಎಚ್ ಎಲ್ ಸುಬ್ರಹ್ಮಣ್ಯ, ಶೃಂಗೇರಿಯ ಜೆಸಿಬಿಎಂ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದರು. **'ಎಚ್ ಎಲ್ ಎಸ್'** ಎಂದೇ ಪ್ರಖ್ಯಾತರಾಗಿದ್ದ ಅವರು ಪ್ರಖರ ವಾಗ್ಮಿ, ಅದ್ಭುತ ನಾಟಕ ಕಲಾವಿದ ಹಾಗೂ ನಿರ್ದೇಶಕರಾಗಿದ್ದರು. ಅವರ ಪಾಠವನ್ನು ಕೇಳಲು ಬೇರೆ ಭಾಷೆಯನ್ನು ಆಯ್ದುಕೊಂಡ ವಿದ್ಯಾರ್ಥಿಗಳು ಸಹಾ ಅವರ ತರಗತಿಗೆ ಬಂದು ಕೂರುತ್ತಿದ್ದರು. ರನ್ನನ ಗದಾಯುದ್ಧದಲ್ಲಿ ಸ್ವತಃ ತಾವೇ ದುರ್ಯೋಧನನಾಗುತ್ತಿದ್ದ, ಪಂಪ ಭಾರತದ ಪಾಠ ಮಾಡುವಾಗ ತಾವೇ ಕರ್ಣನಾಗುತ್ತಿದ್ದ ಅನನ್ಯ ತನ್ಮಯತೆ ಅವರ ಪಾಠದಲ್ಲಿರುತ್ತಿತ್ತು. ತರಗತಿ ಆರಂಭವಾಯಿತು ಎಂದರೆ ಪುಂಖಾನುಪುಂಖವಾಗಿ ಹರಿದು ಬರುತ್ತಿದ್ದ ಅವರ ಆಕರ್ಷಕ ಬೋಧನೆ, ಹಲವು ಉದಾಹರಣೆ ಹಾಗೂ ನಿದರ್ಶನಗಳ ಜೊತೆಗೆ ಶೃಂಗೇರಿಯ ತುಂಗಾ ನದಿಯಂತೆ ನಿರರ್ಗಳವಾಗಿ ಪ್ರವಹಿಸುತ್ತಿತ್ತು.

ಇಂತಹ ನನ್ನ ತಂದೆ ಪ್ರತಿನಿತ್ಯವೂ ತರಗತಿಗೆ ಹಿಂದಿನ ದಿನ ಪೂರ್ವತಯಾರಿಯನ್ನು ತಪ್ಪದೇ ಮಾಡಿಕೊಳ್ಳುತ್ತಿದ್ದರು. ಸತತವಾಗಿ ಹಲವಾರು

ವರ್ಷಗಳಿಂದ ಇದೇ ಕೆಲಸ ಮಾಡುತ್ತಿದ್ದರೂ ಈ ಪ್ರಮಾಣದ ಪೂರ್ವತಯಾರಿ ಏಕೆ ಬೇಕು ಎಂದು ನನಗೆ ಆಗಾಗ ಅನಿಸುತ್ತಿತ್ತು. ಒಮ್ಮೆ ಪ್ರಥಮ ಪಿಯುಸಿಯ ಪ್ರಥಮ ತರಗತಿಗೆ ತಯಾರಿ ಮಾಡುತ್ತಾ ಕುಳಿತಿದ್ದ ನನ್ನ ತಂದೆಯ ಬಳಿ ನಾನು ಕೇಳಿದೆ, 'ಅಪ್ಪಾ, ಸತತ ಮೂರು ದಶಕಗಳಿಂದ ಪಾಠ ಮಾಡುತ್ತಿರುವ ನಿಮಗೆ ಪ್ರಥಮ ಪಿಯುಸಿಯ ಮಕ್ಕಳ ಮೊದಲನೇ ತರಗತಿಗೆ ತಯಾರಿ ಮಾಡಿಕೊಳ್ಳುವ ಅಗತ್ಯವಿದೆಯೇ?' ಆಗ ಅವರು ನೀಡಿದ ಉತ್ತರ ಬದುಕಿಗೆ ಬಹುದೊಡ್ಡ ಸಂದೇಶವನ್ನು ನೀಡುವಂತಿತ್ತು.

"ನಾವು ಯಾವುದೇ ಕೆಲಸವಾದರೂ ಅದು ಎಷ್ಟೇ ಚಿಕ್ಕದಾಗಿರಲಿ, ಪೂರ್ವ ತಯಾರಿಲ್ಲದೇ ಎಂದಿಗೂ ಮಾಡಬಾರದು. ನನ್ನ ಎದುರು ಕುಳಿತಿರುವ ವ್ಯಕ್ತಿಗಳು ವಿದ್ವಾಂಸರೇ ಇರಬಹುದು ಅಥವಾ ಈಗ ತಾನೇ ಹೈಸ್ಕೂಲಿನಿಂದ ಪಾಸ್ ಆಗಿ ಬಂದ ಮಕ್ಕಳೇ ಇರಬಹುದು. ನಾನು ನನ್ನ ಕೆಲಸವನ್ನು ಅತ್ಯಂತ ಪ್ರಾಮಾಣಿಕವಾಗಿ ಹಾಗೂ ಪರಿಣಾಮಕಾರಿಯಾಗಿ ಮಾಡಬೇಕು ಇದಕ್ಕೆ ಪೂರ್ವ ತಯಾರಿ ಅತ್ಯಗತ್ಯ" ಎಂಬ ಅವರ ಉತ್ತರ ನಿರಂತರ ಅಭ್ಯಾಸದ ಮಹತ್ವಕ್ಕೆ ಕನ್ನಡಿ ಹಿಡಿದಂತಿತ್ತು.

ಯಾವುದೇ ಕೆಲಸವನ್ನಾಗಲೀ ಸರಿಯಾದ ಪೂರ್ವಸಿದ್ಧತೆಯೊಂದಿಗೆ ಮಾಡಿದಾಗ ಮಾತ್ರ ನಾವು ಆ ಕೆಲಸಕ್ಕೆ ನ್ಯಾಯ ಒದಗಿಸಲು ಸಾಧ್ಯ. "ನನಗೆ ಕಸ ಗುಡಿಸುವ ಕೆಲಸ ಸಿಕ್ಕರೂ ನಾನು ಪ್ರಪಂಚದ ಅತ್ಯುತ್ತಮ ಕಸ ಗುಡಿಸುವವನಾಗಬೇಕು ಎನ್ನುವ ರೀತಿಯಲ್ಲಿ ಕೆಲಸ ಮಾಡಬೇಕು" ಎನ್ನುತ್ತಾರೆ, ಮಹಾತ್ಮ ಗಾಂಧೀಜಿ. ನಮ್ಮ ಕೆಲಸದ ಮೇಲೆ ಈ ರೀತಿಯ ತನ್ಮಯತೆ ಮೂಡುವುದು ಅದಕ್ಕೆ ಸೂಕ್ತವಾದ ಪೂರ್ವಸಿದ್ಧತೆ ಮಾಡಿಕೊಳ್ಳುವುದರಿಂದ. **"Practice makes man Perfect"** ಎಂಬ ಮಾತಿನಂತೆ ನಿರಂತರ ಅಭ್ಯಾಸವೇ ಪರಿಪೂರ್ಣತೆಯ ಏಕೈಕ ಮಾರ್ಗ.

# 47. ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ



ಒಮ್ಮೆ ಮುಲ್ಲಾ ನಸುರುದ್ದೀನ್ ಮಗನ ಜೊತೆ, ತನ್ನ ನೆಚ್ಚಿನ ಕತ್ತೆಯೊಂದಿಗೆ ನಡೆದುಕೊಂಡು ಹೋಗುತ್ತಿದ್ದ. ಆಗ ಎದುರಿಗೆ ಸಿಕ್ಕ ಜನರ ಗುಂಪೊಂದು 'ಅಯ್ಯೋ, ಇಷ್ಟು ದಷ್ಟಪುಷ್ಟವಾದ ಕತ್ತೆ ಇದ್ದರೂ ಈ ಮನುಷ್ಯ ನಡ್ಕೊಂಡು ಹೋಗ್ತಾ ಇದ್ದಾನಲ್ಲ, ಎಂಥಾ ದಡ್ಡ ಇವನು' ಎಂದು ಮಾತನಾಡಿಕೊಂಡರು. ಇದನ್ನಾಲಿಸಿದ ಮುಲ್ಲಾ ಕತ್ತೆಯನ್ನೇರಿ ಕುಳಿತ. ಸ್ವಲ್ಪ ಮುಂದೆ ಹೋಗುತ್ತಿದ್ದಂತೆ ಎದುರಾದ ಇನ್ನೊಂದು ಜನರ ಗುಂಪು, 'ಚಿಕ್ಕ ಹುಡುಗನನ್ನು ನಡೆಸಿಕೊಂಡು ಹೋಗುತ್ತಾ, ಈ ಮನುಷ್ಯ ಸವಾರಿ ಮಾಡ್ತಾ ಇದ್ದಾನಲ್ಲ ಎಂಥಾ ವ್ಯಕ್ತಿ ಈತ?' ಎಂದು ಮಾತನಾಡಿಕೊಂಡರು. ಮುಲ್ಲಾ ತಾನು ಕತ್ತೆಯಿಂದ ಕೆಳಗಿಳಿದು ತನ್ನ ಮಗನನ್ನು ಕೂರಿಸಿದ. ಮತ್ತೊಂದು ಜನರ ಗುಂಪು ಎದುರಾಯಿತು. 'ಇವನೆಂಥ ದಡ್ಡ.. ಇಷ್ಟು ಗಟ್ಟಿಯಾಗಿರುವ ಕತ್ತೆಯ ಮೇಲೆ ಆ ಪುಟ್ಟ ಹುಡುಗನೊಬ್ಬನನ್ನೇ ಕೂರಿಸಿದ್ದಾನಲ್ಲ, ಈತನೂ ಮೇಲೇರಬಹುದಿತ್ತಲ್ಲಾ?' ಎಂಬುದಾಗಿ ಮಾತನಾಡಿಕೊಂಡರು. ಇದಕ್ಕೂ ಕಿವಿಗೊಟ್ಟ ಮುಲ್ಲಾ, ಮಗನ ಜೊತೆಗೆ ತಾನೂ ಕತ್ತೆ ಏರಿ ಕುಳಿತ. ಆಗ ಮತ್ತೊಂದು ಗುಂಪು ಎದುರಾಯಿತು. 'ಅಬ್ಬಾ ಇವನೆಂತಹ ಕ್ರೂರಿ, ಈ ಬಡಪಾಯಿ ಕತ್ತೆ ಮೇಲೆ ತನ್ನ ಮಗನೂ

ಸಾಲದೆಂಬಂತೆ ತಾನೂ ಏರಿ ಸವಾರಿ ಮಾಡ್ತಾ ಇದ್ದಾನಲ್ಲ? ಇವನ ಮೇಲೆ ಪ್ರಾಣಿ ದಯಾಸಂಘಕ್ಕೆ ಖಂಡಿತ ದೂರ ಕೊಡಬೇಕು' ಎಂದು ಆ ಜನರು ಮಾತನಾಡಿಕೊಂಡರು! ಇದನ್ನಾಲಿಸಿದ ಮುಲ್ಲಾ ಕತ್ತೆಯಿಂದ ಕೆಳಗಿಳಿದು ಮಗನನ್ನೂ ಕೆಳಗಿಳಿಸಿ ಮೊದಲಿನಂತೆ ನಡೆದುಕೊಂಡು ಹೋಗಲಾರಂಭಿಸಿದ!

ಕೆ ಎಸ್ ನರಸಿಂಹಸ್ವಾಮಿಯವರ ಕವನದ ಸಾಲಿನಂತೆ

**"ಚಳಿಗಾಲ ಬಂದಾಗ ಎಷ್ಟು ಚಳಿ ಎಂದರು..**

**ಬಂತಲ್ಲ ಬೇಸಿಗೆ ಕೆಟ್ಟ ಬಿಸಿಲೆಂದರು..**

**ನಿಂತರೆ ಕೇಳುವರು, ನೀನೇಕೆ ನಿಂತೆ?**

**ಮಲಗಿದರೆ ಗೊಣಗುವರು ನಿನಗಿಲ್ಲ ಚಿಂತೆ..**

**ಓಡಿದರೆ ಬೆನ್ನ ಹಿಂದೆಯೇ ಇವರ ಟೀಕೆ...**

**ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ!"**

ಈ ಪ್ರಪಂಚದಲ್ಲಿ ಎಲ್ಲರನ್ನೂ ಮೆಚ್ಚಿಸಿ ಜೀವನ ಮಾಡುವುದು ಅಸಾಧ್ಯ. ಹೀಗಾಗಿ ನಾವು ಮಾಡುವ ಕೆಲಸ ಸರಿ ಎಂದು ನಮಗನಿಸಿದರೆ ಬರುವ ಟೀಕೆಗಳಿಗೆ ಕಿವಿಗೊಡದೇ ನಿರ್ಲಿಪ್ತರಾಗಿ ಜೀವನ ಸಾಗಿಸುವುದೇ ಸೂಕ್ತ ಕ್ರಮ.

# 48. ಇನ್ನೂ ಅತ್ಯುತ್ತಮವಾದ್ದು ಹೊರ ಬರಲಿಕ್ಕಿದೆ

ಕನ್ನಡದ ಮೇರುನಟ, ಈ ನಾಡು ಕಂಡ ಅಪ್ರತಿಮ ಕಲಾವಿದ ರಾಜಕುಮಾರ್, ಸೌಜನ್ಯ ಹಾಗೂ ವಿನಯದ ಪ್ರತಿರೂಪ. 'ಏರಿದವನು ಚಿಕ್ಕವನಿರಬೇಕು' ಎನ್ನುವ ಕವಿವಾಣಿಗೆ ಅವರ ವ್ಯಕ್ತಿತ್ವ ಜ್ವಲಂತ ಉದಾಹರಣೆ. ರಾಜಕುಮಾರ್ ಅವರಿಗೆ ಜನಪ್ರಿಯ ಟಿವಿ ವಾಹಿನಿಯೊಂದು 'ವರ್ಷದ ಕನ್ನಡಿಗ' ಪ್ರಶಸ್ತಿಯನ್ನು ನೀಡಿ ಗೌರವಿಸಿತ್ತು. ಈ ಪ್ರಶಸ್ತಿ ಸ್ವೀಕರಿಸಿ ರಾಜಕುಮಾರ್ ರವರು ಆಡಿದ ಮಾತುಗಳು ಯಾವುದೇ ಕ್ಷೇತ್ರದಲ್ಲಾಗಲಿ ಸಾಧನೆಯನ್ನು ಮಾಡಬೇಕು ಎಂದಿರುವವರಿಗೆ ನಿಜಕ್ಕೂ ಮಾದರಿ ಹಾಗೂ ಪ್ರೇರಣಾದಾಯಕ.

'ನಿನ್ನಲ್ಲಿ ನೀನಾಗಬೇಕು ಎಂದು ನನ್ನ ತಂದೆಯವರು ಯಾವಾಗಲೂ ನನಗೆ ಹೇಳುತ್ತಿರುತ್ತಿದ್ದರು. ನಾನು ಇದುವರೆಗೂ 200ಕ್ಕೂ ಹೆಚ್ಚು ಚಲನಚಿತ್ರಗಳಲ್ಲಿ ಅಭಿನಯಿಸಿದ್ದೇನೆ. ಇದರಲ್ಲಿ ಯಾವ ಪಾತ್ರ ನಿಮಗೆ ತೃಪ್ತಿ ಕೊಟ್ಟಿದೆ ಎಂದು ಕೇಳಿದರೆ ಯಾವುದೂ ಇಲ್ಲ ಎಂಬುದೇ ನನ್ನ ಉತ್ತರ. ಅದರಲ್ಲಿ ಒಂದು ಮಟ್ಟಿಗೆ ಸಮಾಧಾನ ತಂದುಕೊಟ್ಟಿರುವ ಏಕೈಕ ಪಾತ್ರವೆಂದರೆ ಮಂತ್ರಾಲಯ ಮಹಾತ್ಮೆ ಚಿತ್ರದ ಗುರು ರಾಘವೇಂದ್ರ ಸ್ವಾಮಿಗಳ ಪಾತ್ರ. ನನ್ನ ಈ ಚಿತ್ರವನ್ನು ಮಾತ್ರ ನೋಡಿ ಎಂದು ನಾನು ಬೇರೆಯವರಿಗೆ ಹೇಳಿದ್ದೇನೆ. ಇತ್ತೀಚೆಗೆ ದೂರದರ್ಶನದಲ್ಲಿ ನಾನು ಅಭಿನಯಿಸಿದ ಚಿತ್ರಗಳನ್ನು ಹಾಕುತ್ತಿರುತ್ತಾರೆ. ಅವುಗಳನ್ನು ನೋಡುತ್ತಿರುವಾಗ ಅದರಲ್ಲಿ ನಾನು ಮಾಡಿದ ಪಾತ್ರಗಳಲ್ಲಿ ದೋಷಗಳೇ ಹೆಚ್ಚಾಗಿ ನನಗೆ ಕಾಣಿಸುತ್ತವೆ. ಹೀಗಾಗಿ ನನಗೇ ನಾಚಿಕೆಯಾಗಿ ಅರ್ಧಕ್ಕೇ ಸಿನಿಮಾ ನೋಡೋದನ್ನ ನಿಲ್ಲಿಸಿ ಒಳಗೆ ಹೋಗಿ ಬಿಡ್ತೇನೆ. ಆ ಪಾತ್ರಗಳಲ್ಲಿ ಇನ್ನಷ್ಟು ಒಳಹೊಕ್ಕು ಇನ್ನು ಚೆನ್ನಾಗಿ ಮಾಡಬಹುದಾಗಿತ್ತಲ್ಲ ಎಂಬ ಭಾವ ನನ್ನನ್ನು ಸದಾ ಕಾಡುತ್ತದೆ' ಎಂಬ ಅವರ

ಮನದಾಳದಿಂದ ಮೂಡಿಬಂದ ಮಾತುಗಳು ಬಹಳ ದೊಡ್ಡ ಸಂದೇಶವನ್ನು ಹೊಂದಿವೆ.

ನಾವು ಮಾಡುತ್ತಿರುವ ಕೆಲಸದಲ್ಲಿ ನಾವೆಲ್ಲವನ್ನೂ ಸಾಧಿಸಿ ಬಿಟ್ಟಿದ್ದೇವೆ, ಅದೇ ಸರ್ವಶ್ರೇಷ್ಠ ಎಂಬ ಭಾವನೆ ಮೂಡಿದರೆ ನಮ್ಮ ಕಾಯಕ ನಿಂತ ನೀರಾಗಿ ಬಿಡುತ್ತದೆ. **Best is yet to come** ಅಂದರೆ ನಮ್ಮ ಅತ್ಯುತ್ತಮವಾದದ್ದು ಇನ್ನು ಹೊರ ಬರಲಿಕ್ಕಿದೆ ಎಂಬ ಭಾವವೇ ಯಾವುದೇ ಕ್ಷೇತ್ರದಲ್ಲಿ ಯಾವುದೇ ವ್ಯಕ್ತಿಯನ್ನು ಸಾಧಕನನ್ನಾಗಿಸಬಲ್ಲದು.

ನಮ್ಮ ದೇಶದ ಇನ್ನೊಬ್ಬ ಅತ್ಯಂತ ಶ್ರೇಷ್ಠ ನಟ ಕಮಲ್ ಹಾಸನ್ ರವರು 'ನಮ್ಮ ದೇಶದಲ್ಲಿರುವ ನಿಜವಾದ ನಟನೆಂದರೆ ರಾಜಕುಮಾರ್ ಮಾತ್ರ' ಎಂಬುದಾಗಿ ರಾಜಕುಮಾರ್ ಅವರ ಪ್ರಶಂಸೆ ಮಾಡಿದ್ದರು. ನಾವು ಮಾಡಿದ್ದೇ ಸರ್ವಶ್ರೇಷ್ಠ ಎಂಬ ಅಹಂಕಾರದಿಂದ ಬೀಗುವ ಹಲವಾರು 'ಸೆಲೆಬ್ರಿಟಿ'ಗಳನ್ನು ನಾವಿಂದು ಬೇರೆ ಬೇರೆ ಕ್ಷೇತ್ರಗಳಲ್ಲಿ ನೋಡುತ್ತೇವೆ. ನಮ್ಮಂತೆ ಬೇರೆ ಯಾರೂ ಈ ಜಗತ್ತಿನಲ್ಲೇ ಇಲ್ಲ ಎಂಬಂತೆ ವರ್ತಿಸುವ ಇಂತಹ ಮಂದಿಯ ಮಧ್ಯೆ ಡಾ. ರಾಜ್ ಇಂದಿಗೂ ಧೃವತಾರೆಯಂತೆ ಹೊಳೆಯುತ್ತಾರೆ. ಯಾವುದೇ ಹಂತಕ್ಕೇರಿದರೂ ನಾವು ಮಾಡುವ ಕಾಯಕವನ್ನು ಇನ್ನಷ್ಟು ಚೆನ್ನಾಗಿ ಮಾಡಬೇಕೆಂಬ ಹಂಬಲವೇ ಸಾಧಾರಣರನ್ನೂ ಸಾಧಕರ ಮಟ್ಟಕ್ಕೇರಿಸುತ್ತದೆ.



# 49. ಹಿರಿಯರನ್ನು ಸದಾ ಗೌರವಿಸೋಣ

ರೈತನೊಬ್ಬ ತುಂಬಾ ಮುದುಕನಾಗಿದ್ದ. ಅವನಿಗೆ ಮೊದಲಿನಂತೆ ಹೊಲದಲ್ಲಿ ದುಡಿಯುವುದು ಸಾಧ್ಯವಾಗುತ್ತಿರಲಿಲ್ಲ. ಅವನ ಮಗ ಹೊಲದಲ್ಲಿ ಕೆಲಸ ಮಾಡುವಾಗ ಅಲ್ಲಿಯೇ ಸುಮ್ಮನೆ ನೋಡುತ್ತಾ ಕುಳಿತಿರುತ್ತಿದ್ದ. ಇದನ್ನು ನೋಡಿ ಮಗನಿಗೆ ತುಂಬಾ ಸಿಟ್ಟು ಬರುತ್ತಿತ್ತು. 'ಈ ಮುದುಕ ಅಪ್ರಯೋಜಕನಾಗಿ ಬಿಟ್ಟಿದ್ದಾನೆ' ಎಂದು ದಿನವೂ ತನ್ನ ತಂದೆಯನ್ನು ಬಯ್ಯುತ್ತಿದ್ದ. ಅವನಿಗೆ ದನಿಗೂಡಿಸುತ್ತಿದ್ದ ಅವನ ಹೆಂಡತಿ ಸಹ ದಿನವೂ 'ಈ ಮುದುಕನಿಗೊಂದು ಗತಿ ಕಾಣಿಸಿಬಿಡಿ' ಎಂದು ಹೇಳುತ್ತಿದ್ದಳು. ಒಂದುದಿನ ಯುವಕನ ಸಹನೆಯ ಕಟ್ಟೆಯೊಡೆಯಿತು. ಅವನು ಒಂದು ಮರದ ಶವಪೆಟ್ಟಿಗೆಯನ್ನು ಸಿದ್ಧಪಡಿಸಿದ. ಅಪ್ಪನ ಬಳಿ ಹೋಗಿ 'ಇದರೊಳಗೆ ಮಲಗಿಕೋ' ಎಂದು ಆಜ್ಞಾಪಿಸಿದ. ಮರು ಮಾತಾಡದೇ ಮುದುಕ ಅದರೊಳಗೆ ಮಲಗಿಕೊಂಡ. ಮಗ ಶವ ಪೆಟ್ಟಿಗೆಯನ್ನು ದರದರನೇ ಎಳೆದುಕೊಂಡು ತನ್ನ ಹೊಲದ ಪಕ್ಕದಲ್ಲಿದ್ದ ಬೆಟ್ಟವನ್ನೇರಿದ. ಬೆಟ್ಟದ ನೆತ್ತಿಯಿಂದ ಶವಪೆಟ್ಟಿಗೆಯನ್ನು ಅಪ್ಪನ ಸಮೇತ ಕೆಳಕ್ಕೆಸೆಯುವುದು ಅವನ ಉದ್ದೇಶವಾಗಿತ್ತು. ಇನ್ನೇನು ಅವನು ಆ ಕೆಲಸ ಮಾಡಬೇಕು ಎನ್ನುವಷ್ಟರಲ್ಲಿ ಒಳಗಿದ್ದ ಅಪ್ಪ, ಶವಪೆಟ್ಟಿಗೆ ಮುಚ್ಚಳವನ್ನು ನಿಧಾನವಾಗಿ ಬಡಿಯಲಾರಂಭಿಸಿದ. ಮುಚ್ಚಳ ತೆಗೆದು ಮಗ ಏನೆಂದು ಕೇಳಿದಾಗ, ಹಾಗೆಯೇ ಅಲ್ಲಿಯೇ ಮಲಗಿದ್ದ ಅಪ್ಪ, ಶಾಂತಚಿತ್ತತೆಯಿಂದಲೇ ಹೀಗೆಂದ 'ಮಗು ಈಗ ನೀನು ನನ್ನನ್ನು ಕೆಳಕ್ಕೆ ಎಸೆಯುತ್ತಿ ಎಂಬುದು ನನಗೆ ಚೆನ್ನಾಗಿ ಗೊತ್ತು. ಆದರೆ ನನ್ನದೊಂದು ಸಲಹೆ ಇದೆ ಹೇಳಲೇ?' ಎಂದು ಕೇಳಿದ. ಮಗ 'ಅದೇನು ಹೇಳು' ಎಂದಾಗ ಅಪ್ಪ ಹೀಗೆಂದ 'ಅಪ್ರಯೋಜಕನಾದ ನನ್ನನ್ನು ಮಾತ್ರ ಕೆಳಕ್ಕೆ ಎಸೆ. ಚೆನ್ನಾಗಿರುವ ಈ ಮರದ ಪೆಟ್ಟಿಗೆಯನ್ನು ಏಕೆ ಎಸೆಯುತ್ತೀ? ಅದು ಮುಂದೆ ನಿನ್ನ ಮಕ್ಕಳ ಉಪಯೋಗಕ್ಕೆ ಬರಬಹುದು' ಎಂದು ಹೇಳಿದ.

ಖ್ಯಾತ ನಾಟಕಕಾರ ಮಾಸ್ಟರ್ ಹಿರಣ್ಣಯ್ಯನವರು ತಮ್ಮ ಜನಪ್ರಿಯ ನಾಟಕವೊಂದರಲ್ಲಿ ಹೀಗೆನ್ನುತ್ತಿದ್ದರು, 'ನಾವು ನಮ್ಮ ಅಪ್ಪ ಅಮ್ಮಂದಿರಿಗೆ ಏನನ್ನು

ಮಾಡುತ್ತೇವೆಯೋ, ಮುಂದೆ ಅದನ್ನೇ ನಮ್ಮ ಮಕ್ಕಳು ನಮಗೆ ಮಾಡುತ್ತಾರೆ' ಎಂದು. ಮನೆಯಲ್ಲಿರುವ ವಯಸ್ಸಾದ ವೃದ್ಧರನ್ನು ನಿಷ್ಪ್ರಯೋಜಕರಂತೆ ಕಾಣುವ ಮಕ್ಕಳು, ಮುಂದೊಂದು ದಿನ ತಮಗೂ ಈ ಸ್ಥಿತಿ ಬರುವುದೆಂದು ಖಂಡಿತವಾಗಿಯೂ ಆಲೋಚಿಸಬೇಕು. ಬದುಕಿನುದ್ದಕ್ಕೂ ತಮ್ಮ ಸುಖ ಸಂತೋಷಗಳನ್ನು ಬಲಿಕೊಟ್ಟು ಮಕ್ಕಳ ಭವಿಷ್ಯಕ್ಕಾಗಿಯೇ ಹಗಲಿರುಳು ದುಡಿದ ಪೋಷಕರನ್ನು ಅವರ ವೃದ್ಧಾಪ್ಯದಲ್ಲಿ, ಅಸಹಾಯಕರಾಗಿರುವ ಬಾಳಿನ ಸಂಧ್ಯಾ ಸಮಯದಲ್ಲಿ ಮಕ್ಕಳು ಪ್ರೀತಿ ಗೌರವ ಸಹಾನುಭೂತಿಗಳಿಂದ ಖಂಡಿತ ನೋಡಬೇಕು. ಜೀವನವೆಂಬ ಚಕ್ರದಲ್ಲಿ ನಮ್ಮ ಹಿರಿಯರಿಗೆ ಬಂದ ಸ್ಥಿತಿ ನಮಗೂ ಬಂದೇ ಬರುತ್ತದೆ ಎಂಬ ಅರಿವು ನಮ್ಮಲ್ಲಿ ಇರಲೇಬೇಕು.



# 50. ಹೊಂದಾಣಿಕೆಯೇ ಹರುಷದ ಹಾದಿ

ಒಮ್ಮೆ ಮುಲ್ಲಾ ನಸ್ರುದ್ದೀನ್ ಬಳಿ ವ್ಯಕ್ತಿಯೊಬ್ಬ ಒಂದು ಸಮಸ್ಯೆಯನ್ನು ತಂದ. 'ನನ್ನ ಮನೆ ಬಹಳ ಚಿಕ್ಕದಿದೆ. ಇದರಲ್ಲಿ ನಾನು ನನ್ನ ಹೆಂಡತಿ ನಾಲ್ಕು ಮಕ್ಕಳು ನನ್ನ ತಂದೆ ತಾಯಿ ಅತ್ತೆ ಮಾವ ಎಲ್ಲ ವಾಸಿಸಬೇಕಾಗಿದೆ. ಅದರಲ್ಲಿ ಹೊಂದಿಕೊಂಡು ಹೋಗೋದು ಬಹಳ ಕಷ್ಟವಾಗುತ್ತಿದೆ ಏನು ಮಾಡಲಿ?' ಎಂಬುದೇ ಆ ವ್ಯಕ್ತಿಯ ಸಮಸ್ಯೆಯಾಗಿತ್ತು. ಆಗ ನಸ್ರುದ್ದೀನ್ 'ನಿನ್ನ ಮನೆಯಲ್ಲಿ ಒಂಟೆ ಇದೆಯೇ?' ಎಂದು ಪ್ರಶ್ನಿಸಿದ. ಆ ವ್ಯಕ್ತಿ 'ಹೌದು ಸ್ವಾಮಿ ಇದೆ' ಎಂದ. 'ಹಾಗಾದರೆ ಅದನ್ನು ಮನೆ ಒಳಗೆ ಕಟ್ಟಿ ಹಾಕು' ಎಂದು ಸಲಹೆ ಕೊಟ್ಟ. ಆ ವ್ಯಕ್ತಿ ಆಶ್ಚರ್ಯಚಕಿತನಾಗಿ 'ಸ್ವಾಮಿ, ನಾನು ಮನೆಯಲ್ಲಿ ತುಂಬಾ ಇಕ್ಕಟ್ಟಾಗಿದೆ ಎನ್ನುತ್ತಿದ್ದೇನೆ' ಎಂದು ತನ್ನ ಸಮಸ್ಯೆಯನ್ನು ಪುನರುಚ್ಚರಿಸಿದ. ಆಗ ಮುಲ್ಲಾ 'ನಿನ್ನ ಸಮಸ್ಯೆಗೆ ಪರಿಹಾರ ಬೇಕು ತಾನೆ? ಹಾಗಾದರೆ ಸುಮ್ಮನೆ ನಾನು ಹೇಳಿದಂತೆ ಕೇಳು' ಎಂದ.

ಮರುದಿನ ವ್ಯಕ್ತಿ ಓಡೋಡಿ ಬಂದು 'ಸ್ವಾಮಿ, ನನ್ನ ಸಮಸ್ಯೆ ಇನ್ನಷ್ಟು ಬಿಗಡಾಯಿಸಿದೆ' ಎಂದು ತನ್ನ ಅಳಲನ್ನು ತೋಡಿಕೊಂಡ. ನಸ್ರುದ್ದೀನ್ ಶಾಂತ ಚಿತ್ತದಿಂದ 'ನಿನ್ನ ಮನೆಯಲ್ಲಿ ಕುರಿ ಸಾಕಿದ್ದೀಯೋ?' ಎಂದು ಕೇಳಿದ. 'ಹೌದು ಸ್ವಾಮಿ, ನಾಲ್ಕು ಕುರಿಗಳಿವೆ' ಎಂಬ ಆ ವ್ಯಕ್ತಿಯ ಉತ್ತರಕ್ಕೆ 'ಹಾಗಾದರೆ ಅವನ್ನೂ ಮನೆ ಒಳಗೆ ಬಿಟ್ಟುಕೋ' ಎಂದು ಸಲಹೆ ಕೊಟ್ಟ ನಸ್ರುದ್ದೀನ್. ಸಲಹೆ ಕೇಳಲು ಬಂದ ವ್ಯಕ್ತಿಗೆ ಮತ್ತಷ್ಟು ತಲೆಬಿಸಿ ಆಯ್ತು. ಆದರೆ ನಾನು 'ಹೇಳಿದಷ್ಟು ಕೇಳು' ಎಂದು ಬೈದು ಕಳಿಸಿದ ಮುಲ್ಲಾ. ಹೀಗೆ ಮುಲ್ಲಾನ ಸಲಹೆಯಂತೆ ಮನೆಯ ಹೊರಗಿದ್ದ ಕೋಳಿ ಕತ್ತೆ ಹಸು ಎಲ್ಲವೂ ಆ ವ್ಯಕ್ತಿಯ ಮನೆಯೊಳಗೆ ಸೇರಿಕೊಂಡವು.

ಆ ವ್ಯಕ್ತಿ ಈಗ ಹುಚ್ಚನಾಗಿದ್ದ. ಓಡೋಡಿ ಬಂದು 'ಸ್ವಾಮೀ ನಾನು ನನ್ನ ಸಮಸ್ಯೆಗೆ ಪರಿಹಾರ ಕೇಳಿದರೆ ನೀವು ಅದನ್ನು ಬಿಗಡಾಯಿಸುತ್ತಿದ್ದೀರಿ. ಏನಾದರೂ ಮಾಡಿ ನನ್ನನ್ನು ಪಾರು ಮಾಡಿ' ಎಂದು ಗೋಳಿಡುತ್ತಾ ಬೇಡಿಕೊಂಡ. ಆಗ ನಸ್ರುದ್ದೀನ್ ನಸುನಗುತ್ತಾ 'ಈಗ ನೀನು ಒಳಗೆ ಬಿಟ್ಟುಕೊಂಡ ಪ್ರಾಣಿ

ಪಕ್ಷಿಗಳನ್ನೆಲ್ಲಾ ಮತ್ತೆ ಮನೆಯಿಂದ ಹೊರಗೆ ಕಳಿಸು. ಆಮೇಲೆ ಬಂದು ನನ್ನನ್ನು ಭೇಟಿಯಾಗು' ಎಂದ.

ಮರುದಿನ ವ್ಯಕ್ತಿ ತುಂಬಾ ಖುಷಿಯಾಗಿ ಬಂದು 'ಸ್ವಾಮೀ ಎಷ್ಟು ಅದ್ಭುತವಾಗಿದೆ ತಮ್ಮ ಸಲಹೆ! ನೀವು ಹೇಳಿದಂತೆ ಮನೆ ಒಳಗೆ ತಂದು ಕಟ್ಟಿ ಹಾಕಿದ್ದ ಪ್ರಾಣಿ ಪಕ್ಷಿಗಳನ್ನೆಲ್ಲಾ ಹೊರಗೆ ಬಿಟ್ಟೆ. ಈಗ ನನ್ನ ಮನೆ ಬಹಳ ವಿಶಾಲ ಎನಿಸುತ್ತಿದೆ. ಅದರಲ್ಲಿ ನಾನು ನನ್ನ ಹೆಂಡತಿ ನಾಲ್ಕು ಜನ ಮಕ್ಕಳು ಅಪ್ಪ ಅಮ್ಮ ಅತ್ತೆ ಮಾವ ಎಲ್ಲ ಆರಾಮಾಗಿದ್ದೀವಿ' ಎಂದು ನುಡಿದ. ಹೊಂದಾಣಿಕೆ ಎಂಬುದು ಮನಸ್ಸಿನ ಒಂದು ಸುಂದರ ಸ್ಥಿತಿ. ಇರುವ ಸಮಸ್ಯೆಗೆ ಮನಸ್ಸನ್ನು ಹೊಂದಿಸಿಕೊಂಡು ಬಿಟ್ಟರೆ ಅದು ಸಮಸ್ಯೆಯಂತೆ ಗೋಚರಿಸುವುದೇ ಇಲ್ಲ. ಎಷ್ಟೋ ಬಾರಿ ಕುಟುಂಬದ ಪ್ರತಿಯೊಬ್ಬರಿಗೂ ವಿಶಾಲ ಕೋಣೆಯ ಮನೆಯನ್ನು ಹೊಂದಿರುವ ಮಂದಿಗಿಂತ, ಮಳೆ ಗಾಳಿ ಚಳಿಗಳನ್ನು ಲೆಕ್ಕಿಸದೆ ಬಯಲಲ್ಲಿಯೇ ಪುಟಾಣಿ ಬಿಡಾರ ಹೂಡಿರುವ ಅಲೆಮಾರಿಗಳು ತಮ್ಮ ದೊಡ್ಡ ಸಂಸಾರದೊಂದಿಗೆ ಸಂತೋಷದಿಂದ ಇರುತ್ತಾರೆ. ನೆಮ್ಮದಿ ಎಂಬುದು ಮನೆಯ ವಿಸ್ತಾರಕ್ಕಿಂತ ಹೆಚ್ಚಾಗಿ ಮನಸ್ಸಿನ ವಿಸ್ತಾರದಲ್ಲಿರುತ್ತದೆ ಎಂಬುದು ಬಲ್ಲವರ ಅಂಬೋಣ.

# 51. ಆಗೋದೆಲ್ಲಾ ಒಳ್ಳೇದಕ್ಕೆ



ಒಂದೂರಿನಲ್ಲಿ ಒಬ್ಬ ರಾಜನಿದ್ದ. ಅವನಿಗೆ ಒಬ್ಬ ಬುದ್ಧಿವಂತನಾದ ಮಂತ್ರಿಯಿದ್ದ. ಸದಾ ರಾಜನ ಜೊತೆಗೆ ಇರುತ್ತಿದ್ದ ಮಂತ್ರಿ, ಯಾವಾಗಲೂ ಏನೇ ಆಗಲಿ 'ಆಗೋದೆಲ್ಲ ಒಳ್ಳೇದಕ್ಕೆ' ಎನ್ನುತ್ತಿದ್ದ. ಒಮ್ಮೆ ರಾಜ ಮಂತ್ರಿಯೊಂದಿಗೆ ಕಾಡಿಗೆ ಬೇಟೆಯಾಡಲು ಹೋಗಿದ್ದ. ಆಗ ಕಾಡುಮೃಗವೊಂದು ರಾಜನ ಮೇಲೆ ದಾಳಿ ಮಾಡಿತು. ಈ ಸಂದರ್ಭದಲ್ಲಿ ರಾಜನ ಕೈಯ ಒಂದು ಬೆರಳು ತುಂಡಾಗಿ ಬಿಟ್ಟಿತು. ಆಗ ಅಲ್ಲಿದ್ದ ಮಂತ್ರಿ ಯಥಾಪ್ರಕಾರ 'ಆಗೋದೆಲ್ಲಾ ಒಳ್ಳೆಯದಕ್ಕೆ' ಎಂದ. ತನ್ನ ಕೈಬೆರಳು ಕತ್ತರಿಸಿ ರಕ್ತ ಸುರಿಯುತ್ತಿದ್ದರೂ ಈತ ಆಗೋದಿಲ್ಲ ಒಳ್ಳೇದಕ್ಕೆ ಎಂದು ಹೇಳುತ್ತಿದ್ದಾನಲ್ಲ ಎಂದು ರಾಜನಿಗೆ ವಿಪರೀತ ಸಿಟ್ಟು ಬಂತು. ತಕ್ಷಣ ತನ್ನ ಭಟರನ್ನು ಕರೆಸಿ ಮಂತ್ರಿಯನ್ನು ಸೆರೆಮನೆಗಟ್ಟಿದ. ಇದಾದ ಕೆಲದಿನಗಳಲ್ಲಿ ರಾಜ ಮತ್ತೆ ಬೇಟೆಗೆಂದು ಕಾಡಿಗೆ ಹೋದ. ಈ ಬಾರಿ ಕಾಡುಮನುಷ್ಯರು ರಾಜನನ್ನು ತಮ್ಮ ದೇವಿಗೆ ನರಬಲಿ ಕೊಡಲು ಹೊತ್ತೊಯ್ದರು.

ದೇವಿಯ ಮುಂದೆ ಬಲಿಪೀಠದಲ್ಲಿ ರಾಜನನ್ನು ಕುಳ್ಳಿರಿಸಿ ಇನ್ನೇನು ಅವನ ಕತ್ತನ್ನು ಕತ್ತರಿಸಬೇಕು ಅಷ್ಟರಲ್ಲಿ ಅವನ ಕೈ ಬೆರಳು ತುಂಡಾಗಿದ್ದು ಅವರ ಕಣ್ಣಿಗೆ ಬಿತ್ತು. ದೇಹದ ಯಾವುದೇ ಭಾಗದಲ್ಲಿ ಸ್ವಲ್ಪ ಊನವಿದ್ದರೂ ಅಂತಹ ವ್ಯಕ್ತಿ ಬಲಿಗೆ

ಸೂಕ್ತನಲ್ಲ ಎಂಬುದು ಅವರ ನಂಬಿಕೆ. ಹಾಗೇನಾದರೂ ಆದಲ್ಲಿ ದೇವಿ ಶಾಪ ಕೊಟ್ಟುಬಿಡುತ್ತಾಳೆ ಎಂಬ ಭಯ ಅವರದ್ದು. ಹೀಗಾಗಿ ಅವರು ರಾಜನನ್ನು ಬಿಟ್ಟುಬಿಟ್ಟರು. ಬದುಕಿದೆಯಾ ಬಡಜೀವವೇ ಎಂದು ರಾಜ ಅಲ್ಲಿಂದ ಪರಾರಿಯಾದ. ರಾಜಧಾನಿಗೆ ಮರಳಿದವನೇ ತನ್ನ ಭಟರಿಗೆ ತಕ್ಷಣ ಮಂತ್ರಿಯನ್ನು ಸೆರೆಮನೆಯಿಂದ ಬಿಡುಗಡೆ ಮಾಡಿ ಕರೆದು ತರುವಂತೆ ಅಜ್ಞಾಪಿಸಿದ. ಮಂತ್ರಿ ಬಂದೊಡನೆಯೇ ಅವನನ್ನು ಬಿಗಿದಪ್ಪಿದ ರಾಜ, 'ನೀನು ಹೇಳಿದ್ದು ನೂರಕ್ಕೆ ನೂರು ಸರಿ. ಆಗೋದೆಲ್ಲಾ ಒಳ್ಳೇದಕ್ಕೆ. ಅಂದು ನನ್ನ ಕೈ ಬೆರಳು ಕತ್ತರಿಸಿ ಹೋಗಿದ್ದರಿಂದಲೇ ನಾನಿಂದು ಜೀವಂತವಾಗಿ ಮರಳಿ ಬಂದಿದ್ದೇನೆ. ಆದರೆ ಒಂದೇ ಬೇಸರ.. ನಿನ್ನನ್ನು ವೃಥಾ ಸೆರೆಮನೆಗೆ ತಳ್ಳಿದೆನಲ್ಲಾ' ಎಂದು ನುಡಿದ.

ಆಗ ಮಂತ್ರಿ ನಗುತ್ತಾ ಹೇಳಿದ 'ಮಹಾರಾಜರೇ, ಆಗೋದೆಲ್ಲಾ ಒಳ್ಳೇದಕ್ಕೆ. ನೀವು ನನ್ನನ್ನು ಸೆರೆಮನೆಗೆ ನೂಕದಿದ್ದರೆ ನಾನೂ ಸಹ ಈ ಬಾರಿಯೂ ನಿಮ್ಮ ಜೊತೆ ಬೇಟೆಗೆ ಬರುತ್ತಿದ್ದೆ. ಸದಾ ನಿಮ್ಮೊಂದಿಗೆ ಇರುತ್ತಿದ್ದ ನನ್ನನ್ನು ಸಹಾ ಕಾಡುಮನುಷ್ಯರು ಹೊತ್ತೊಯ್ಯುತ್ತಿದ್ದರು. ಬೆರಳು ಊನವಾಗಿದೆ ಎಂದು ನಿಮ್ಮನ್ನು ಬಿಟ್ಟ ಅವರು, ಎಲ್ಲ ಅಂಗಾಂಗಗಳು ಸರಿಯಾಗಿರುವ ನನ್ನನ್ನು ಖಂಡಿತಾ ದೇವಿಗೆ ಬಲಿಕೊಡುತ್ತಿದ್ದರು' ಎಂದು ನುಡಿದ.

**"ಬರದಿರುವುದರ ಎಣಿಕೆಯಲಿ ಬಂದಿರುವುದ ಮರೆಯದಿರು...**

**ಗುರುತಿಸು ಒಳಿತಿರುವುದನು ಕೇಡುಗಳ ನಡುವೆ..**

**ಇರುವ ಭಾಗ್ಯವ ನೆನೆದು ಬಾರನೆಂಬುದ ಬಿಡು**

**ಹರುಷಕ್ಕಿದೆ ದಾರಿ- ಮಂಕುತಿಮ್ಮ"**

ಎಂಬ ಡಿವಿಜಿಯವರ ಕಗ್ಗದ ಸಾಲುಗಳಂತೆ ನಮಗೆ ಯಾವುದು ಲಭಿಸಿಲ್ಲವೋ ಅದರ ಬಗ್ಗೆ ಕೊರಗುವುದರ ಬದಲು ನಮ್ಮ ಬಳಿ ಏನಿದೆಯೋ ಅದನ್ನು ನೋಡಿ ಸಂತೋಷಪಡುವುದೇ ಒಳಿತು. ಹಾಗೆಯೇ ಕೇಡುಗಳ ನಡುವೆಯೂ ಒಳಿತಿರುತ್ತದೆ. ಸಂಕಷ್ಟಗಳ ಕಾರ್ಮೋಡಗಳ ನಡುವೆಯೂ ಸಂತಸದ ಬೆಳ್ಳಿ ರೇಖೆ ಇರುತ್ತದೆ. ಕತ್ತಲಿನಾಚೆಗೆ ಬೆಳಕಿರುತ್ತದೆ ಎಂದುಕೊಂಡು ಆಗೋದೆಲ್ಲಾ ಒಳ್ಳೆಯದಕ್ಕೆ ಎಂದು ಚಿಂತಿಸುತ್ತಾ ಬದುಕುವುದೇ ಹರುಷದ ನಿಜವಾದ ಹಾದಿ.

# 52. ಹಳಸದಿರಲಿ ಸಂಬಂಧಗಳು

ಟೆಕ್ಕಿ ದಂಪತಿಗಳು ಮದುವೆಯಾದ ಮೂರೇ ತಿಂಗಳಿಗೆ ವಿಚ್ಛೇದನಕ್ಕೆ ಅರ್ಜಿ ಹಾಕಿದರು. ಕೌಟುಂಬಿಕ ಕೋರ್ಟಿನ ಜಡ್ಜ್ ಕೇಳಿದ್ರು, 'ಮದುವೆಯಾಗಿ ಇನ್ನೂ ಮೂರು ತಿಂಗಳಾಗಿಲ್ಲ. ಆಗ್ಲೇ ವಿಚ್ಛೇದನಕ್ಕೆ ಅರ್ಜಿ ಹಾಕಿದ್ದೀರಲ್ಲಾ? ಏನಪ್ಪ ಸಮಸ್ಯೆ?' ಆಗ ಗಂಡ ಹೇಳಿದ 'ಸ್ವಾಮೀ ನನ್ನ ಹೆಂಡತಿಗೆ ಶಿಸ್ತಿಲ್ಲ'. ಅದನ್ನು ಕೇಳಿ ನ್ಯಾಯಾಧೀಶರಿಗೆ ನಗು ಬಂತು. 'ಅಲ್ಲಪ್ಪ ಶಿಸ್ತಿಲ್ಲ ಅನ್ನೋದಕ್ಕೆ ನೀನಾಗಿರೋದು ಮದುವೆ ಕಣಯ್ಯ. ನೀನೇನು ಆರ್ಮಿಗೋ, ಪೋಲೀಸಿಗೋ ರಿಕ್ರೂಟ್ ಮಾಡ್ತಿದ್ದೀಯಾ? ಸರಿ, ಶಿಸ್ತಿಲ್ಲ ಅಂತೀಯಲ್ಲ ಅದು ಹೇಗೆ ಅಂತ ವಿವರಿಸಿ ಹೇಳು' ಎಂದು ಕೇಳಿದರು. ಆಗ ಪತಿರಾಯ 'ಸ್ವಾಮೀ ನನ್ನ ಹೆಂಡತಿ ಟೂತ್ ಪೇಸ್ಟನ್ನು ಮಧ್ಯದಿಂದ ಒತ್ತುತ್ತಾಳೆ' ಎಂದು ಹೇಳಿದ. ಇದನ್ನು ಕೇಳಿದ ಜಡ್ಜ್ ಸಾಹೇಬರಿಗೆ ನಗು ತಡೆಯಲಿಕ್ಕಾಗಲಿಲ್ಲ. 'ಅಲ್ಲಪ್ಪಾ ಕೇವಲ 20 ರೂಪಾಯಿ ಟೂತ್ ಪೇಸ್ಟಿಗಾಗಿ ನಿಮ್ಮ ದಾಂಪತ್ಯವನ್ನೇ ಮುರೀಲಿಕ್ಕೆ ಹೊರಟಿದ್ದೀರಲ್ಲ? ಒಂದು ಕೆಲಸ ಮಾಡಿ.. ನಿಮ್ಮನೆಗೆ ಎರಡು ಪೇಸ್ಟು ತನ್ನಿ. ನಿನಗೆ ಬೇಕಾದ ಕಡೆಗೆ ನಿನ್ನ ಪೇಸ್ಟಲ್ಲಿ ನೀನು ಒತ್ಕೋ.. ನಿನ್ನ ಹೆಂಡತಿಗೆ ಬೇಕಾದ ಕಡೇಗೆ  ಅವಳ ಪೇಸ್ಟಲ್ಲಿ ಅವಳು ಒತ್ತಿಕೊಳ್ಳಲಿ' ಎಂಬ ಸಲಹೆ ನೀಡಿದರು!

ಈ ಸಲಹೆಯನ್ನು ಆ ದಂಪತಿಗಳು ಪಾಲಿಸಿದ್ರೋ ಇಲ್ಲವೋ ಗೊತ್ತಿಲ್ಲ, ಈ ನಿದರ್ಶನ ಇಂದಿನ ದಿನಗಳಲ್ಲಿ ಸಂಬಂಧಗಳ ಸ್ಥಿತಿಗತಿಯನ್ನಂತೂ ಬಹಳ ಸ್ಪಷ್ಟವಾಗಿ ಹೇಳುತ್ತದೆ. **'ಎಷ್ಟು ಕಷ್ಟವೋ ಹೊಂದಿಕೆ ಎಂಬುದು ನಾಲ್ಕು ದಿನದ ಈ ಬದುಕಿನಲಿ'** ಎಂಬ ಜಿ.ಎಸ್.ಶಿವರುದ್ರಪ್ಪನವರ ಕವಿತೆಯ ಸಾಲಿನಂತೆ ಸಂಬಂಧಗಳು ಇಂದು ಹೊಂದಾಣಿಕೆಯ ಕೊರತೆಯಿಂದ ಹಳಸುತ್ತಿವೆ. ಸಾಂಸಾರಿಕ ಸಂಬಂಧದಲ್ಲಿ ಸಂಗಾತಿ ಪ್ರತಿಯೊಂದು ವಿಚಾರದಲ್ಲೂ ಪರಿಪೂರ್ಣವಾಗಿ ಇರಬೇಕೆಂದು ನಿರೀಕ್ಷಿಸುವುದು ತಪ್ಪಲ್ಲವೇ? ಇತ್ತೀಚೆಗಷ್ಟೇ ನಿವೃತ್ತರಾದ ನಮ್ಮ ಪರಿಚಿತ ದಂಪತಿಯ ಮಕ್ಕಳಿಬ್ಬರೂ ಸಾಫ್ಟ್ವೇರ್ ಇಂಜಿನಿಯರ್ ಗಳು. ಅವರವರ ಸಂಸಾರಗಳೊಂದಿಗೆ ಬೆಂಗಳೂರಿನಲ್ಲಿದ್ದಾರೆ.

ಮೊನ್ನೆ ಆ ವಯೋವೃದ್ಧರು 'ನಾಡಿದ್ದು ನನ್ನ ಮೊಮ್ಮಗನ ಐದನೇ ವರ್ಷದ ಹುಟ್ಟಿದ ಹಬ್ಬ. ಅದನ್ನ ಸಿಂಗಾಪುರ್ ನಲ್ಲಿ ಆಚರಿಸ್ತಾರಂತೆ' ಎಂದು ಹೇಳಿದರು. ಆಗ ನಾನು 'ನೀವು ಹೋಗ್ತೀರಾ ಸಾರ್?' ಎಂದು ಕೇಳಿದೆ. ಅದಕ್ಕವರು 'ಅಯ್ಯೋ ನೀವೊಳ್ಳೆ! ಗಂಡ ಹೆಂಡತಿ ಮಗ ಹೋಗಿ ಸೆಲೆಬ್ರೇಟ್ ಮಾಡಿಕೊಂಡು ಬರ್ತಾರೆ' ಎಂದು ನುಡಿದರು. ಅದೆಲ್ಲೇ ಇರಬಹುದು ಮೂರೇ ಜನ ಅದೇನು ಸಂಭ್ರಮಿಸುತ್ತಾರೆ ಅಂತ ನನಗನ್ನಿಸಿತು. ಹುಟ್ಟಿದ ದಿನವನ್ನು ಅಜ್ಜ-ಅಜ್ಜಿ, ಅತ್ತೆ- ಮಾವ, ಚಿಕ್ಕಪ್ಪ- ಚಿಕ್ಕಮ್ಮ, ಎಲ್ಲ ಸೇರಿಕೊಂಡು ಜೊತೆಯಾಗಿ ಆಚರಿಸಿದಾಗ ಮಾತ್ರ ತಾನೇ ಅದು ಹಬ್ಬ ಆಗೋದು? ಬರೀ ನಾವಷ್ಟೇ ಕೇಕ್ ಕತ್ತರಿಸಿಕೊಂಡು ಅದನ್ನು ಒಬ್ಬರ ಬಾಯಿಗೆ ಇನ್ನೊಬ್ಬರು ತುರುಕಿಸಿಕೊಳ್ಳುವ ಫೋಟೋಗಳನ್ನು ಫೇಸ್ಬುಕ್, ಇನ್ಸ್ಟಾಗ್ರಾಮ್ ವಾಟ್ಸಾಪ್ ಗಳಲ್ಲಿ ಅಪ್ಲೋಡ್ ಮಾಡಿದರೆ ಅದು ಒಂದು ಸಂಭ್ರಮವೇ? ಹೀಗಾಗಿ ಬದುಕು ಎಷ್ಟೇ ಆಧುನಿಕವಾಗಲಿ, ಸಂಬಂಧಗಳಲ್ಲಿ ಹಳೆತನದ ಸವಿ ಇರಲೇಬೇಕು. ಅದು ಎಂದಿಗೂ ಹಳಸದಂತೆ ನಾವು ಕಾಪಾಡಿಕೊಳ್ಳಬೇಕು. ಆಗಲೇ ಬದುಕು **'ಸಮರಸದ ಜೀವನ'**ವಾಗಲು ಸಾಧ್ಯ.



# 53. ಮನದ ಧೂಳನ್ನು ಮೊದಲು ಒರೆಸಿಕೊಳ್ಳೋಣ



ಅಪಾರ್ಟ್ಮೆಂಟ್ ಒಂದಕ್ಕೆ ನವದಂಪತಿಗಳು ಬಾಡಿಗೆಗೆ ಬಂದರು. ಮನೆಯ ಕಿಟಕಿಯ ದೊಡ್ಡಗಾಜಿನಿಂದ ಎದುರು ಮನೆಯ ಹಿಂಬದಿ ಸ್ಪಷ್ಟವಾಗಿ ಕಾಣಿಸುತ್ತಿತ್ತು. ಎದುರು ಮನೆಯಾಕೆ ಬಟ್ಟೆ ತೊಳೆದು ಅದನ್ನು ಒಣಹಾಕಿದ್ದರು. ಅದನ್ನು ನೋಡಿದ ಪತ್ನಿ, 'ಎಷ್ಟು ಕೆಟ್ಟದಾಗಿ ಬಟ್ಟೆ ಒಗೆದಿದ್ದಾಳೆ, ಒಂದೋ ಅವಳಿಗೆ ಬಟ್ಟೆ ಒಗೆಯೋಕೆ ಸರಿಯಾಗಿ ಬರಲ್ಲ ಅಥವಾ ಅವಳು ಬಳಸುವ ಸೋಪ್ ಸರಿ ಇಲ್ಲ' ಎಂದಳು. ಪತಿ ಮೌನವಾಗಿದ್ದ. ದಿನ ಎದ್ದಾಗಲೂ ಅದೇ ದೃಶ್ಯ, ಹೆಂಡತಿಯಿಂದ ಅದೇ ಕಾಮೆಂಟ್! ಒಂದು ತಿಂಗಳು ಅದೇ ದೃಶ್ಯಾವಳಿ, ಪತ್ನಿಯಿಂದ ಅದೇ ಹೇಳಿಕೆ, ಪತಿಯದು ಅದೇ ಮೌನ! 31ನೇ ದಿನ ಹೆಂಡತಿ ನೋಡುತ್ತಾಳೆ, ಎದುರು ಮನೆಯಾಕೆ, ಒಣ ಹಾಕಿದ್ದ ಬಟ್ಟೆ ಬಹಳ ಶುಭ್ರವಾಗಿ ಕಾಣಿಸುತ್ತಿದೆ! ಆಗ ಹೆಂಡತಿ "ಹಾ! ಈ ದಿನ ಬಟ್ಟೆ ಶುಭ್ರವಾಗಿ ಕಾಣಿಸುತ್ತಿದೆ. ಒಂದೋ ಆಕೆ ಬಟ್ಟೆ ಒಗೆಯುವುದನ್ನು ಕಲಿತಿದ್ದಾಳೆ ಅಥವಾ ಆಕೆ ತನ್ನ ಸೋಪನ್ನು ಬದಲಾಯಿಸಿದ್ದಾಳೆ" ಎಂದು ಉದ್ಗರಿಸಿದಳು. ಆಗ ಮೌನ ಮುರಿದ ಪತಿ, "ಎರಡೂ ಅಲ್ಲ, ನಾನು ನಮ್ಮ ಮನೆಯ ಕಿಟಕಿಯ ಗಾಜಿನ

ಮೇಲೆ ಅಂಟಿದ್ದ ಧೂಳನ್ನು ಒರೆಸಿದ್ದೇನೆ" ನಮ್ಮ ಕಣ್ಣಪೊರೆಯಿಂದಾಗಿ ಹೊರಗಿನ ದೃಶ್ಯ ಸರಿಯಾಗಿ ಗೋಚರಿಸದಿದ್ದಾಗ ನಾವು ನಮ್ಮ ದೃಷ್ಟಿದೋಷವನ್ನು ಮೊದಲು ಸರಿಪಡಿಸಿಕೊಳ್ಳಬೇಕೇ ಹೊರತು, ದೃಶ್ಯವೇ ಸರಿಯಾಗಿಲ್ಲ ಎಂದು ದೂಷಿಸುವುದಲ್ಲ. ನಾವು ಸರಿಯಿದ್ದಾಗ ನಮಗೆ ಜಗತ್ತು ಸರಿಯಾಗಿ ಕಾಣಿಸುತ್ತದೆ. ನಾವು ಇನ್ನೊಬ್ಬರತ್ತ ತಪ್ಪು ಎಂದು ಬೆರಳು ಮಾಡುವಾಗ ಉಳಿದ ನಾಲ್ಕು ಬೆರಳುಗಳು ನಮ್ಮ ಕಡೆಗೇ ಮುಖ ಮಾಡಿಕೊಂಡು ತಪ್ಪಿನಲ್ಲಿ ನಮ್ಮ ಪಾಲೂ ಇದೆ ಎಂದು ಸಾರಿ ಹೇಳುತ್ತಿರುತ್ತವೆ ಎಂಬುದನ್ನು ನಾವು ಎಂದಿಗೂ ಮರೆಯಬಾರದು.

**'ಪರರ ತಪ್ಪನೊಂದನು ಜನರು ದೂಷಿಪರಲ್ತೆ**

**ತಮ್ಮ ಸಾವಿರ ತಪ್ಪನ್ನು ಮರೆತು**

**ನಿನ್ನ ಬಾಲದೊಳೊಂದು ತೂತಿದೆ ಎಂದಂತೆ**

**ಸಾರಣೆಯು ಸೂಜಿಯನ್ನು ಕುರಿತು'**

ಎನ್ನುತ್ತಾರೆ, ಹಿರಿಯಕವಿ ಎಸ್.ವಿ.ಪರಮೇಶ್ವರಭಟ್ಟರು, ತಮ್ಮ ಮುಕ್ತಕಗಳ ಸಂಗ್ರಹ, **'ಇಂದ್ರಚಾಪ'** ದಲ್ಲಿ. ತನ್ನ ಮೈತುಂಬ ತೂತಿರುವ ಸಾರಣೆ, ಸೂಜಿಯ ಬಳಿ 'ನಿನ್ನ ಬಾಲದಲ್ಲಿ ತೂತಿದೆ' ಎಂದು ದೂಷಿಸುವಂತೆ ನಾವೂ ಸಹ ನಮ್ಮ ಸಾವಿರ ತಪ್ಪನ್ನು ಮರೆತು, ಇನ್ನೊಬ್ಬರ ತಪ್ಪನ್ನು ಕಂಡುಹಿಡಿಯುತ್ತೇವೆ. ಬೇರೆಯವರ ತಪ್ಪನ್ನು ಎತ್ತಿ ಆಡಲು ಸಿಗುವ ಯಾವ ಅವಕಾಶವನ್ನು ಬಿಡದ ನಾವು, ನಮ್ಮ ತಪ್ಪುಗಳನ್ನು ಗುರುತಿಸುವ ಹಾಗೂ ತಿದ್ದಿಕೊಳ್ಳುವ ಪ್ರಯತ್ನವನ್ನು ಪ್ರಾಮಾಣಿಕವಾಗಿ ಮಾಡುವುದೇ ಇಲ್ಲ.

'ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ' ಎಂಬುದಾಗಿ ಬಸವಣ್ಣನವರು, ಪರರನ್ನು ದೂಷಿಸುವುದು ಹಾಗೂ ತಮ್ಮನ್ನು ತಾವೇ ಸರಿ ಎಂದು ಬಣ್ಣಿಸಿಕೊಳ್ಳುವುದು ಮಹಾಪಾತಕಗಳೆಂದು ಗುರುತಿಸುತ್ತಾರೆ. ಇನ್ನೊಬ್ಬರ ತಪ್ಪನ್ನು ನಿಂದಿಸುವುದರಲ್ಲೇ ಸಮಯ ವ್ಯಯ ಮಾಡುವುದರ ಬದಲು ನಮ್ಮ ತಪ್ಪುಗಳನ್ನು ಗುರುತಿಸಿಕೊಂಡು ತಿದ್ದಿಕೊಳ್ಳಲು ಪ್ರಯತ್ನಿಸುವುದೇ ಆತ್ಮೋನ್ನತಿಯ ಸರಿಯಾದ ಪಥ.

**ಎಡವದೆಯೆ ಮೈ ಗಾಯವಡೆಯದೆಯೆ ಮಗುವಾರು**

**ನಡೆಯ ಕಲಿತವನು? ಮತಿನೀತಿಗತಿಯಂತು||**

**ತಡವರಿಸಿ ಮುಗ್ಗರಿಸಿ ಬಿದ್ದು ಮತ್ತೆದ್ದು ಮೈ-|**

**ದಡವಿಕೊಳುವವರೆಲ್ಲ-ಮಂಕುತಿಮ್ಮ||**

ಎಂಬ ಡಿವಿಜಿ ಅವರ ಕಗ್ಗದ ಸಾಲುಗಳಂತೆ ಎಲ್ಲರೂ ಎಡವಿ ಗಾಯ ಮಾಡಿಕೊಂಡು, ತಡವರಿಸಿ ಮುಗ್ಗರಿಸಿ ಬಿದ್ದು ಮತ್ತೆ ಎದ್ದೇ ನಡೆಯನ್ನು ಕಲಿತಿದ್ದು. ಹೀಗಾಗಿ ಎಲ್ಲರೂ ತಪ್ಪು ಮಾಡುವುದು ಸಹಜ. ಆದರೆ ಆ ತಪ್ಪು ಮರುಕಳಿಸದಂತೆ ಜಾಗೃತರಾಗುವವರು ಸಾಧಕರಾಗುತ್ತಾರೆ. ತಾನೆಂದೂ ತಪ್ಪು ಮಾಡುವುದಿಲ್ಲ ಎಂದು ಭಾವಿಸಿಕೊಂಡು ಬೇರೆಯವರದೇ ತಪ್ಪು ಎಂದು ಹಳಹಳಿಸುವುದು ನಕಾರಾತ್ಮಕ ಧೋರಣೆ. ನಮ್ಮನ್ನು ನಾವು ಸದಾ ಸರಿ ಎಂದು ಭಾವಿಸಿಕೊಳ್ಳುವುದರ ಬದಲು ನಾವು ಎಲ್ಲೆಲ್ಲಿ ಎಡವುತ್ತಿದ್ದೇವೆ ಎಂಬ ಸ್ವಯಂ ವಿಮರ್ಶೆ ಮಾಡಿಕೊಂಡಾಗ ನಮ್ಮ ಕಿಟಕಿಗೆ ಅಂಟಿದ ಧೂಳು, ನಮ್ಮ ಕಣ್ಣಿಗೆ ಕಾಣಿಸುತ್ತದೆ. ಅದನ್ನು ಸ್ವಚ್ಛಗೊಳಿಸಿಕೊಂಡಾಗ ಈ ಜಗತ್ತು ಸ್ಪಷ್ಟವಾಗಿ ಗೋಚರಿಸುತ್ತದೆ.